ಸಂಪುಟ 19 ಸಂಚಿಕೆ 2
ಆಗಸ್ಟ್-ಸೆಪ್ಟೆಂಬರ್ 2025

ಪವಿತ್ರಾತ್ಮಭರಿತ, ಪವಿತ್ರಾತ್ಮ ಪ್ರೇರಿತ ಹಾಗೂ ಸರ್ವಾರ್ಪಿತ ಶಿಷ್ಯರ ಸಮುದಾಯ

A SPIRIT-FILLED & SPIRIT-LED COMMUNITY OF RADICAL DISCIPLES

# ಸಿಂಚನ

ಮನೆ ಮನೆಗೆ ದೈವಾನುಗ್ರಹದ ಹನಿ ಹನಿ

BIMONTHLY MAGAZINE OF GULBARGA DIOCESE

ಗುಲ್ಬರ್ಗ ಧರ್ಮಕ್ಷೇತ್ರದ ದ್ವೈಮಾಸಿಕ ಪತ್ರಿಕೆ



## ಮೇಡೇ ಮೇಡೇ ಮೇಡೇ

### ರಕ್ಷಣೆಗಾಗಿ ನೆರವಾಗಲು ಮೊರೆಯಿಡುವ ಅಸಹಾಯಕ ದನಿ

'ಸ್ವಾಮಿ, ಕಾಪಾಡಿ. ನಾವು ನೀರುಪಾಲಾಗುತ್ತಿದ್ದೇವೆ,' –(ಮತ್ತಾಯ 8:25)

## ಧರ್ಮಾಧ್ಯಕ್ಷರ ಸಂದೇಶ



ಪ್ರಿಯ ಸಹೋದರ ಸಹೋದರಿಯರೇ,

ನಿಮಗೆಲ್ಲರಿಗೂ ಜೈ ಕ್ರಿಸ್ತ್,

ಕೆಲವು ದಿನಗಳ ಹಿಂದೆ ಅಹಮದಾಬಾದ್‌ನಲ್ಲಿ ಸಂಭವಿಸಿದ ಭೀಕರ ವಿಮಾನ ಅಪಘಾತದ ವೇಳೆ, ಅಂತಿಮವಾಗಿ ಕೇಳಿಸಿದ ಒಂದು ಶಬ್ದ ಇಡೀ ಜಗತ್ತಿನ ನಡಿಗೆ ನಿಲ್ಲಿಸಿತು – Mayday! Mayday!. ಮೃತರಾದ ಎಲ್ಲಾ ಪ್ರಯಾಣಿಕರಿಗೆ ದೇವರು ತನ್ನ ಸ್ವರ್ಗರಾಜ್ಯಕ್ಕೆ ಸೇರಿಸಲಿ ಇದು ವೈಮಾನಿಕ ತುರ್ತು ಸೂಚನೆ ಮಾತ್ರವಲ್ಲ, ಇದು ಬದುಕು ಉಳಿಸಿಕೊಳ್ಳಲು ಆತ್ಮದಿಂದ ಹೊರಬರುತ್ತಿರುವ ಒಂದು ಆಳವಾದ ಮೊರೆ. ಪ್ರತೀ ಮಾನವನ ಆತ್ಮ, ಪ್ರಕೃತಿಯ ಸ್ಪಂದನೆ, ಸಂಸ್ಥೆಗಳ ಧ್ವನಿ, ಕುಟುಂಬಗಳ ವೇದನೆ, ವಿಶ್ವಾಸದ ಕುಸಿತ – ಎಲ್ಲವೂ ತನ್ನ ತಮ್ಮದೇ ಭಾಷೆಯಲ್ಲಿ ಕಂಪಿಸುತ್ತಿರುವ ಧ್ವನಿ: "Mayday! ಸ್ವಾಮಿ, ನಮ್ಮನ್ನು ರಕ್ಷಿಸು!"

ಪೇತ್ರನು ಸಮುದ್ರದ ನೀರಿನ ಮೇಲಿಂದ ನಡೆದು ಬರುತ್ತಿದ್ದಾಗ ಅಲೆಗಳು ಜೋರಾಗಿ ಬರುತಿದದ್ದನ್ನು ಗಮಸಿದಾಗ ಆತನು ಯೇಸುವಿನಲ್ಲಿ ಕೇಂದ್ರೀಕರಿಸಲ್ಪಟ್ಟ ದೃಷ್ಟಿಯನ್ನು ತೆಗೆದುಕೊಂಡ. ವಿಶ್ವಾಸಿಸುವ ಬದಲು ಭಯವನ್ನು ಆವರಿಸಿಕೊಂಡ. ಅದೇ ಸಂದರ್ಭದಲ್ಲಿ ಅವನು ಕೂಗಿದನು – "ಸ್ವಾಮಿ, ನನ್ನನ್ನು ರಕ್ಷಿಸು! ನನ್ನ ವಿಶ್ವಾಸವನ್ನು ಬಲಪಡಿಸು" ಅಂದರೆ ನಮ್ಮೆಲ್ಲರ ಮೊರೆ, ಆತ್ಮದ ಆಳದಿಂದ ಹೊರಬರುವ **"Mayday!"** "ಸ್ವಾಮಿ, ನನ್ನನ್ನು ರಕ್ಷಿಸು!

ಇದು ಕೂಗು ಕೇವಲ ಪೇತ್ರನ ಕೂಗಲ್ಲ, ನಮ್ಮ ಕೂಗು ಕೂಡ ಹೌದು. ಪಾಪದ ಕೊಳದಲ್ಲಿ ಮುಳುಗುತ್ತಿರುವಾಗ, ಆತ್ಮದ ಶುದ್ಧತೆಯ ದಿಕ್ಕು ತಪ್ಪಿಸಿಕೊಳ್ಳುತ್ತಿರುವಾಗ, ನಮ್ಮೊಳಗೆ ಕೇಳಿಸುವ ಶಬ್ದ – Mayday! ಇಂದು ನಾಶವಾಗುತ್ತಿರುವ ಪ್ರಕೃತಿಯೇ ಕೂಗುತ್ತಿದೆ. ಆದುದರಿಂದ ಹಸಿರು ಜೂಬಿಲಿ ಆಚರಿಸಿ ಪ್ರಕೃತಿಯ ಮೊರೆಗೆ ನೆರವಾಗುವ ಪ್ರಯತ್ನ. ಇತ್ತೀಚೆಗಷ್ಟೆ ನಮ್ಮ ಧರ್ಮಕ್ಷೇತ್ರದ ವಿಶ್ವಾಸದಲ್ಲಿ ಇದೇ ಕೂಗು ಕೇಳಿ ಬರುತ್ತಿದೆ. ಭಕ್ತಜನರ ವಿಶ್ವಾಸವನ್ನು ಬಲಪಡಿಸಲು ಪಾಲನಾ ಯೋಜನೆಯ ತರಬೇತಿ ನಡೆದಿತ್ತು. ನಮ್ಮ ಗುರುಗಳಲ್ಲಿ, ಕನ್ಯಾಭಗಿನಿಯರಲ್ಲಿ ಹೊಸ ಉತ್ಸಾಹ, ಸ್ಪಷ್ಟ ದಿಕ್ಕು, ಮತ್ತು ಸಂವಹನದ ಚೈತನ್ಯ ಮೂಡಿದೆ. ಈ ತರಬೇತಿಯಿಂದ ಧರ್ಮಸಭೆಯ ಚಟುವಟಿಕೆಗಳು ಸಮರ್ಪಿತವಾಗಿರಲಿ, ಪ್ರಭಾವಶೀಲವಾಗಿರಲಿ, ಎಲ್ಲ ಪಾಲನಾ ಪರಿಷದ್ ಸದಸ್ಯರ ಪಾಲ್ಗೊಳ್ಳುವಿಕೆ ಹೆಚ್ಚಲಿ ಎನ್ನುವ ಉದ್ದೇಶದಿಂದ ನಡೆಯಿತು. ಇದು ಕೇವಲ ತರಭೇತಿಯಲ್ಲ, ಧರ್ಮಸಭೆಯ ಜೀವಂತಿಕೆಯ ಹೊಸ ಅಧ್ಯಾಯ. ನಮ್ಮ ಯುವಕರು ಮಾರ್ಗದರ್ಶನ ಬೇಕೆಂದು ಕೂಗುತ್ತಿದ್ದಾರೆ. ನಮ್ಮ ಕುಟುಂಬಗಳು ಹಳ್ಳಿಯಲ್ಲಿ ವಿಶ್ವಾಸಕ್ಕಾಗಿ, ಗುರುಗಳಿಗಾಗಿ ಕೂಗುತ್ತಿವೆ.

ನಮ್ಮ ವಿದ್ಯಾಸಂಸ್ಥೆಗಳು ಉತ್ತಮ ಮೌಲ್ಯಭರಿತ ಶಿಕ್ಷಣಕ್ಕಾಗಿ ಮೊರೆಯಿಡುತ್ತಿವೆ. ಈಗ ಯೇಸು ಕ್ರಿಸ್ತರು ಕೇಳುತ್ತಿದ್ದಾರೆ – "ನಿನಗೆ ನಾನು ಕೈ ಚಾಚಿದರೆ, ನೀನು ನನ್ನ ಜೊತೆ ಸಾಗುವೆಯಾ?"

ಮಾತೆ ಮರಿಯಳು ನಮಗೆ ಪ್ರೇರಣೆ. ಆಕೆ ಸ್ವೀಕರಿಸಿದ ಸ್ವಾತಂತ್ರ್ಯ ಆಕೆಯನ್ನು ವಿಶ್ವಾಸದಲ್ಲಿ ಬೆಳೆಸಿ, ಶರೀರ ಮತ್ತು ಆತ್ಮದೊಡನೆ ಸ್ವರ್ಗಾರೋಹಣದ ಮಹಿಮೆಗೆ ಪಾತ್ರಳಾಗುವಂತೆ ಮಾಡಿತು. ಮಾತೆ ಮರಿಯಳು ಗಳಿಸಿಕೊಂಡ ವಿಶ್ವಾಸ, ನಾವು ಒಪ್ಪಿಕೊಳ್ಳಬೇಕಾದ್ದು. ಯಾಕೆಂದರೆ ಇಂದು ನಾವು ಆತ್ಮದ ಆಳದ ಮೊರೆ ಕೇಳುತ್ತಿದ್ದೇವೆ. ಪ್ರತ್ಯುತ್ತರ ಕೊಡುವ ಧರ್ಮಸಭೆಯ ಜವಾಬ್ದಾರಿ ಇನ್ನಷ್ಟು ಬೆಳೆಯಬೇಕು.

ನಮ್ಮ ಧರ್ಮಸಭೆಯು ಕೇವಲ ಸಂಸ್ಥೆಯಾಗಿ ಉಳಿಯಬಾರದು. ಅದು ಆತ್ಮಕ್ಕೆ ಆಶ್ರಯವಾಗಬೇಕು. ಒತ್ತಡದ ಬದುಕಿನಲ್ಲಿ ಶಾಂತಿಯ ತಾಣವಾಗಬೇಕು. ಭಕ್ತಿಯಲ್ಲೂ, ಕಾರ್ಯಕ್ಷಮತೆಯಲ್ಲೂ ನಮ್ಮ ಸಭೆಗಳು ಪ್ರಜ್ವಲಿಸಬೇಕು.

**ಅಂತ್ಯದಲ್ಲಿ ನನ್ನ ಮನದಾಳದ ಪ್ರಾರ್ಥನೆ:** ಸ್ವಾಮಿ, ನಮ್ಮನ್ನು ರಕ್ಷಿಸು. ಧರ್ಮಕ್ಷೇತ್ರದ ಪ್ರತಿಯೊಬ್ಬ ಸದಸ್ಯರ ನಡಿಗೆಗೆ ನೀವೆ ಬೆಳಕು ನೀಡಿರಿ. Mayday – ನಮ್ಮ ಆತ್ಮದ ಮೊರೆ ಆಗಲಿ.

ಕೊನೆಯ ಮಾತು ಈ ದಿನಗಳಲ್ಲಿ ನಡೆಯುತ್ತಿರುವ ಜೂಬಿಲಿ ಆಚರಣೆಗಳು ನಮ್ಮ ಸಮುದಾಯಗಳಲ್ಲಿ ಹೊಸ ಚೈತನ್ಯವನ್ನು ತುಂಬಲಿ ಇನ್ನು ಕೆಲವೇ ದಿನಗಳಲ್ಲಿ ಅಗಸ್ಟ್ 2 ರಂದು ನಡೆಯಲಿರುವ ಕಥೋಲಿಕ ಕ್ರೈಸ್ತ ನಾಯಕರ ಸಮಾವೇಶಕ್ಕೆ ಎಲ್ಲಾ ಪಾಲನಾ ಪರಿಷತ್ತುಗಳ ಸದಸ್ಯರಿಗೆ ಆರ್ಥಿಕ ಸಮಿತಿ ಸದಸ್ಯರಿಗೆ ಹಾಗೂ ಹಳ್ಳಿಗಳಲ್ಲಿನ ಪಾಲನಾ ಸಮಿತಿ ಸದಸ್ಯರಿಗೆ ಆತ್ಮೀಯ ಸ್ವಾಗತವನ್ನು ಕೋರುತ್ತೇನೆ.

**ಪ್ರೀತಿ ಆಶೀರ್ವಾದಗಳೊಂದಿಗೆ**

**ಕ್ರಿಸ್ತನಲ್ಲಿ ಪ್ರೀತಿಯಿಂದ,**

+ R Miranda

**ಪೂಜ್ಯ ರಾಬರ್ಟ್ ಮಿರಾಂದ**

**ಧರ್ಮಾಧ್ಯಕ್ಷರು, ಕೃಪಾಲಯ, ಧರ್ಮಾಧ್ಯಕ್ಷರ ನಿವಾಸ**

# ಸಿಂಚನ

ಗುಲ್ಬರ್ಗ ಧರ್ಮಕ್ಷೇತ್ರದ ದ್ವೈಮಾಸಿಕ ಪತ್ರಿಕೆ



**ಅಧ್ಯಕ್ಷರು:**

**ಪೂಜ್ಯ ರಾಬರ್ಟ್ ಮಿರಾಂದ**

ಧರ್ಮಾಧ್ಯಕ್ಷರು, ಗುಲ್ಬರ್ಗ ಧರ್ಮಕ್ಷೇತ್ರ

**ಸಂಪಾದಕರು**

ಫಾ ರೋಶನ್ ಡಿ'ಸೋಜ

**ಸಹ ಸಂಪಾದಕರು**

ಸಿ. ಪ್ರಿಯಾ ಡಿ'ಸೋಜ ಎ.ಸಿ

**ಸಂಪಾದಕೀಯ ಮಂಡಳಿ**

ಫಾ. ಆರೋನ್ ವಾಸ್

ಫಾ. ದೀಪಕ್ ಘುಟ್ತಾದೊ

ಸಿ. ಜೇನ್ ಪಾಯ್ಸ್ ಬೆಥನಿ

ಸಿ. ಲೋವಿಟ ಸಿ.ಎಸ್.ಎಸ್.ಟಿ.

ಸಿ. ರೋಸ್ಲಿನ್ ಹೆಚ್.ಎಂ.ಆರ್.

ಶ್ರೀ ಸಿಮೋನ್, ಭಾಲ್ಕಿ



ಮುದ್ರಣ : ಡೆಕ್ಕನ್ ಪ್ರಿಂಟರ್ಸ್

ನಂ. ಸಿ–431, ಪೀಣ್ಯ 1ನೇ ಹಂತ,

ಪೀಣ್ಯ ಪೊಲೀಸ್ ಠಾಣೆ ಹಿಂಭಾಗ,

ಪೀಣ್ಯ, ಬೆಂಗಳೂರು – 560 058.

deccandata1999@gmail.com

Ph.: 080-23721533

ಪ್ರಕಾಶಕರು : ಪ್ರೇಮವಾಣಿ

ಸಂಪರ್ಕ ಮಾಧ್ಯಮ ಆಯೋಗ,

ಗುಲ್ಬರ್ಗ ಧರ್ಮಕ್ಷೇತ್ರ



The Editor

Sinchana Monthly

Kripalaya - Bishop's House,

Kotnoor (D) Village, Nandikoor P.O.,

Jewargi Rd, Kalaburagi - 585102

E-mail: dioceseofgulbarga@gmail.com

Website: www.gulbargadiocese.org


# ಒಳನೋಟ


ಧರ್ಮಾಧ್ಯಕ್ಷರ ಸಂದೇಶ

ನಿಮಿಷಾ ಪ್ರಿಯಾ: ಜೀವನ ಒಂದು ಎಚ್ಚರಿಕೆಯ ಕಥೆ 02

ರಕ್ಷಣೆಗಾಗಿ ನೆರವಾಗಲು ಮೊರೆಯಿಡುವ ಅಸಹಾಯಕ ದನಿ 03

ನಮ್ಮನ್ನು ರಕ್ಷಿಸಿರಿ ಸ್ವಾಮಿ 04

ಮೇಡೇ – ಸಮಾಜದ ಧ್ವನಿಯತ್ತ ನಮ್ಮ ಸ್ಪಂಧನೆ 05

ಆತ್ಮದ ಮೊರೆ – ನರಕದ ಬೆಂಕಿಯಿಂದ ಸ್ವರ್ಗದ ಸನ್ನಿಧಿಯತ್ತ 07

ಮೇಡೇ – ಜ್ಞಾನದ ಸಂಪತ್ತಿಗಾಗಿ ಮೊರೆಯಿಡುವ ಶಕ್ತಿ 09

ಮೇಡೇ – ಪ್ರಕೃತಿಯ ಆಸರೆಗೆ ಸೃಷ್ಟಿಯ ಕರೆ 11

ಕ್ರೈಸ್ತ ಕುಟುಂಬಗಳು, ಪರಮ ತ್ರಿತ್ವದ ಪ್ರತಿಬಿಂಬಗಳು 13

ಪ್ರಾರ್ಥನೆ ಮಾತ್ರವೇ ಕುಟುಂಬವನ್ನು ರಕ್ಷಿಸಬಹುದು 15

ಋತುಪರ್ಣ ಸುಂಧರಿಯ ಸೀತಾಫಲ 17

ವಿಶ್ವಾಸದ ಪಯಣದಲ್ಲಿ ಸಮುದ್ರದ ಅಲೆಗಳು 19

ಕ್ರಿಸ್ತಾಶ್ರಮ, ಕೌಡಿಯಾಳ್ ಧರ್ಮ ಕೇಂದ್ರ 21

ದೈವಾರಾಧನೆಯ ಪ್ರಮುಖ ತತ್ವಗಳು 23

ಸುದ್ದಿ ಸಿಂಚನ 25



## Advertisement Tariff For Sinchana




| | |
|---|---|
| Back Page (Outer) – Multi-Color: | ₹ 6,300 |
| Back Page (Inner): | ₹ 5,250 |
| Inner Page – Black and White (Full Page): | ₹ 2,200 |
| Inner Page – Black and White (Half Page): | ₹ 1,150 |



ಸಿಮೋನ್, ಭಾಲ್ಕಿ

## ನಿಮಿಷಾ ಪ್ರಿಯಾ: ಜೀವನ ಒಂದು ಎಚ್ಚರಿಕೆಯ ಕಥೆ

ನಿಮಿಷಾ ಪ್ರಿಯಾ, ಕೇರಳದ ಎರ್ಮನಾದ ನಿವಾಸಿಯಾಗಿದ್ದು, ಯೆಮೆನ್‌ನ ಸರ್ಕಾರಿ ಆಸ್ಪತ್ರೆಯಲ್ಲಿ 2008ರಿಂದಲೇ ನರ್ಸ್ ಆಗಿ ಕೆಲಸ ಮಾಡುತ್ತಿದ್ದರು. ಕೆಲವರ್ಷಗಳ ನಂತರ ತಮ್ಮ ಬದುಕನ್ನು ಸುಧಾರಿಸಲು, ತಮ್ಮದೇ ಆದ ಕ್ಲಿನಿಕ್ ಅನ್ನು ಪ್ರಾರಂಭಿಸಲು ಬಯಸಿದರು. ಆದರೆ ಯೆಮೆನ್‌ನಲ್ಲಿ ಸ್ಥಳೀಯ ವ್ಯಕ್ತಿಯ ಸಹಭಾಗಿತ್ವವಿಲ್ಲದೆ ವಿದೇಶಿಯೊಬ್ಬರು ಕ್ಲಿನಿಕ್ ಆರಂಭಿಸಲು ಸಾಧ್ಯವಿಲ್ಲ ಎಂಬ ನಿಯಮವಿತ್ತು. ಈ ಹಿನ್ನೆಲೆಯಲ್ಲಿ ಅವರು ತಲಾಲ್ ಅಬ್ದೊ ಮಹದಿ ಎಂಬ ಯೆಮೆನ್ ನಾಗರಿಕನ ಸಹಾಯದಿಂದ ಕ್ಲಿನಿಕ್ ಆರಂಭಿಸಿದರು.

ಆದರೆ ಈ ವ್ಯಾಪಾರ ಸಂಬಂಧಗಳು ಹತಾಶೆಯತ್ತ ದಾರಿ ತೋಡಿದವು. ತಲಾಲ್ ಅವರು ನಿಮಿಷಾ ಅವರ ಪಾಸ್‌ಪೋರ್ಟ್ ವಶಕ್ಕೆ ತೆಗೆದುಕೊಂಡು, ಆಕೆಯ ಮೇಲೆ ಮಾನಸಿಕ ಮತ್ತು ದೈಹಿಕ ಹಿಂಸಾಚಾರ ನಡೆಸಿದರು. ವರದಿಗಳ ಪ್ರಕಾರ, ಅವರು ಆಕೆಯ ಮೇಲೆ ಲೈಂಗಿಕ ಶೋಷಣೆಯನ್ನೂ ನಡೆಸಿದರು. ಈ ಸ್ಥಿತಿಯಲ್ಲಿ ನಿಮಿಷಾ ಹಲವು ಬಾರಿ ಯೆಮೆನ್ ಅಧಿಕಾರಿಗಳಿಗೆ ದೂರು ನೀಡಿದ್ದರು, ಆದರೆ ತಲಾಲ್‌ಗೆ ಅಧಿಕಾರಿಗಳ ಬೆಂಬಲ ಇದ್ದ ಕಾರಣ, ನ್ಯಾಯ ಸಿಕ್ಕಿಲ್ಲ. ಆಕೆಗೆ ದೇಶ ತೊರೆದು ಮನೆಗೆ ಹಿಂದಿರುಗುವ ಆಸೆ ಇದ್ದರೂ ತಲಾಲ್ ಆಕೆಯ ಪಾಸ್‌ಪೋರ್ಟ್ ಹಿಡಿದುಕೊಂಡಿದ್ದ ಕಾರಣ, ಆಕೆಯೇನು ಮಾಡಲಾರದ ಸ್ಥಿತಿಗೆ ಬಿದ್ದಿದ್ದರು.

2017ರಲ್ಲಿ ನಡೆದ ಘಟನೆ ಎದ್ದುಕೊಳ್ಳೋಣ. ತಲಾಲ್ ಮತ್ತೊಮ್ಮೆ ಆಕೆಯ ನಿವಾಸಕ್ಕೆ ಬಂದು ಆಕೆಯನ್ನು ಪೀಡಿಸುತ್ತಿದ್ದಾಗ, ಆತಂಕಗೊಂಡ ನಿಮಿಷಾ ಪ್ರಿಯಾ ತಲಾಲ್‌ಗಾಗಿ ನಿದ್ದೆ ಹಾಸುವ ಔಷಧಿ ಹಾಕಿದ ಊಟ ನೀಡಿದ್ರು. ಆದರೆ ಈ ಔಷಧಿ ತೀವ್ರ ಪರಿಣಾಮ ಉಂಟುಮಾಡಿ, ತಲಾಲ್ ಸತ್ತನು. ಪಿತೃತ್ವದ, ಆತಂಕದ, ಮುಟ್ಟಿನ ಪರಿಸ್ಥಿತಿಯಲ್ಲಿ ಆಕೆಯು ಮೃತದೇಹವನ್ನು ತುಂಡಾಗಿ ಕತ್ತರಿಸಿ ಶವಪೆಟ್ಟಿಗೆಯಲ್ಲಿ ಹಾಕಿದಳು. ಈ ಎಲ್ಲಾ ಕೃತ್ಯಗಳು ಆಕೆಯ ಸಹೋದ್ಯೋಗಿ ವಡಕಂಚೇರಿಯ ರಾಫೇಲ್ ಸಹಾಯದಿಂದ ನಡೆದವು.

ಆಕೆಯನ್ನು ಬಂಧಿಸಿ, 2020ರಲ್ಲಿ ಯೆಮೆನ್‌ನ ನ್ಯಾಯಾಲಯವು ಮರಣದಂಡನೆ ವಿಧಿಸಿತು. ಆದರೆ ಈ ಪ್ರಕರಣಕ್ಕೆ ಇನ್ನೊಂದು ಅಂಶವಿದೆ. ಯೆಮೆನ್ ಶರೀಯತ್ ಕಾನೂನಿನ ಪ್ರಕಾರ, "ಕಿಸಾಸ್" ಅಥವಾ "ದಿಯಾ" ನಿಯಮವಿದೆ – ಅಂದರೆ ಮೃತನ ಕುಟುಂಬ ಕ್ಷಮಿಸಿದರೆ ಅಥವಾ ರಕ್ತದ ಹಣ (ದಿಯಾ) ಒಪ್ಪಿಕೊಂಡರೆ ಮರಣದಂಡನೆಯು ತಡೆಯಬಹುದು.

ನಿಮಿಷಾ ಅವರ ತಾಯಿ ಮತ್ತು ಕುಟುಂಬದವರು ಇದಕ್ಕಾಗಿ ಹಣ ಸಂಗ್ರಹಿಸಲು ಅಂತರರಾಷ್ಟ್ರೀಯ ಸಹಾಯವನ್ನು ಕೇಳುತ್ತಿದ್ದಾರೆ. ತಮ್ಮ ಮಗಳ ಜೀವ ಉಳಿಸಲು ಭಾರತದ ಸರ್ಕಾರ, ಮಾನವ ಹಕ್ಕು ಸಂಘಟನೆಗಳು ಮತ್ತು ಹಲವರು ಸ್ಪಂದಿಸಿದ್ದಾರೆ. 2025 ಜುಲೈ 16ರಂದು ಮರಣದಂಡನೆಯು ನಿಗದಿಯಾಗಿದ್ದರೂ, ಕೆಲ ಮನವಿಯನ್ನೊಳಗೊಂಡ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ. ನಿಮಿಷಾ ಪ್ರಿಯಾರವರಿಗೆ "ಕಿಸಾಸ್" ಮರಣ ದಂಡನೆಯನ್ನು ತಪ್ಪಿಸಲು "ಬ್ಲಡ್ ಮನಿ" (ರಕ್ತಪರಿಹಾರ ಧನ) ಸುಮಾರು ₹8 ರಿಂದ ₹8.5 ಕೋಟಿ ರೂಪಾಯಿಗಳನ್ನು "ದಿಯಾ" (ಪರಿಹಾರ ಹಣದ ಆಧಾರದ ಮೇಲೆ ಕ್ಷಮೆ) ನಿಡಿ ಬಿಡುಗಡೆಮಾಡುವುದಾಗಿ ತೀರ್ಪು ನೀಡಲಾಯಿತು.

ಈ ಘಟನೆಯು ಕೇವಲ ಕಾನೂನು ಪ್ರಶ್ನೆಯಲ್ಲ. ಇದು ಒಬ್ಬ ಮಹಿಳೆ ಬದುಕುಳಿಯಲು, ತನ್ನ ಅರ್ಥಿಕ ಹಾಗೂ ಮಾನಸಿಕ

ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಲು ನಡೆಸಿದ ಹೋರಾಟದ ಸಂಕಟಮಯ ಕಥೆ. ಇನ್ನೂ ನಾವು ಕೇಳಬೇಕಾದ ಪ್ರಶ್ನೆ ಅಂದರೆ – ನೀವು ಎಷ್ಟು ದೂರವರೆಗೂ ಬಲಾತ್ಕಾರ, ಅಪಮಾನ, ಮತ್ತು ಅನ್ಯಾಯವನ್ನು ಸಹಿಸುತ್ತೀರಿ? ನಿಮಿಷಾ ಪ್ರಿಯಾ ಹಂತಕೆಯಾಗಿದ್ದಾಳೆ ಎಂಬುದಕ್ಕಿಂತ, ಅವಳ ಜೀವನ ಒಂದು ಎಚ್ಚರಿಕೆಯ ಕಥೆ.

**ಸಂಪಾದಕೀಯ**

# ರಕ್ಷಣೆಗಾಗಿ ನೆರವಾಗಲು ಮೊರೆಯಿಡುವ ಅಸಹಾಯಕ ದನಿ



ಫಾ ರೋಶನ್ ಡಿ'ಸೋಜ

2025ರ ಜೂನ್ 12ರಂದು ಲಂಡನ್‌ನಿಗೆ ಹೋರಡುವ ಏರ್ ಇಂಡಿಯಾ ವಿಮಾನ AI–171 ಅಹ್ಮದಾಬಾದಿನಲ್ಲಿ ಭೀಕರವಾಗಿ ಅಪಘಾತಕ್ಕೀಡಾಯಿತು. ಈ ಸಂದರ್ಭದಲ್ಲಿ "ಮೇಡೇ ಮೇಡೇ " ಎಂಬ ತುರ್ತು ಕರೆಯ ಸ್ವರ ಎಲ್ಲಾ ದಿನಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿತ್ತು. ಈ ಸ್ವರವು ನನಗೆ ಆಧ್ಯಾತ್ಮಿಕವಾಗಿ ಅನೇಕ ಬಾರಿ ನನ್ನ ಆತ್ಮದಲ್ಲಿ ಕಂಪಿಸುತಿತ್ತು. ಆದುದರಿಂದ ಈ ಸಂಚಿಕೆಯನ್ನು ಮೇಡೇ ಕೂಗಿನತ್ತ ಕಿವಿ ಆಯಿಸಲು ಸಣ್ಣ ಪ್ರಯತ್ನ. ಮೌನದಿಂದ ಧ್ಯಾನಿಸಿದರೆ ನಮ್ಮ ವಿಶ್ವಾಸ, ನಮ್ಮ ಕುಟುಂಬಗಳು, ಶಿಕ್ಷಣ ಸಂಸ್ಥೆಗಳು, ಪ್ರಕೃತಿಯು ಮತ್ತಿತರ ಆಸಾಯಕ ಸ್ವರಗಳು ಸಹಾಯಕ್ಕಾಗಿ ಕೂಗುತ್ತಿವೆ. ಈ ಸಂಕೇತಾತ್ಮಕ "ಮೇಡೇ" ನಮ್ಮನ್ನು ಎಚ್ಚರಿಕೆಗೆ ತರಬೇಕಾದ ಘಂಟೆಯಾಗಿದೆ.

**ವಿಶ್ವಾಸದ ಮೇಡೇ:** ವಿಶ್ವಾಸದ ಜೀವನವು ಇಂದು ಆಚರಣೆಗಷ್ಟೇ ಸೀಮಿತವಾಗುತ್ತಿದೆ. ದೇವರ ಜೊತೆಗಿನ ಸಂಬಂಧ ನಿಲ್ಲುತ್ತಿದ್ದಂತೆ, ವಿಶ್ವಾಸದ ನೌಕೆ ದಿಕ್ಕು ತಪ್ಪುತ್ತಿದೆ. ಪ್ರಾರ್ಥನೆಗಳಿಲ್ಲದ ಮನೆಗಳು, ದೇವಾಲಯಕ್ಕೆ ಹೋಗದೇ ಇರುವ ಯುವಕರು, ಧರ್ಮಪಾಠವಿಲ್ಲದ ಮಕ್ಕಳ ಜೀವನ – ಇವೆಲ್ಲವೂ ನಮ್ಮ ವಿಶ್ವಾಸದ ತುರ್ತುಸ್ಥಿತಿಗೆ ಸಾಕ್ಷಿಯಾಗಿದೆ. ಈ ಸಂದರ್ಭ ನಾವು ಮತ್ತೆ ಜೀವಂತ ನಂಬಿಕೆಗೆ ಹಿಂದಿರುಗಬೇಕು. ಪ್ರಾರ್ಥನೆ, ಪರಿಶುದ್ಧ ಆಚಾರಗಳು, ಇತರರಿಗೆ ಪ್ರೀತಿಯಿಂದ ಸೇವೆ – ಈ ಎಲ್ಲವುಗಳು ನಂಬಿಕೆಗೆ ಜೀವ ನೀಡುತ್ತವೆ.

**ಕುಟುಂಬದ ಮೇಡೇ:** ಕುಟುಂಬ ಎಂದರೆ ನಂಬಿಕೆಯ ಮೊಟ್ಟಮೊದಲ ಗೃಹವಿದ್ಯಾಲಯ. ಆದರೆ ಇಂದು ಸಂವಹನ ಕಳೆದು, ಪ್ರಾರ್ಥನೆಯ ಬಿತ್ತನೆ ಬಾಡಿಹೋಗಿದೆ. ಡಿಜಿಟಲ್ ಪ್ರಪಂಚದಲ್ಲಿ ಮುಳುಗಿರುವ ಮಕ್ಕಳು, ಕೆಲಸದ ಒತ್ತಡದಲ್ಲಿ ಬಿದ್ದ ಪೋಷಕರು – ಕುಟುಂಬದ ಸಮತೋಲನವನ್ನು ಕೆಡಿಸುತ್ತಿದ್ದಾರೆ. ಈ ಸಂದರ್ಭ, ಒಂದಾಗಿ ಊಟ ಮಾಡುವುದು, ಪ್ರಾರ್ಥನೆ ಮಾಡುವುದು, ಪರಸ್ಪರ ಸಮಯ ನೀಡುವುದು – ಇವು ಕುಟುಂಬವನ್ನು ಪುನಃ ಜೀವಂತಗೊಳಿಸಬಲ್ಲವು.

**ಶಿಕ್ಷಣ ಕ್ಷೇತ್ರದ ಮೇಡೇ:** ಇಂದಿನ ಶಿಕ್ಷಣ ವ್ಯಾಪಾರಿಕ ತಳಹದಿಯ ಮೇಲೆ ಸ್ಥಾಪಿತವಾಗಿದೆ. ಮೌಲ್ಯಶೂನ್ಯ ಶಿಕ್ಷಣದಿಂದ ವಿದ್ಯಾರ್ಥಿಗಳು ಮಾನವೀಯತೆಯನ್ನು ಕಳೆದುಕೊಳ್ಳುತ್ತಿದ್ದಾರೆ. ಶಿಕ್ಷಣ ಸಂಸ್ಥೆಗಳು ಫಲಿತಾಂಶಕ್ಕೆ ಗುರಿಯಾಗಿರುವ ಬದಲಾಗಿ ಮೌಲ್ಯ ಬಿತ್ತನೆಗೆ ಕೇಂದ್ರವಾಗಬೇಕು. ಶಿಕ್ಷಕರು ಮಾರ್ಗದರ್ಶಕರಾಗಬೇಕು, ವಿದ್ಯಾರ್ಥಿಗಳು ಸಾಮಾಜಿಕ ಜವಾಬ್ದಾರಿಯುತ ಜೀವಿಗಳಾಗಬೇಕು.

**ಪರಿಸರದ ಮೇಡೇ:** ಪ್ರಕೃತಿಯ ಸಹಜತೆಯ ಮೇಲಿನ ಮಾನವ ಅಕ್ರಮಗಳು ಪರಿಸರವನ್ನು ವಿನಾಶದ ಕಿತ್ತೊರೆಗೆ ತಂದು ನಿಲ್ಲಿಸಿದೆ. ನದಿಗಳ ಒಣಗಾಟ, ಅರಣ್ಯದ ನಾಶ, ಗಾಳಿ–ನೀರಿನ ಮಲಿನತೆ – ಇವೆಲ್ಲವೂ ಪ್ರಕೃತಿಯ ನಿಶಬ್ದ ಎಚ್ಚರಿಕೆಗಳು. ನಾವು ಗಿಡ ನೆಡುವುದು, ನೀರು ಉಳಿಸುವುದು, ಪ್ಲಾಸ್ಟಿಕ್ ಬಳಕೆಗೆ ವಿರೋಧಿಸುವುದು – ಇವೆಲ್ಲಾ ಪ್ರಕೃತಿಗೆ ನಾವು ನೀಡಬಹುದಾದ ಸಹಾಯ ಕಾಯಕಗಳು.

**ನಮ್ಮ ಕರ್ತವ್ಯ:** ಈ ಎಲ್ಲಾ ಕ್ಷೇತ್ರಗಳಲ್ಲಿ ಕೇಳಿಸುತ್ತಿರುವ "ಮೇಡೇ" ಕೂಗುಗಳಿಗೆ ನಾವು ಕ್ರೈಸ್ತರೆಂದು ಸ್ಪಂದಿಸಬೇಕಾಗಿದೆ. ಯೇಸು ತನ್ನ ಶಿಷ್ಯರಿಗೆ "ನಿಮ್ಮ ಬಳಿ ಏನು ಇಲ್ಲದಿದ್ದರೂ ದೇವರ ಮೇಲೆ ನಂಬಿಕೆ ಇರಿ" ಎಂದು ಉಪದೇಶಿಸಿದಂತೆ, ನಾವು ದೇವರ ಮೇಲಿನ ಆ ನಂಬಿಕೆಯನ್ನು ಪುನಃ ಜೀವಂತಗೊಳಿಸೋಣ. ಕುಟುಂಬಗಳಲ್ಲಿ ಪ್ರಾರ್ಥನೆ ಪುನರ್‌ಸ್ಥಾಪನೆಯಾಗಲಿ, ಶಿಕ್ಷಣ ಸಂಸ್ಥೆಗಳಲ್ಲಿ ಮೌಲ್ಯ ಶಿಕ್ಷಣ ಬೆಳಗಲಿ, ಪರಿಸರದಲ್ಲಿ ನಮ್ಮ ಜವಾಬ್ದಾರಿಯ ನಡಿಗೆ ಮೊಳಗಲಿ.

ಇದು ಅಂತ್ಯವಲ್ಲ, ಪ್ರಾರಂಭವಾಗಬಹುದಾದ ಒಂದು ಪುನರುಜ್ಜೀವನವಾಗಿದೆ.

"ಮೇಡೇ" ಎಂಬ ನಾದದಲ್ಲಿ ನಾವು ಆತ್ಮದ ಕಿವಿಗೆ ಸ್ಪಂದಿಸೋಣ, ಕರ್ತನೊಂದಿಗೆ ಹತ್ತಿರವಾಗೋಣ. ದೇವನು ನಮ್ಮ ಕೈ ಹಿಡಿದಿದ್ದಾನೆ – ನಾವೂ ಇತರರ ಕೈ ಹಿಡಿದು ಈ ಸಂಕಟದ ನಾವೆಲೆಗಳಲ್ಲಿ ಒಟ್ಟಾಗಿ ಸಾಗೋಣ.

"ನಮ್ಮ ಮತ್ತು ನಿರೀಕ್ಷೆ ದೇವರಲ್ಲಿರಲಿ" (1 ಪೇತ್ರ 1:21)

**ಕೀರ್ತನೆ 5:2–3 – "ನನ್ನ ಮೊರೆಯನ್ನು ಆಲಿಸು_ ಕರ್ತನೇ, ನನ್ನ ಕೂಗುಗಳನ್ನು ಕಿವಿಗೊಡು."**

# ನಮ್ಮನ್ನು ರಕ್ಷಿಸಿರಿ ಸ್ವಾಮಿ



ಫಾ. ಕ್ಲೇರಿ ಡಿ'ಸೋಜ

ಕೊಲೆಯಾದ ಅಬೆಲನ ರಕ್ತ ಪ್ರತಿಕಾರಕ್ಕಾಗಿ, ಸಹಾಯಕ್ಕಾಗಿ ದೇವರಿಗೆ ಮೊರೆ ಇಟ್ಟಿತು. ಆದಿಕಾಂಡ 4:10.

ಸಾರಲಿಂದ ತಿರಸ್ಕೃತಳಾದ ಹಾಗರ್ ತನ್ನ ಮಗು ಇಸ್ಮಾಯಲ್‌ಗಾಗಿ ಕಣ್ಣೀರಿಡಲು ಸಾಯುವ ಸ್ಥಿತಿಯಲ್ಲಿ ಅಳುತ್ತಿರುವ ಮಗುವನ್ನು ರಕ್ಷಿಸಲು ದೇವರು ಮರುಭೂಮಿಯಲ್ಲಿ ನೀರಿನ ಬುಗ್ಗೆ ಚಿಮ್ಮುವಂತೆ ಮಾಡಿದರು. ಅದು ಇಂದಿಗೂ ಹರಿಯುತ್ತಿದೆ. ಆದಿಕಾಂಡ 21:16 ರಿಂದ ಈಜಿಪ್ಟಿನಲ್ಲಿ ಗುಲಾಮತನದಿಂದ ಇದ್ದ ಜನರು ಕಣ್ಣೀರಿಟ್ಟಾಗ ದೇವರಿಗೆ ಅದು ಕೇಳಿಸಿತು. ವಿಮೋಚನಾಕಾಂಡ 3:7 ರಿಂದ ರಾತ್ರಿಯ ಒಂದೊಂದು ಜಾವದಲ್ಲಿ ಗೋಳಾಡಿ, ನಿಮ್ಮ ಮಕ್ಕಳ ಪ್ರಾಣ ಉಳಿಸಬೇಕೆಂದು ಕೈ ಮುಗಿದು ಪ್ರಾರ್ಥನೆ ಮಾಡಿ (ಪ್ರಲಾಪಗಳು 2:19). ಯೋಸೆಫತನು ಇಸ್ರಾಯೇಲ್ ರಾಜ್ಯದ ಸುತ್ತಲೂ ಮೂರು ಕಡೆಯಿಂದ ವೈರಿಗಳು ಒಮ್ಮೆಲೆ ಅಕ್ರಮಣ ಮಾಡಿದಾಗ ಪ್ರಾರ್ಥಿಸುತ್ತಾನೆ. ಬಂದಿರುವ ವೈರಿಗಳು ತಾವೇ ಜಗಳವಾಡಿ ನಾಶವಾಗುತ್ತಾರೆ. ಕೀರ್ತನೆಗಾರ ಹೇಳುತ್ತಾನೆ, ಭಕ್ತರೆಲ್ಲರೂ ನಿನ್ನ ಪ್ರಾರ್ಥಿಸಲಿ, ಸಕಾಲದಲಿ, ಹುಚ್ಚು ಹೊಳೆ ಉಕ್ಕಿ ಬಂದಾಗ ನೀ ಸಿಗಲಿಲ್ಲವೆನ್ನದಿರಲಿ. ಕೀರ್ತನೆ 32:6 ಕಳ್ಳಕಾಕರ ಕೈಗೆ ಸಿಕ್ಕಿದ ವ್ಯಕ್ತಿಯ ಕೂಗು ಒಳ್ಳೆಯ ಸಮಾರಿಯದವನಿಗೆ ಮಾತ್ರ ಕೇಳಿತು. ಲೂಕ 10:25 ರಿಂದ ಹಸಿದಿರುವವರ, ಅನ್ಯಾಯಕ್ಕೆ ಒಳಗಾಗಿ ಜೈಲಿನಲ್ಲಿದ್ದವರ ಕೂಗು ಕೇಳಿಸಿಕೊಂಡವ ಧನ್ಯನು. (ಮತ್ತಾಯ 25:35 ರಿಂದ).

ಇಚಿದು ನಾವು ನಾನು, ನನ್ನದು, ನನಗಾಗಿ ಎಂಬ ಸಮಾಜದಲ್ಲಿ ಜೀವಿಸುತ್ತೇವೆ. ನನಗೆ ಯಾರ ಅವಶ್ಯಕತೆ ಇಲ್ಲ ಎಂಬ ಪ್ರಪಂಚದಲ್ಲಿ ಜೀವಿಸುತ್ತಿದ್ದೇವೆ. ಒಳ್ಳೆಯ ಸ್ಥಾನ, ಮಾನ, ಗೌರವ, ಅಂತಸ್ತು, ವಿದ್ಯೆ, ಹಣಕಾಸು, ಹೊಲ, ನೆಲ, ಬಂಗಲೆ, ಒಳೆಯ ಸೌಕರ್ಯ ಬ್ಯಾಂಕ್‌ನಲ್ಲಿ, ಶೇರ್ ಮಾರ್ಕೆಟ್‌ನಲ್ಲಿ ಬೇಕಾದಷ್ಟು ಇದೆ ನಮಗೆ ಜನಬಲ, ಅಧಿಕಾರಿಗಳ, ರಾಜಕೀಯ ವ್ಯಕ್ತಿಗಳ ಬೆಂಬಲ ಇದೆ. ನಾನು ಒಂದು ಫೋನ್ ಮಾಡಿದ್ರೆ ಯಾವುದೇ ಸಮಸ್ಯೆ ಪರಿಹರಿಸುವ ಶಕ್ತಿ ನನಗೆ ಇದೆ. ನನಗೆ ಯಾರೂ ಬುದ್ಧಿವಾದ ಹೇಳ ಬೇಕಾಗಿಲ್ಲ. ನನಗೆ ಎಲ್ಲರ ಹಣೆಬರಹ ತಿಳಿದಿದೆ. ನಾನು ಯಾರ ಹಂಗಿನಲ್ಲಿ ಇಲ್ಲ. ನನ್ನ ತಂಟೆಗೆ ಬಂದರೆ ನಾನು ಸುಮ್ಮನೆ ಬಿಡುವವನಲ್ಲ. ನನ್ನ ವಿರುದ್ಧ ನಿಂತರೆ, ಸುಪಾರಿ ಕೊಟ್ಟು ಹಾರಿಸುವ ಶಕ್ತಿ ನನ್ನಲಿದೆ. ನ್ಯಾಯವನ್ನು, ನಾನು ಖರೀದಿಸ ಬಲ್ಲೆ, ಮಾಧ್ಯಮಗಳು, ಪತ್ರಿಕೆಗಳು, ಟಿ.ವಿ. ಚಾನಲ್‌ಗಳು ನಾನು ಹೇಳಿದ ಹಾಗೆ ಕುಣಿಯುತ್ತವೆ ಎಂದು ದೊಡ್ಡಸ್ಥಿಕೆ ಮಾತಾಡುವವರು ಬಹಳಷ್ಟು ಜನ ಇದ್ದಾರೆ. ಇವರಿಗೆ ಜನರ ಬಾಯನ್ನು, ಮಾಧ್ಯಮದವರ ಬಾಯನ್ನು ಮುಚ್ಚಿಸುವ ಶಕ್ತಿನೂ ಇದೆ.

ಇಂಥ ಸಮಾಜದಲ್ಲಿ ನಾವು ಜೀವಿಸುತ್ತಿದ್ದರೂ ಒಮ್ಮೆಲೆ ನಾವು ಯೊಚಿಸದ ರೀತಿಯಲ್ಲಿ ಕಷ್ಟಗಳು ಬಂದಾಗ ಸಹಾಯ ಮಾಡುವವರು ಯಾರು? ಬಿರುಗಾಳಿ ಬೀಸಿ ಮನೆ ಬಂಗಲೆಗಳು ನಾಶವಾದಾಗ, ಮೇಘಸ್ಫೋಟ, ಅಲಿಕಲ್ಲಿನ ಮಳೆ, ಹುಚ್ಚು ಹೊಳೆ, ಪ್ರವಾಹ, ಭೂಕಂಪ, ಅಗ್ನಿ ಅವಘಡ, ವಿಮಾನ ಪತನ, ಬಂಗಲೆ, ಸೇತುವೆಗಳ ಕುಸಿತ, ಯುದ್ಧ, ಬಾಂಬ್‌ಸ್ಫೋಟ, ಭಯೋತ್ಪಾದನೆ, ನಂಬಿದ ವ್ಯಕ್ತಿಗಳಿಂದ ದ್ರೋಹ, ವಂಚನೆ, ಕೊಲೆ, ಆತ್ಮಹತ್ಯೆ, ವಿವಾಹ ವಿಚ್ಛೇದನೆ, ನಂಬಿಕೆ ಇಟ್ಟ ಕೆಲಸ ಕಳೆದುಕೊಂಡಾಗ ಬ್ಯಾಂಕ್‌ಗಳೇ ದರೊಡೆಯಾಗಿ ದಿವಾಳಿಯಾದಾಗ, ಶೇರ್ ಮಾರ್ಕೆಟ್ ಬಿದ್ದು, ಅರ್ಥಿಕವಾಗಿ ದಿವಾಳಿಯಾದಾಗ, ನಾವು ನಂಬಿದ ಹಣ, ಅಧಿಕಾರ, ಜನಬಲ, ರಾಜಕೀಯ ಬಲ ನಮಗೆ ಸಹಾಯ ಮಾಡಬಲ್ಲದೆ? ನಮಗೆ ಆದ ನಷ್ಟವನ್ನು ತುಂಬಿಸಿ ಕೊಡಬಲ್ಲುದೆ? ಹೋಗಿರುವ ಮಾನ, ಗೌರವವನ್ನು ಹಿಂದಿರುಗಿಸಲು ಅವರಿಂದ ಸಾಧ್ಯವೆ? ಸಂಘ ಸಂಸ್ಥೆಗಳು, ರಾಜಕೀಯ ಪಕ್ಷಗಳು ನಾವು ನಿಮ್ಮ ಪರವಾಗಿದ್ದೇವೆ ಎಂದು ಹೇಳಿ ತಮ್ಮ ರಾಜಕೀಯ ಹಿತಾಶಕ್ತಿ ಸಾಧಿಸಬಹುದು.

ಅದುದ್ದರಿಂದ ದೇವರ ವಾಕ್ಯ ಹೇಳುತ್ತ ಯಾವ ವಿಧದ ಮೋಸಕ್ಕೂ, ಸುಳ್ಳು ಅಶ್ವಾಸನೆಗೂ ಪೊಳ್ಳು ನಂಬಿಕೆಗಳಿಗೆ ಒಳಗಾಗದೆ,ದೇವರಲ್ಲಿ ನಂಬಿಕೆ ಇಟ್ಟು ಕಷ್ಟ ಕಾಲದಲ್ಲಿ ಅತೀ ಅಲ್ಪನ ಅವಶ್ಯಕತೆ ನಮಗೆ ಬೀಳಬಹುದು. ಅತೀ ಸಣ್ಣವರಿಂದ

**ಪುಟ ಸಂಖ್ಯೆ 12ರಲ್ಲಿ ಮುಂದುವರಿಯುವುದು**

**ಕೀರ್ತನೆ 6:9 – "ಯೆಹೋವನು ನನ್ನ ಮೊರೆಯನ್ನು ಕೇಳಿದ್ದಾನೆ; ನನ್ನ ಪ್ರಾರ್ಥನೆಯನ್ನು ಸ್ವೀಕರಿಸುತ್ತಾನೆ."**





# ಮೇಡೇ – ಸಮಾಜದ ಧ್ವನಿಯತ ನಮ್ಮ ಸ್ಪಂಧನೆ

ಫಾ. ದೀಪಕ್ ಫುಟ್ಟಾದೊ

"ಮೇಡೇ... ಮೇಡೇ... ಮೇಡೇ..." – ಈ ಶಬ್ದವನ್ನು ನಾವು ಹಲವಾರು ಬಾರಿ ಇತ್ತೀಚಿನ ಸುದ್ದಿಗಳಲ್ಲಿ ಕೇಳಿರಬಹುದು. ಇದು ಕೇವಲ ಒಂದು ತಾಂತ್ರಿಕ ತುರ್ತುಸಂಕೇತವಲ್ಲ. ವಿಮಾನಗಳು ತುರ್ತು ಪರಿಸ್ಥಿತಿಗೆ ಒಳಪಟ್ಟಾಗ, ಹಡಗುಗಳು ಮುಳುಗುತ್ತಿರುವಾಗ, ಅಥವಾ ಜೀವ ಸಂಶಯದ ಸಂದರ್ಭಗಳಲ್ಲಿ ರೇಡಿಯೋ ಮೂಲಕ ಈ ಶಬ್ದವನ್ನು ಕೊನೆಮಾತಾಗಿ ಕರೆ ಮಾಡಲಾಗುತ್ತದೆ. ಆದರೆ ಈ ಶಬ್ದದ ಹಿಂದೆ ಒಂದು ಗಾಢವಾದ ಅರ್ಥ ಅಡಗಿದೆ – ಅದು ಶಬ್ದದೊಡನೆ ಹೊರಡುವ ಆತಂಕ, ನಿರಾಶೆ ಮತ್ತು ಸಹಾಯಕ್ಕಾಗಿ ಕಾಯುವ ನಿಸ್ಸಹಾಯತೆಗೆ ಪ್ರತಿಕ್ರಿಯೆ ಆಗಬೇಕಾದ ನಿಜವಾದ ಮಾನವೀಯ ಸ್ಪಂದನೆ.

"Mayday" ಎಂಬ ಶಬ್ದವು ಫ್ರೆಂಚ್‌ನ "m'aidez" ಎಂಬ ಪದದಿಂದ ಬಂದಿದೆ ಇದರ ಅರ್ಥ "ನನಗೆ ಸಹಾಯ ಮಾಡಿ." "ನನ್ನನ್ನು ಕಾಪಾಡಿರಿ" ಈ ಶಬ್ದವನ್ನು 1923ರಲ್ಲಿ ಅಂತಾರಾಷ್ಟ್ರೀಯ ತುರ್ತು ಶಬ್ದವಾಗಿ ಅಳವಡಿಸಲಾಯಿತು. ಅದರ ಮುಚ್ಚಿದ ಸಂಕೇತದಲ್ಲಿ ಜೀವ ಉಳಿಯುವ ನಿರೀಕ್ಷೆಯ ಕೊನೆಯ ಮೊರೆ ಇದೆ. ವಿಮಾನದಲ್ಲಿ ಕುಳಿತ ಪೈಲಟ್ ತಾನು ತೀವ್ರ ಸಂಕಷ್ಟದಲ್ಲಿದ್ದಾಗ, "ಮೇಡೇ, ಮೇಡೇ, ಮೇಡೇ" ಎಂದು ರೇಡಿಯೋ ಕರೆ ನೀಡುವಾಗ ಅದು ಕೇವಲ ತಂತ್ರಜ್ಞಾನದಲ್ಲಿನ ಕರೆ ಅಲ್ಲ – ಅದು ಆತ್ಮದ ಶಬ್ದ, ಬದುಕು ಉಳಿಸಿಕೊಳ್ಳುವ ಅಸಾಯಕ ಧ್ವನಿ.

ಆದ್ದರಿಂದ ಈ ಶಬ್ದವನ್ನು ಆಧ್ಯಾತ್ಮಿಕ ದೃಷ್ಟಿಕೋನದಿಂದ ನೋಡುವುದಾದರೆ, ಅದು ನಮ್ಮ ಪ್ರಾರ್ಥನೆಯ ಶಬ್ದವಾಗಿ ಮಾರ್ಪಡುತ್ತದೆ. ಕ್ರೈಸ್ತ ವಿಶ್ವಾಸದ ಪ್ರಕಾರ, ನಾವು ಸಂಕಷ್ಟದ ವೇಳೆಯಲ್ಲಿ ದೇವರಿಗೆ ಮೊರೆವಿಡುತ್ತೇವೆ. ನಾವೆಲ್ಲಾ ನಮ್ಮ ಬದುಕಿನಲ್ಲಿ ನಮ್ಮದೇ ಆದ "Mayday" ಗಳನ್ನು ಕೂಗುತ್ತಿದ್ದೇವೆ – ಕೆಲವೊಮ್ಮೆ ಮೌನದಲ್ಲಿ, ಕೆಲವೊಮ್ಮೆ ದನಿಯಲ್ಲಿ, ಕೆಲವೊಮ್ಮೆ ಕಣ್ಣೀರೀನಲ್ಲಿ. ಅದು "ಪ್ರಭುವೇ, ನನ್ನನ್ನು ರಕ್ಷಿಸು!" ಎಂಬ ಮೊರೆ ಆಗಿರಬಹುದು, "ನಾನು ಇನ್ನಷ್ಟು ನಿಲ್ಲಲಾಗದು" ಎಂಬ ಒಲವು ಆಗಿರಬಹುದು. ಪೇತ್ರನು ಸಾಗರದ ಮೇಲೆ ನಡೆಯುತ್ತಿದ್ದಾಗ ಭಯದಿಂದ ಮುಳುಗತೊಡಗಿದನು. ಆಗ ಆತನು ದೇವನಿಗೆ ಕೂಗಿದನು: "ಯೇಸುವೇ, ನನ್ನನ್ನು ರಕ್ಷಿಸು!" – ಈ ಕೂಡಲೇ ಆ ಮಹತ್ತಾದ ಕರ್ತನು ಅವನ ಕೈ ಹಿಡಿದು ಎತ್ತಿದನು. ಅದು ಪೇತ್ರನ Mayday. ಇದು ನಮ್ಮದೂ ಹೌದು. ನಾವು ಪಾಪದಲ್ಲಿ ಮುಳುಗುವಾಗ, ಸಂಕಟದಲ್ಲಿ ಕದಲುವಾಗ, ಜೀವನದ ದಿಕ್ಕು ಕಳೆದುಕೊಳ್ಳುವಾಗ ದೇವರ ಕಡೆ ನಮ್ಮ ಆತ್ಮ ಕರೆಯುವುದು – ಆ ಕರೆಯೇ Mayday.

ಆಧುನಿಕ ಜಗತ್ತಿನಲ್ಲಿ ಈ ಶಬ್ದವು ಮಾನವತೆಯ ಅಗತ್ಯತೆಯ ಪ್ರತಿನಿಧಿಯಾಗಿದೆ. ಸಮಾಜದ ಎಡವಟ್ಟಾದ ವ್ಯವಸ್ಥೆಗಳು, ಅಸಮಾನತೆಯ ನೆಲೆಗಳು, ಅಶಕ್ತ ಸಮುದಾಯಗಳ ಸಂಕಟಗಳು – ಇವೆಲ್ಲವೂ Mayday ಎನ್ನುವ ರೀತಿಯ ನಿಜವಾದ ಜಾಗೃತಿಯ ಘೋಷಣೆಗಳಾಗಿವೆ. ಬಡವನು, ಅನಾಥನು, ನಿರುದ್ಯೋಗಿ ಯುವಕನು, ಶಿಕ್ಷಣದಿಂದ ವಂಚಿತ ಹುಡುಗಿ, ಕುಸಿದುಹೋಗುತ್ತಿರುವ ಕುಟುಂಬ – ಎಲ್ಲರೂ ತಮ್ಮದೇ ಆದ Mayday ಅನ್ನು ಕೂಗುತ್ತಿದ್ದಾರೆ. ಆದರೆ ಈ ಶಬ್ದ ನಮ್ಮ ಕಿವಿಗೆ ತಲುಪುತ್ತದೆಯೇ?

**ಕೀರ್ತನೆ 18:6 – "ನಾನು ಇಕ್ಕಟ್ಟಿನಲ್ಲಿ ಕರೆಯಿದಾಗ ಆತನು ನನ್ನ ಮೊರೆಯನ್ನು ಕೇಳಿದನು."**

ಸಾಮಾನ್ಯವಾಗಿ ನಾವು Mayday ಯನ್ನು ವಿಮಾನ ಅಥವಾ ಹಡಗಿನ ತುರ್ತು ಸ್ಥಿತಿಗೆ ಮಾತ್ರ ಸೀಮಿತಗೊಳಿಸುತ್ತೇವೆ. ಆದರೆ ಇಂದು ಪ್ರಪಂಚವೇ ತುರ್ತು ಸ್ಥಿತಿಯಲ್ಲಿದೆ. ಸಮಾಜದ ಮೂಲಭೂತ ಶ್ರೇಣಿಗಳೇ ಸಹಾಯಕ್ಕಾಗಿ ಕೂಗುತ್ತಿವೆ. ಬಡವರು, ದಲಿತರು, ಅಲ್ಪಸಂಖ್ಯಾತರು, ಶೋಷಿತ ಕಾರ್ಮಿಕರು – ಎಲ್ಲರೂ ತಮ್ಮ ಅಸ್ತಿತ್ವ, ಸಮಾನತೆ, ನ್ಯಾಯಕ್ಕಾಗಿ ತಮ್ಮ ಶಬ್ದದ Mayday ಅನ್ನು ಹೊರಡಿಸುತ್ತಿದ್ದಾರೆ. ಅವರು ಕೇಳುವುದು ಕೇವಲ ಸಹಾಯವಲ್ಲ – ಅವರು ಕೇಳುತ್ತಿರುವದು: "ನನ್ನ ಜೀವಕ್ಕೂ ಮೌಲ್ಯವಿದೆಯೆ?", "ನನಗೂ ಸಮಾನ ಹಕ್ಕುಗಳು ದೊರೆಯುತ್ತವೆಯೆ?", "ಈ ಜಗತ್ತಿನಲ್ಲಿ ನನಗೂ ಸ್ಥಳವಿದೆಯೆ?" ಇವು ಮಾನವ ಹಕ್ಕುಗಳ ಜಗತ್ತಿನಲ್ಲಿ ತುರ್ತು ಪ್ರಶ್ನೆಗಳಾಗಿ ಕೇಳಿಬರುತ್ತಿವೆ. ಈ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡುವುದು ಕೇವಲ ನೀತಿ ಶಾಸ್ತ್ರವಲ್ಲ, ಅದು ಕ್ರೈಸ್ತ ಕರ್ತವ್ಯವೂ ಹೌದು.

ಇನ್ನೊಂದು ದಿಕ್ಕಿನಲ್ಲಿ, ಧರ್ಮಗಳು ಸಹ ತಮ್ಮದೇ Mayday ಗಳನ್ನು ಎದುರಿಸುತ್ತಿವೆ. ಧರ್ಮವೆಂದರೆ ಶಾಂತಿ, ಸೇವೆ, ಸಮಾನತೆ ಮತ್ತು ಸತ್ಯದ ಮಾರ್ಗ. ಆದರೆ ಇಂದಿನ ಸಂದರ್ಭದಲ್ಲಿ ಧರ್ಮಗಳನ್ನು ವಿಭಜನೆಯ ದ್ವೇಷ, ರಾಜಕೀಯ ಲಾಭದ ಸಾಧನಗಳಾಗಿ ಬಳಸುವ ಪ್ರಯತ್ನ ನಡೆಯುತ್ತಿದೆ. ಧರ್ಮಗಳ ನಡುವಿನ ಸಹೋದರತ್ವ, ಪರಸ್ಪರ ಗೌರವ, ಒಗ್ಗಟ್ಟು ಇವುಗಳೆಲ್ಲ ಸವಾಲಿನಲ್ಲಿವೆ. ಪ್ರತಿ ಧರ್ಮವು ತನ್ನ ಮೂಲ ಆತ್ಮವನ್ನು ಉಳಿಸಿಕೊಳ್ಳಲು Mayday ಕೂಗುತ್ತಿರುವಂತಿದೆ. ಕ್ರೈಸ್ತಧರ್ಮ ಕೂಡ ತನ್ನ ಆತ್ಮವನ್ನೇ ಕಳೆದುಕೊಳ್ಳಬಾರದು. ನಾವು ತಂತ್ರಜ್ಞಾನದಲ್ಲಿ ಮುನ್ನಡೆದರೂ ಸಹ, ಆಧ್ಯಾತ್ಮಿಕವಾಗಿ ಕುಗ್ಗುತ್ತಿರುವ ಪ್ರಪಂಚದಲ್ಲಿ ಪ್ರತಿ ಧರ್ಮದ Mayday ಶಬ್ದ ಪವಿತ್ರವಾಗಿರಬೇಕು – ಅದು ಸಹಾಯ ಕೇಳುವ ಶಬ್ದವಾಗಿರಬೇಕು, ದ್ವೇಷ ಸಾರುವ ಶಬ್ದವಾಗಬಾರದು.

ಈ Mayday ಗೆ ಪ್ರತಿಕ್ರಿಯೆ ನೀಡಬೇಕಾದವರು ಕೇವಲ ವ್ಯಕ್ತಿಗಳಲ್ಲ. ಸಂಸ್ಥೆಗಳೂ ಕೇಳಬೇಕು, ಸ್ಪಂದಿಸಬೇಕು. ಆರೋಗ್ಯ, ಶಿಕ್ಷಣ, ನ್ಯಾಯ ವ್ಯವಸ್ಥೆ, ಆಡಳಿತ – ಇವು ಮಾನವನ ಸೇವೆಗೆ ನಿಲ್ಲಬೇಕು. ಆದರೆ ಇಂದಿನ ವ್ಯವಸ್ಥೆಗಳು ಅನೇಕ ಬಡವರ Mayday ಶಬ್ದಕ್ಕೆ ಕಿವಿಗೊಡದೆ ಕಾನೂನು, ಲಾಭ ಮತ್ತು ಅಧಿಕಾರದ ಹೆಸರಲ್ಲಿ ಅವರನ್ನು ನಿರ್ಲಕ್ಷಿಸುತ್ತವೆ. ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಇಲ್ಲದಾಗ ರೋಗಿಯ Mayday ಕೇಳಲ್ಪಡುತ್ತದೆಯೇ? ಖಾಸಗಿ ಶಾಲೆಯಲ್ಲಿ ಬಡವ ವಿದ್ಯಾರ್ಥಿ ಶುಲ್ಕ ತೀರಿಸಲಾಗದೆ ಹೊರಹೋಗುವಾಗ ಅವನ Mayday ಸ್ಪಷ್ಟವಾಗುತ್ತದೆಯೇ? ನ್ಯಾಯಾಲಯಗಳಲ್ಲಿ ವರ್ಷಗಳ ಕಾಲ ತಮ್ಮ ಹಕ್ಕಿಗಾಗಿ ಕಾಯುವ ದಲಿತ ಮಹಿಳೆಯ Mayday ಸ್ಪಂದನೆ ಪಡೆಯುತ್ತದೆಯೇ? ಇವೆಲ್ಲವೂ ತುರ್ತು ಸ್ಥಿತಿಗಳೇ ತಾನೆ?

ಇದರ ನಡುವೆ, ಯೇಸು ಕ್ರಿಸ್ತನು Mayday ಗೆ ಸ್ಪಂದಿಸಿದ ದೇವದೂತರ ಮಾದರಿ. ಲೂಕನ ಸುವಾರ್ತೆಯಲ್ಲಿ ಯೇಸು ತನ್ನ ಬಹಿರಂಗ ಜೀವನವನ್ನು ಪ್ರಾರಂಭಿಸಿದಾಗ: "ಪ್ರಭುವಿನ ಆತ್ಮ ನನ್ನ ಮೇಲಿದೆ; ಆತನು ನನ್ನನ್ನು ಬಡವರಿಗೆ ಸುವಾರ್ತೆ ಸಾರಲು ಕಳುಹಿಸಿದ್ದಾನೆ." ಇದೊಂದು ಅತ್ಯಂತ ಸ್ಪಷ್ಟ Mayday ಸ್ಪಂದನೆ. ಬಡವರಿಗೆ, ಬಂಧಿತರಿಗೆ, ಕುಳಿತವರಿಗೆ, ಅನಾತವರಿಗೆ, ಅಜ್ಞಾತರಿಗೆ ಯೇಸು ಸ್ಪಂದಿಸಿದರು. ಅವರು Mayday ಕೇಳಿದರು, ಯೇಸು ಓಡಿದರು. ನಾವೂ ಸಹ ಆತನು ಬೆಳೆದ ಮಾರ್ಗದಲ್ಲಿ ನಡೆದು, ಆ ಕೂಗಿಗೆ ಸ್ಪಂದಿಸಬೇಕು.

ಕ್ರೈಸ್ತ ಮಿಷನ್ ಎಂದರೆ ಪ್ರತಿಯೊಂದು Mayday ಶಬ್ದಕ್ಕೆ ಮಾನವೀಯ ಮತ್ತು ಆಧ್ಯಾತ್ಮಿಕ ಸ್ಪಂದನೆ ನೀಡುವುದು. ಬಡವರಿಗೆ ಸಹಾಯ ಮಾಡುವೆವು ಎಂದರೆ ಅದು ಸಣ್ಣ ವಿಷಯವಲ್ಲ. ಅದು ದೇವರ ರಾಜ್ಯವನ್ನು ನಿರ್ಮಿಸುವುದು. ಪ್ರಾರ್ಥನೆಯ ಕೇವಲ ಶಬ್ದವಲ್ಲ, ನಡತೆಯ ಬೆಳಕು. ನಮಗೆ ಎಲ್ಲೆಂದರಲ್ಲಿ Mayday ಶಬ್ದ ಕೇಳಿಸುತ್ತಿದೆ: ಮಕ್ಕಳಲ್ಲಿ, ಗರ್ಭಿಣಿಯಲ್ಲಿ, ವೃದ್ಧರಲ್ಲಿ, ನಿರುದ್ಯೋಗಿಗಳಲ್ಲಿ, ನೈಸರ್ಗಿಕ ವಿಕೋಪದ ಭೀತಿಯಲ್ಲಿ, ಪ್ರಕೃತಿಯ ಮೌನದಲ್ಲಿ. ನಾವು ಈ Mayday ಶಬ್ದವನ್ನು ನಿಜವಾದ ಕರೆಯಾಗಿ ಗುರುತಿಸಬೇಕಾಗಿದೆ – ತುರ್ತು ಕಾಲದ ಮನುಷ್ಯತ್ವದ ಕೂಗು ಎಂದು ಪರಿಗಣಿಸಬೇಕಾಗಿದೆ.

ಅಂತಿಮವಾಗಿ, "Mayday" ಎಂಬ ಶಬ್ದವು ಜಗತ್ತಿಗೆ ಒಂದು ನುಡಿಗಟ್ಟು ಕಲಿಸುತ್ತದೆ – ನಾವು ಪರಸ್ಪರ ಸಂಬಂಧಗಳಲ್ಲಿ ನಿಷ್ಠೆಯುತವಾಗಿರಬೇಕು, ಪ್ರತಿಯೊಬ್ಬನು ಇನ್ನೊಬ್ಬನ ಬಾಳಿನಲ್ಲಿ ದೇವರ ಸ್ಪರ್ಶವಾಗಿ ಬದಲಾಗಬೇಕು. ನಾವು ದೇವರ

**ಪುಟ ಸಂಖ್ಯೆ 8ರಲ್ಲಿ ಮುಂದುವರಿಯುವುದು**





## ಆತ್ಮದ ಮೊರೆ – ನರಕದ ಬೆಂಕಿಯಿಂದ ಸ್ವರ್ಗದ ಸನ್ನಿಧಿಯತ್ತ

ಫಾ ಲಾರೆನ್ಸ್ ಅರುಣ್

ವಿಮಾನ ಅಥವಾ ಹಡಗಿನ ತುರ್ತು ಪರಿಸ್ಥಿತಿಯಲ್ಲಿ ಬಳಸುವ "ಮೇಡೇ" ಎಂಬ ಶಬ್ದವು ಕೇವಲ ತಾಂತ್ರಿಕ ಸಂಕೇತವಲ್ಲ. ಅದು ಜೀವ ಉಳಿಸುವ ಕೊನೆಯ ಮೊರೆ – ಸಂಕಟದ ದಡದಲ್ಲಿರುವ ಜೀವದ ಆತುರದ ಮೊರೆ. "ನನ್ನನ್ನು ರಕ್ಷಿಸಿ!" ಎಂಬ ಈ ಕೂಗು, ಜೀವದ ಭಯದಿಂದ ಹೊರಬಂದ ಮನಸ್ಸಿನ ತೀವ್ರ ಎಚ್ಚರಿಕೆಯ ಧ್ವನಿ. ಇಂದು ಇದು ಮಾನವನ ಅಂತರಂಗದಲ್ಲಿರುವ ಆತ್ಮದ ಕೂಗು. ಜಗತ್ತು ಇಂದು ಅತೀ ಪ್ರಬುದ್ಧ ತಂತ್ರಜ್ಞಾನದಲ್ಲಿ ಮುನ್ನಡೆದರೂ, ಆತ್ಮವನ್ನು ಮರೆತಿದೆ. ಆಧ್ಯಾತ್ಮಿಕತೆಯನ್ನು ತಳ್ಳಿಹಾಕಲಾಗಿದೆ, ಪಾಪವನ್ನು ನಕಾರಲಾಗಿದೆ, ನೈತಿಕತೆಯನ್ನು ಹಾಸ್ಯವಾಗಿ ತಿರಸ್ಕರಿಸಲಾಗಿದೆ. ಸುಖಾಸಕ್ತಿಯ ಪಂಜರದಲ್ಲಿ ಆತ್ಮವನ್ನು ಬಂಧಿಸಲಾಗಿದೆ. ಈ ಪರಿಸ್ಥಿತಿಯಲ್ಲಿ ಆತ್ಮವೇ ತನ್ನಿಂದ ತಾನಾಗಿ ಕೂಗುತ್ತಿದೆ: "ಮೇಡೇ ಮೇಡೇ ಮೇಡೇ "

ಇದು ಕೇವಲ ಒಂದು ಶಬ್ದವಲ್ಲ, ಇದು ಆತ್ಮದ ಕಳವಳ. ಇಂದಿನ ಜಗತ್ತಿನಲ್ಲಿ ಆತ್ಮ ಅಪಾಯದಲ್ಲಿದೆ. ಹೊರಗಿನ ಹೊಳಪಿನ ಹಿಂದೆ ಆಂತರಿಕ ಪತನ ನಡೆಯುತ್ತಿದೆ. ಪವಿತ್ರ ಗ್ರಂಥಗಳು ಮತ್ತು ಸಂತರು ನಮಗೆ ಎಚ್ಚರಿಕೆಯನ್ನು ನೀಡುತ್ತಾರೆ – ಈಗಲೇ ಆತ್ಮವನ್ನು ರಕ್ಷಿಸಬೇಕಾಗಿದೆ. ಇಲ್ಲದಿದ್ದರೆ ನಾವು ಶಾಶ್ವತ ನಾಶದ ದಾರಿಯಲ್ಲಿ ಸಾಗುತ್ತಿರುವಂತಾಗುತ್ತದೆ.

**ಪವಿತ್ರ ಪುಸ್ತಕದಲ್ಲಿ ಆತ್ಮದ ಮೌಲ್ಯ:** ದೇವರಿಂದ ಉದ್ಭವಿಸಿದ ನಿತ್ಯಜೀವ ಆತ್ಮವು ಕೇವಲ ಮಾನವನ ಒಂದು ಅಂಗವಲ್ಲ, ಅದು ದೇವರ ಶ್ವಾಸ. ಆದಿಕಾಂಡ 2:7ರಲ್ಲಿ ಓದಬಹುದು: "ದೇವರಾದ ಸರ್ವೇಶ್ವರ ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ  ಮೂಗಿನಲ್ಲಿ ಜೀವಶ್ವಾಸವನ್ನು ಊದಿದರು. ಆಗ ಮನುಷ್ಯನು ಜೀವಾತ್ಮನಾದನು. ನಾವು ದೇವರ ಶ್ವಾಸದಿಂದ ನಿರ್ಮಿತರು. ಈ ಆತ್ಮವು ದೇವರ ಕಡೆಗೆ ತುಡಿಯುತ್ತದೆ. ಆದರೆ ಇದೇ ಆತ್ಮ, ಪಾಪದ ಮೂಲಕ ಮಾಯವಾಗಬಹುದು. ಎಂದು ಯೇಸು ಹೇಳಿದರು.

ಪ್ರಪಂಚವನ್ನೆಲ್ಲಾ ಗೆದ್ದುಕೊಂಡರೂ ಒಬ್ಬನು ತನ್ನ ಪ್ರಾಣವನ್ನೇ ಕಳೆದುಕೊಂಡರೆ ಅದರಿಂದ ಅವನಿಗೆ ದೊರಕುವ ಲಾಭವೇನು? ಅಥವಾ ಮನುಷ್ಯನು ತನ್ನ ಪ್ರಾಣಕ್ಕೆ ಈಡಾಗಿ ಏನನ್ನು ತಾನೇ ಕೊಡಬಲ್ಲನು? (ಮತ್ತಾಯ 16:26) ಇದು ಆತ್ಮದ ಮೇಡೇ – ಶಾಶ್ವತತೆ ಮರೆಯುವ ಕ್ಷಣಗಳಲ್ಲಿ ಆತ್ಮದ ಮೊರೆ.

**ಸಂತರು ಆತ್ಮದ ಮೊರೆಗೆ ಸ್ಪಂದಿಸಿದವರು:** ಎಲ್ಲಾ ಯುಗಗಳ ಸಂತರು ತಮ್ಮ ಆತ್ಮದ ಮೊರೆ ಕೇಳಿದವರು ಮಾತ್ರವಲ್ಲ, ಇತರರ ಆತ್ಮಗಳ ಮೌನದ ಅಳಿಗೂ ಸ್ಪಂದಿಸಿದವರು. ಸಂತ ಅಗಸ್ಟಿನ್ ತನ್ನ 'Confessions' ಪುಸ್ತಕದಲ್ಲಿ ಬರೆದಿರುವ ಪ್ರಸಿದ್ಧ ವಾಕ್ಯವನ್ನು ಗಮನಿಸೋಣ: "ನೀನು ನನ್ನನ್ನು ನಿನ್ನಿಗಾಗಿ ಸೃಷ್ಟಿಸಿದ್ದೀ, ಕರ್ತನೇ. ಆದ್ದರಿಂದ ನನ್ನ ಹೃದಯ ನಿನ್ನಲ್ಲಿ ವಿಶ್ರಾಂತಿ ಪಡೆಯುವವರೆಗೆ ಅಶಾಂತಿಯಲ್ಲಿರುತ್ತದೆ."

ಅವರ ಜೀವನವು ಜಗತ್ತಿನ ಸುಖದಲ್ಲಿ ಮುಳುಗಿದ ನಂತರ ಆತ್ಮದ ಮೌನದ Mayday ಗೆ ಸ್ಪಂದಿಸಿದ ಕಥೆಯಾಗಿದೆ. ಸಂತ ಅವಿಲಾದ ಸಂತ ತರೇಜಾರವರು ಆತ್ಮವನ್ನು ಕ್ರಿಸ್ಟಲ್ ಕೋಟೆ ಎಂದು ವಿವರಿಸುತ್ತಾರೆ. ಆದರೆ ಅವರು ಎಚ್ಚರಿಕೆಯಿಂದ

**ಕೀರ್ತನೆ 28:2 – "ನಾನು ಕೂಗುವಾಗ ನನ್ನ ವಿಜ್ಞಾಪನೆಯ ಶಬ್ದವನ್ನು ಕೇಳು."**

ಹೇಳುತ್ತಾರೆ – ಈ ಕೋಟೆಯನ್ನು ಪಾಪದ ಮಸುಕು ಮರುಳು ಮಾಡಬಲ್ಲದು. ಸಂತ ಯೋಹಾನ ತೀವ್ರವಾಗಿ ಹೇಳಿದರು: "ಆತ್ಮವು ಅಷ್ಟು ಅಮೂಲ್ಯವಾದದ್ದು, ಅದರ ಮೌಲ್ಯಕ್ಕೆ ಸಮನಾದದ್ದೇನೂ ಇಲ್ಲ."

ಇಂದಿನ ಕಾಲದಲ್ಲಿ ಆತ್ಮದ ತುರ್ತು ಸ್ಥಿತಿ: ಇಂದು, ಪಾಪ ಹೊಸ ಹೆಸರಿನಲ್ಲಿ ಮರೆಮಾಚಲ್ಪಟ್ಟಿದೆ – ಅದನ್ನು ಆಯ್ಕೆ ಎಂದು ಕರೆಯಲಾಗುತ್ತಿದೆ. ನೈತಿಕತೆಯ ಅಳಿವಿನಲ್ಲಿ, ಪಾಪವನ್ನು ಮಾಧ್ಯಮಗಳು ಗೌರವದಿಂದ ಚಿತ್ರಿಸುತ್ತವೆ. ಪೋಪ್ ಪಿಯಸ್ XII ಎಚ್ಚರಿಸಿದರು: "ಇಂದಿನ ಶತಮಾನದ ಪಾಪವೆಂದರೆ ಪಾಪದ ಅರಿವಿನ ನಷ್ಟವೇ." ಆದ್ದರಿಂದ, ಇಂದಿನ ಕಾಲದಲ್ಲಿ ಆತ್ಮದ "Mayday" ಮೌನವಾಗಿದೆ – ಆದರೆ ಆತುರದಿಂದ ಕೂಡಿದೆ. ಅದು ಎಲ್ಲೆಡೆ ಇದೆ: ಮಕ್ಕಳು ದೇವರ ಬಗ್ಗೆ ತಿಳಿಯದೇ ಬೆಳೆದಾಗ, ಕುಟುಂಬಗಳು ಭಂಗಕ್ಕೊಳಗಾದಾಗ, ಪರಿಶುದ್ಧತೆಯನ್ನು ನಿಂದನೆಗೆ ಒಳಪಡಿಸುತ್ತಾರೆ. ಅನೇಕ ಕ್ರೈಸ್ತರು ತಂಪಾದ ನಂಬಿಕೆಯಲ್ಲಿ ಬದುಕುತ್ತಿದ್ದಾರೆ – ಆತ್ಮವು ನಿಶ್ಯಬ್ದವಾಗಿ ಅಳುತ್ತಿದೆ.

ಆತ್ಮರಕ್ಷಣೆಯ ಕರ್ತವ್ಯ: ಕಥೋಲಿಕ ಧರ್ಮಸಭೆಯ ಶಿಕ್ಷಣದ ಪ್ರಕಾರ ಮಾನವನ ಜೀವನದ ಗುರಿಯೇ ದೇವರೊಂದಿಗೆ ಶಾಶ್ವತ ಒಕ್ಕೂಟ ಹೊಂದುವುದು (CCC 1024)." Heaven is the ultimate end and fulfillment of the deepest human longings, the state of supreme, definitive happiness. ಆತ್ಮದ ರಕ್ಷಣೆಯು ಒರ್ವ ಕ್ರೈಸ್ತನ ಆಯ್ಕೆಯಲ್ಲ, ಅದು ಅವನ ಕರ್ತವ್ಯ. ಪವಿತ್ರತೆ ಎನ್ನುವುದು ಆತ್ಮದ ನಿಜವಾದ ಗುರಿ. ಇದರಿಗಾಗಿ ದೇವರು ಸಕ್ರಮಗಳನ್ನು ನೀಡಿದ್ದಾನೆ. ಸಮರ್ಪಣೆ (Confession) ಪಾಪದಿಂದ ಬಿದ್ದುಹೋದ ಆತ್ಮಕ್ಕೆ ಚಿಕಿತ್ಸೆ. ಪವಿತ್ರ ಯಜ್ಞ (Eucharist) ಆತ್ಮದ ಆಹಾರ.

ಜಗತ್ತು ಆತ್ಮದೊಳಗಿನ ಯುದ್ಧ: ಈ ಜಗತ್ತು ತಾತ್ಕಾಲಿಕ ಸುಖವನ್ನು ಶಾಶ್ವತವಾಗಿ ನಂಬುವಂತೆ ಮಾಡುತ್ತದೆ. ಇದು ಹೇಳುತ್ತದೆ: "ನಿನಗೆ ತೋಚಿದಂತೆ ಮಾಡು", "ನಿನ್ನ ಸಂತೋಷವೇ ಗುರಿ". ಆದರೆ ಇದು ಆತ್ಮವನ್ನು ಮರುಳು ಮಾಡುತ್ತದೆ. ಪೋಪ್ ಬೆನೆಡಿಕ್ಟ್ XVI ಹೇಳಿದ್ದಾರೆ: "ಜಗತ್ತು ನಿನಗೆ ಸೌಕರ್ಯವನ್ನು ನೀಡುತ್ತದೆ. ಆದರೆ ನೀನು ಸೌಕರ್ಯಕ್ಕಾಗಿ ರಚಿಸಲ್ಪಟ್ಟವನು ಅಲ್ಲ. ನೀನು ಪವಿತ್ರತೆಗಾಗಿ ರಚಿಸಲ್ಪಟ್ಟವನು."

**ನಮ್ಮ ಸ್ಪಂದನೆ:** ನಾವು ಮೊದಲು ಪಶ್ಚಾತ್ತಾಪಕ್ಕೆ ಮರಳಬೇಕು. ಪ್ರಾರ್ಥನೆ, ಉಪವಾಸ, ದಾನ, ಮೌನ – ಇವು ಆತ್ಮವನ್ನು ಪುನಶ್ಚೇತನಗೊಳಿಸುತ್ತವೆ. ಜೊತೆಗೆ ನಾವು ಇತರರ ಆತ್ಮಗಳ Maydayಗೆ ಸ್ಪಂದಿಸಬೇಕು. ಪೋಷಕರು ತಮ್ಮ ಮಕ್ಕಳ ಆತ್ಮವನ್ನು ರಕ್ಷಿಸಬೇಕು. ಧರ್ಮಗುರುಗಳು, ಶಿಕ್ಷಕರು, ಮಾಧ್ಯಮದವರು ಆತ್ಮರಕ್ಷಣೆಗೆ ನಿಂತು ಕೆಲಸ ಮಾಡಬೇಕು.

"ಮೇಡೇ" ಎನ್ನುವುದು ಈ ಕಾಲದ ಆತ್ಮದ ತುರ್ತು ಶಬ್ದ. ದೇವರು ಯೇಸು ಕ್ರಿಸ್ತನಲ್ಲಿ ಈ ಶಬ್ದಕ್ಕೆ ಸ್ಪಂದಿಸಿದ್ದಾರೆ. ಶಿಲುಬೆ – ಆತ್ಮದ ಪತನಕ್ಕೆ ಉತ್ತರ. ಪುನರುತ್ಥಾನ – ಆತ್ಮದ ಜೀವ. ಧರ್ಮಸಭೆ – ಆತ್ಮರಕ್ಷಣೆಯ ಕೇಂದ್ರ. "ಮೇಡೇ... ಮೇಡೇ..." ಎಂಬ ಆತ್ಮದ ಮೊರೆ ನಿಲ್ಲದು. ನಾವು ಕೇಳಬೇಕು. ನಾವು ಸ್ಪಂದಿಸಬೇಕು. ನಾವು ಪ್ರಾರ್ಥಿಸಬೇಕು.

ಇಂದೇ ನಿರ್ಧಾರ ತೆಗೆದುಕೊಳ್ಳೋಣ – "ಮೇಡೇ" ಎನ್ನುವ ಆತ್ಮದ ಮೊರೆಗೆ ನಾನು ಉತ್ತರವಾಗಲಿ!

**ಪುಟ ಸಂಖ್ಯೆ 6ರ ಮುಂದುವರಿದ ಭಾಗ**

ಪ್ರಾರ್ಥನೆಯಂತೆ ಬದುಕಬೇಕು: ಪ್ರೀತಿ, ಸಹಾನುಭೂತಿ, ನ್ಯಾಯ ಮತ್ತು ಸೇವೆಯ ಮೂಲಕ.

"Mayday" ಎನ್ನುವುದು ಕೇವಲ ತುರ್ತುಶಬ್ದವಲ್ಲ. ಅದು ಮನಸ್ಸಿನಲ್ಲಿ ಮೂಡುವ ಪ್ರಾರ್ಥನೆ, ಸಮಾಜದ ಅಳಿಗೆ ಸ್ಪಂದನೆಯ ಕರೆಯಾಗಿ ಮಾರ್ಪಡಬೇಕಾದ ಜವಾಬ್ದಾರಿ, ಮತ್ತು ಕ್ರೈಸ್ತನ ಬದುಕಿನಲ್ಲಿ ದಿನನಿತ್ಯದ ಕರ್ತವ್ಯ. ನಾವು ಕಿವಿಗೊಡಬೇಕಾದ ಧ್ವನಿ ಅದು – ದೇವರ ಬೆನ್ನುಹತ್ತಿ ನಡೆಯುವ ಧ್ವನಿ.

Mayday ನಿಂತಿಲ್ಲ. ಅದು ನಿತ್ಯ ಕೂಗುತ್ತಿದೆ. ಕೇಳುವ ಕಿವಿಗಳಿಗಾಗಿ ಕಾಯುತ್ತಿದೆ. ಮತ್ತು ಉತ್ತರ ನೀಡುವ ಹೃದಯಗಳಿಗಾಗಿ ಪ್ರಾರ್ಥಿಸುತ್ತಿದೆ.





ಫಾ. ಸ್ಟೀವನ್ ವೇಗಸ್

## ಮೇಡೇ – ಜ್ಞಾನದ ಸಂಪತ್ತಿಗಾಗಿ ಮೊರೆಯಿಡುವ ಶಕ್ತಿ

ಇಚಿದಿನ ದಿನಗಳಲ್ಲಿ "ಮೇಡೇ" ಎಂಬ ಶಬ್ದವನ್ನು ನಾವು ಕೇವಲ ವಿಮಾನಗಳ ತುರ್ತು ಸಂದರ್ಭಗಳಲ್ಲಿ ಮಾತ್ರವಲ್ಲದೆ, ಶಾಲಾ ಶಿಕ್ಷಣದ ತುರ್ತು ಪರಿಸ್ಥಿತಿಯಲ್ಲಿಯೂ ಕೇಳಬೇಕಾದ ಅವಶ್ಯಕತೆ ಇದೆ. ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳ ಬಹುತೇಕ ಖಾಸಗಿ ಹಾಗೂ ಧರ್ಮಪ್ರಾಯೋಜಿತ ಶಾಲೆಗಳು ಇಂದು ಕಠಿಣ ಆರ್ಥಿಕ ಹಾಗೂ ಗುಣಮಟ್ಟದ ಸಂಕಷ್ಟಗಳನ್ನು ಎದುರಿಸುತ್ತಿವೆ. ದಾಖಲಾತಿಗಳ ಕೊರತೆ, ಪೋಷಕರಿಂದ ಶಾಲಾ ಶುಲ್ಕ ಸಂಗ್ರಹಿಸುವಲ್ಲಿ ವಿಫಲತೆ, ಹಾಗೂ ವರ್ಷದಿಂದ ವರ್ಷಕ್ಕೆ ಕುಸಿಯುತ್ತಿರುವ ಎಸ್‌ಎಸ್‌ಎಲ್‌ಸಿ ಫಲಿತಾಂಶ – ಇವೆಲ್ಲವೂ ನಾವು ಸುಮ್ಮನಿರುವಂತಹ ಪರಿಸ್ಥಿತಿಯಲ್ಲಿಲ್ಲ ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ.

ನಮ್ಮ ಮಕ್ಕಳಿಗೆ ಶಿಕ್ಷಣ ಎಂಬ ಅತಿದೊಡ್ಡ ಕೊಡುಗೆ ನೀಡುವುದು ನಮ್ಮ ಕ್ರೈಸ್ತ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ನಮ್ಮ ಅಂದಿನ ಪೋಪ್ ಫ್ರಾನ್ಸಿಸ್ ಅವರು ಹೇಳುತ್ತಾರೆ: "ಶಾಲೆಗಳು ಕೇವಲ ಜ್ಞಾನ ವಹಿಸುವ ಜಾಗವಲ್ಲ, ಅವು ಕನಸುಗಳು ಹುಟ್ಟುವ ಸ್ಥಳ." ಆದರೆ ಇಂದು ನಮ್ಮ ಕನಸುಗಳ ತೊಟ್ಟಿಲೇ ಕಂಗೆಡುತ್ತಿದೆ. ಶಾಲೆಗಳಲ್ಲಿ ಹಿನ್ನಡೆ ಎಷ್ಟು ಬೇಸರಕಾರಿಯಾದ್ದರೂ, ನಾವು ಈ ಸತ್ಯವನ್ನು ನಿರಾಕರಿಸಲು ಸಾಧ್ಯವಿಲ್ಲ.

ಧರ್ಮಕ್ಷೇತ್ರದಲ್ಲಿ ಚಾಲನೆಯಲ್ಲಿರುವ ಅನೇಕ ಶಾಲೆಗಳು ಕನ್ಯಾಭಗಿನೀಯರು ಮತ್ತು ಧರ್ಮಕ್ಷೇತ್ರದಿಂದ ಗುರುಗಳು ನಡೆಸಲ್ಪಡುವ ಕಾನ್ವೆಂಟ್ ಶಾಲೆಗಳಾಗಿದ್ದು, ಈ ಶಾಲೆಗಳು ದೀರ್ಘಕಾಲದಿಂದ ಗುಣಮಟ್ಟದ ಶಿಕ್ಷಣಕ್ಕಾಗಿ ಪ್ರಸಿದ್ಧವಾಗಿವೆ. ಅರ್ಥಿಕ ಲಾಭಕ್ಕಾಗಿಯೇ ಅಲ್ಲದೆ, ಮಕ್ಕಳ ಭವಿಷ್ಯ ರೂಪಿಸಲು ಈ ಶಾಲೆಗಳು ಸಮರ್ಪಿತವಾಗಿವೆ. ಮದರ್ ತೆರೆಸಾ ಅವರ ಸಮರ್ಪಣೆ ಮತ್ತು ಸಂತ ಜಾನ್ ಬೋಸ್ಕೊ ಅವರಂತಹ ಮಹಾನ್ ಸಂತರ ನೈಜ ಶಿಕ್ಷಣ ಧೋರಣೆಯಂತೆ, ಈ ಶಾಲೆಗಳು ಸಮಾಜದಲ್ಲಿ ದೀಪದಂತೆ ಬೆಳಗುತ್ತಿದ್ದವು. ಆದರೆ ಇಂದಿನ ಸ್ಥಿತಿಯಲ್ಲಿ ಈ ಸಂಸ್ಥೆಗಳೂ ಆರ್ಥಿಕ ತೊಂದರೆ, ಗುಣಮಟ್ಟದ ಕುಸಿತ ಹಾಗೂ ಪೋಷಕರ ನಿರಾಸೆಯಿಂದಾಗಿ ತೀವ್ರ ಸಂಕಷ್ಟಕ್ಕೆ ಒಳಗಾಗಿವೆ.

ಸ್ಥಳೀಯರಿಗೆ ಉದ್ಯೋಗದ ಅವಕಾಶ ಕಲ್ಪಿಸುವ ಉದ್ದೇಶದಿಂದ ಕೆಲವೊಂದು ಶಾಲೆಗಳು ಸ್ಥಳೀಯ ಶಿಕ್ಷಕರನ್ನು ನಿಯೋಜಿಸುತ್ತಿವೆ. ಇದು ಸಮಾಜದ ಅಭಿವೃದ್ಧಿಯ ದೃಷ್ಟಿಯಿಂದ ಶ್ಲಾಘನೀಯವಾದರೂ, ಕೆಲವೊಮ್ಮೆ ಇದು ಶಾಲೆಗಳ ಶೈಕ್ಷಣಿಕ ಗುಣಮಟ್ಟ ಕುಸಿಯುವಲ್ಲಿ ಕಾರಣವಾಗುತ್ತಿದೆ. ಆದ್ದರಿಂದ ನಾವು ಇಂದು "Train the Trainer" ಯೋಜನೆಗೆ ತೀವ್ರ ಒತ್ತು ನೀಡಬೇಕು. ಶಿಕ್ಷಕರಿಗೆ ನಿರಂತರ ತರಬೇತಿ, ಅವರ ಸಾಮರ್ಥ್ಯವಿಕಾಸಕ್ಕಾಗಿ ಕಾರ್ಯಾಗಾರಗಳು ಮತ್ತು ಶ್ರದ್ಧಾ–ಪ್ರೇರಣಾತ್ಮಕ ಅನುಭವಗಳು ಶಾಲೆಗಳ ಉನ್ನತಿಗೆ ನೆರವಾಗುತ್ತವೆ.

**ಪವಿತ್ರ ಪುಸ್ತಕವು ನಮಗೆ ನೆನಪಿಸುತ್ತದೆ:** ಜ್ಞಾನಿಗೆ ಉಪದೇಶಿಸಿದರೆ ಅವನು ಹೆಚ್ಚು ಜ್ಞಾನಿಯಾಗುತ್ತಾನೆ; ಸತ್ಪುರುಷನಿಗೆ ಬೋಧಿಸಿದರೆ ಅವನು ಹೆಚ್ಚು ತಿಳುವಳಿಕೆ ಪಡೆಯುತ್ತಾನೆ (ಜ್ಞಾನೋಕ್ತಿಗಳು 9:9). ಈ ವಚನ ಶಿಕ್ಷಕರ ತರಬೇತಿ ಮತ್ತು ಅವರ ತಂತ್ರಜ್ಞಾನ, ಪಾಠನೀತಿ, ಶಿಸ್ತುಪದ್ಧತಿ ಸೇರಿದಂತೆ ಎಲ್ಲ ದಿಕ್ಕುಗಳಲ್ಲಿ ಅಭ್ಯಾಸಗಳ ಅಗತ್ಯವನ್ನು ದೃಢಪಡಿಸುತ್ತದೆ.

ಕೊರೋನಾ ಮಹಾಮಾರಿ ಪಿಡುಗಿನ ನಂತರದ ಆರ್ಥಿಕ ಸಂಕಷ್ಟಗಳು ಹಲವಾರು ಶಾಲೆಗಳ ಮೇಲೆ ದುಷ್ಪರಿಣಾಮ ಬೀರುತ್ತಿವೆ. ಪೋಷಕರು ಶಾಲಾ ಶುಲ್ಕ ಪಾವತಿಸಲು ಹಿಂದೇಟು ಹಾಕುತ್ತಿದ್ದಾರೆ. ಹೊಸ ಪ್ರವೇಶಗಳ ಸಂಖ್ಯೆಯೂ ಕುಸಿತಕ್ಕೊಳಗಾಗಿದೆ. ಇದರಿಂದ ಶಾಲೆಗಳ ನಿರ್ವಹಣಾ ವೆಚ್ಚ, ಬಿಲ್ಲು, ವೇತನ ಹಾಗೂ ಮೂಲಭೂತ ಸೌಲಭ್ಯಗಳ ನಿರ್ವಹಣೆಗೆ ತೀವ್ರ ತೊಂದರೆ ಉಂಟಾಗಿದೆ. ಪೋಪ್ ಲಿಯೋ XIII ಅವರು ಕಾರ್ಮಿಕ ಹಕ್ಕುಗಳನ್ನು ಹೇಳುವಾಗ "Rerum Novarum" ಎಂಬ encyclicalನಲ್ಲಿ, ಶ್ರಮದ ಗೌರವ ಮತ್ತು ಜನರ ಮೂಲಭೂತ ಹಕ್ಕುಗಳನ್ನು ಬೆಳೆಸಬೇಕು ಎಂದು ಹೇಳಿದರು. ಶಾಲಾ ಶಿಕ್ಷಕರು ಈ 'ಶ್ರಮದ ಶ್ರೇಷ್ಠತೆ'ಯನ್ನು ಪ್ರತಿನಿಧಿಸುತ್ತಾರೆ. ಆದರೆ ಅವರು ಹೊಂದಿರುವ ಪರಿಸ್ಥಿತಿಯು ಅವರ ಸೇವೆಯನ್ನು ಕುಗ್ಗಿಸುತ್ತಿದೆ.

ಈ ವರ್ಷ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ರಾಜ್ಯಮಟ್ಟದಲ್ಲಿ ಕುಸಿತ ಕಂಡುಬಂದಿದ್ದರೂ, ಗುಲ್ಬರ್ಗಾ ಧರ್ಮಕ್ಷೇತ್ರದ ಕೆಲವೊಂದು ಶಾಲೆಗಳು ಉತ್ತಮ ಸಾಧನೆ ಮಾಡಿವೆ. ಶೇಕಡಾವಾರು ಫಲಿತಾಂಶದ ಆಧಾರದ ಮೇಲೆ ವಿದ್ಯಾರ್ಥಿಗಳ ಸಾಧನೆಯು ಹೀಗಿದೆ:

**90% ಕ್ಕಿಂತ ಮೇಲ್ಪಟ್ಟ ಶಾಲೆಗಳು:** ಸ್ನೇಹ ಸದನ್, ಕಣಕಲ್ (100%), ಲೋಯೊಲಾ, ಸಿಂದಗಿ (100%), ದೀಪಾಲಯ, ಸಂತಪುರ (95%), ಸೈಂಟ್ ಆನ್, ಬಸವಕಲ್ಯಾಣ (95%), ಅನುಗ್ರಹ, ಹಲಬರ್ಗಾ (95%), ಪ್ರೇರಣಾ, ಶೋರಾಪುರ (92%), ಪ್ರೇಮಾಂಜಲಿ, ಉಜಿನಿ (91%), ಸೈಂಟ್ ಜೋಸೆಫ್ ಇಂಗ್ಲಿಷ್ ಮೀಡಿಯಂ, ಬೀದರ್ (91%), ಬೆಥನಿ ಹೈ ಸ್ಕೂಲ್, ಕಲಬುರ್ಗಿ (90%), ಬೆಥನಿ ಇಂಗ್ಲಿಷ್ ಮೀಡಿಯಂ, ಚಿತ್ತಾಪುರ (90%).

**80–89% ಫಲಿತಾಂಶ ಪಡೆದ ಶಾಲೆಗಳು:** ಸೈಂಟ್ ಜೋಸೆಫ್ ಇಂಗ್ಲಿಷ್ ಮೀಡಿಯಂ, ಕಲಬುರ್ಗಿ (88%), ಬೆಥನಿ, ಹುಮನಾಬಾದ್ (86%), ಸ್ನೇಹ ಸಂಗಮ, ವಿಜಯಪುರ (85%), ಮೌಂಟ್ ಕಾರ್ಮೆಲ್, ಶಹಬಾದ್ (85%), ವಿದ್ಯಾ ಜ್ಯೋತಿ, ಹುಲಸೂರ (82%), ಆರ್‌ಎನ್‌ಡಿಎಂ, ಅಲಮೇಲ್ (81%), ಸೈಂಟ್ ಜೋಸೆಫ್ ಕನ್ನಡ ಮಾಧ್ಯಮ, ಬೀದರ್ (80.89%), ಬೆಥನಿ ಕನ್ನಡ ಮಾಧ್ಯಮ, ಚಿತ್ತಾಪುರ (80%).

**70–79% ಫಲಿತಾಂಶ ಪಡೆದ ಶಾಲೆಗಳು:** ಸೈಂಟ್ ಮೇರಿಸ್, ಕೋಟ್ನೂರ (78%), ಸೈಂಟ್ ಮೇರಿಸ್, ಕ್ಯಾಥಡ್ರಲ್ (77%), ಸೈಂಟ್ ಪೀಟರ್, ಶಹಾಪುರ (76%), ಲೋಯೊಲಾ ಇಂಗ್ಲಿಷ್ ಮೀಡಿಯಂ, ವಿಜಯಪುರ (75%), ಸೈಂಟ್ ಜೋಸೆಫ್ ಕನ್ನಡ ಮಾಧ್ಯಮ, ಕಲಬುರ್ಗಿ (72.5%).

**60–69% ಫಲಿತಾಂಶ ಪಡೆದ ಶಾಲೆಗಳು:** ಸೈಂಟ್ ಅಂಬ್ರೋಸ್, ವಾಡಿ (68%), ಸೇಕ್ರಡ್ ಹಾರ್ಟ್, ತಾಳಿಕೋಟೆ (65%), ಬರ್ಣಿ, ಜೇವರ್ಗಿ (62%). 60% ಕ್ಕಿಂತ ಕಡಿಮೆ ಫಲಿತಾಂಶ ಪಡೆದ ಶಾಲೆಗಳು: ಡಾನ್ ಬಾಸ್ಕೋ, ಬಾಬ್ಲಾದ್ (57%), ದಿವ್ಯಜ್ಯೋತಿ, ಭಾಲ್ಕಿ (36%).

ಈ ಅಂಕಿಅಂಶಗಳು ನಮಗೆ ಗಂಭೀರ ಆತ್ಮಪರಿಶೀಲನೆಯ ಅಗತ್ಯವಿದೆ ಎಂದು ಎಚ್ಚರಿಸುತ್ತವೆ. ಕೆಲವೊಂದು ಶಾಲೆಗಳ ಉತ್ತಮ ಸಾಧನೆಯು ಆಶಾಭರವನ್ನೂ ನೀಡಿದರೆ, ಇತರ ಕೆಲವಂತು ದುರ್ಫಲಿತಾಂಶಗಳು ನಮ್ಮ ನಿರ್ಲಕ್ಷ್ಯದ ಪ್ರತಿಬಿಂಬವಾಗಿದೆ. ಶಿಕ್ಷಣದ ಗುಣಮಟ್ಟ ಕೇವಲ ಫಲಿತಾಂಶಗಳಿಂದ ಅಳೆಯಲಾಗದಿದ್ದರೂ, ಅವು ಸಾಕಷ್ಟು ಸೂಚನೆಗಳನ್ನು ನೀಡುತ್ತವೆ.

**ಅಸ್ಸಿಸಿಯ ಸಂತ ಫ್ರಾನ್ಸಿಸ್ ಅವರು:** "ಶಿಕ್ಷಣವು ಕೇವಲ ಮಾತನಾಡುವುದಲ್ಲ, ಅದು ನಡೆಯುವ ತತ್ವ." ಶಿಕ್ಷಕರು ಮತ್ತು ಶಾಲಾ ಆಡಳಿತಗಳು ಶ್ರದ್ಧೆಯಿಂದಾಗಿ ಶಿಸ್ತು, ಪ್ರಾಮಾಣಿಕತೆ ಮತ್ತು ಪ್ರೇರಣೆಯಿಂದ ಶಾಲೆಗಳ ಸ್ತರವನ್ನು ಹತ್ತಿರದ ದಾರಿಗೆ ತಂದುಕೊಳ್ಳಬೇಕು. ಈ ಸತ್ಯವನ್ನು ಸಂತ ಬೊಸ್ಕೋ ಅವರ ಜೀವನವೂ ಪ್ರತಿಬಿಂಬಿಸುತ್ತದೆ – ಅವರು ಶೋಷಿತ ಮಕ್ಕಳಿಗಾಗಿ ಪ್ರಾರ್ಥನೆ, ಶಿಕ್ಷಣ ಮತ್ತು ಉದ್ಯೋಗ ಅವಕಾಶಗಳನ್ನು ಒದಗಿಸಿದರು. ಪೋಷಕರು ಶಾಲೆಗಳೊಂದಿಗೆ ಕೈಜೋಡಿಸದೇ ಹೊರಗಿನಿಂದ ಕಾವಲುದಾರರಾಗಿದ್ದು ಫಲಕಾರಿಯಾಗದು. ಶಿಕ್ಷಣ ಸಹಯೋಗದ ಕಾರ್ಯವಾಗಿದೆ.

**ಪುಟ ಸಂಖ್ಯೆ 16ರಲ್ಲಿ ಮುಂದುವರಿಯುವುದು**





## ಮೇಡೇ – ಪ್ರಕೃತಿಯ ಆಸರೆಗೆ ಸೃಷ್ಟಿಯ ಕರೆ

ಫಾ. ವಿನ್ಸೆಂಟ್ ಫೋರಸ್

"ಈ ಮರದ ಹಣ್ಣು ಊಟಕ್ಕೆ ಎಷ್ಟು ಚೆನ್ನಾಗಿದೆ, ನೋಟಕ್ಕೆ ಎಷ್ಟು ರಮಣೀಯವಾಗಿದೆ, ಜ್ಞಾನಾರ್ಜನೆಗೆ ಎಷ್ಟು ಆಕರ್ಷಣೀಯವಾಗಿದೆ" (ಆದಿಕಾಂಡ 3:6). ದೇವರು ಮಾನವನಿಗೆ ನೀಡಿದ ಅತ್ಯುನ್ನತ ಉಡುಗೊರೆ ಎಂದರೆ ಪ್ರಕೃತಿ. ಆದರೆ ಇಂದಿನ ಮಾನವ ಈ ದೇವದತ್ತ ಉಡುಗೊರೆಯನ್ನು ನಾಶಪಡಿಸುತ್ತಿರುವ ದೃಶ್ಯವಿದು. ಕಲಬುರಗಿ ಮತ್ತು ಬೀದರ್ ಜಿಲ್ಲೆಗಳ ಪರಿಸರ ಸ್ಥಿತಿಗತಿಯು ಇಂದಿನ ದಿನಗಳಲ್ಲಿ ತುರ್ತು ಕ್ರಮಕೈಗೊಳ್ಳುವಂತಹ ಸಂಕೇತವನ್ನು ನೀಡುತ್ತಿದೆ – ಇದು ಪ್ರಕೃತಿಯ "ಮೇಡೇ" ಕರೆಯಾಗಿದೆ!

ಇಂಡಿಯಾನ್ ಸ್ಟೇಟ್ ಆಫ್ ಫಾರೆಸ್ಟ್ ರಿಪೋರ್ಟ್ 2023 (ISFR) ಪ್ರಕಾರ, ಕರ್ನಾಟಕದ ಒಟ್ಟು ಭೂಪ್ರದೇಶದಲ್ಲಿ ಶೇಕಡಾ 20.19 ರಷ್ಟು ಅರಣ್ಯವಿದೆ. ಆದರೆ ಬೀದರ್ ಜಿಲ್ಲೆಯ ಅರಣ್ಯವ್ಯಾಪ್ತಿ ಕೇವಲ ಶೇಕಡಾ 5.15% ಹಾಗೂ ಕಲಬುರಗಿ ಜಿಲ್ಲೆಯಲ್ಲಿ ಶೇಕಡಾ 3.4% ಮಾತ್ರವಿದ್ದು, ಇದು ರಾಜ್ಯ ಸರಾಸರಿಗಿಂತ ಬಹಳಷ್ಟು ಕಡಿಮೆಯಾಗಿದೆ. ಈ ಅರಣ್ಯ ಕುಸಿತವು ಪ್ರತಿ ವರ್ಷ ಹೆಚ್ಚಾಗುತ್ತಲೇ ಇದೆ ಮತ್ತು ಅದರ ಪರಿಣಾಮವಾಗಿ ಪರಿಸರದಲ್ಲಿ ಅನೇಕ ವ್ಯತಿರಿಕ್ತತೆಗಳು ಕಾಣಿಸುತ್ತಿವೆ.

ಈ ಅರಣ್ಯ ನಾಶದಿಂದ ಬೀದರ್ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಹಸಿರು ಗೃಹ ಅನಿಲಗಳ ಪ್ರಮಾಣವು ಹೆಚ್ಚಳವಾಗಿದ್ದು, ತಾಪಮಾನವು ವರ್ಷಕ್ಕೆ ಸರಾಸರಿ 1.2 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗುತ್ತಿದೆ. ಇದರಿಂದಾಗಿ ಹೊತ್ತಡಿಗಳು ಹೆಚ್ಚಾಗುತ್ತಿವೆ, ನೀರಿನ ಕೊರತೆ ಉಂಟಾಗುತ್ತಿದೆ, ಮಳೆಯ ಆವರ್ತನೆ ಗೊಂದಲವಾಗುತ್ತಿದೆ ಮತ್ತು 2023 ರಲ್ಲಿ ಕಲಬುರ್ಗಿ ಜಿಲ್ಲೆಯ ತಾಪಮಾನವು 44 ಡಿಗ್ರಿ ಸೆಲ್ಸಿಯಸ್ ತಲುಪಿದ್ದು ಇದು ಕಳೆದ 20 ವರ್ಷಗಳಲ್ಲಿ ಉಲ್ಲೇಖಿಸಬಹುದಾದ ಗರಿಷ್ಠ ಮಟ್ಟವಾಗಿದೆ. ಈ ಪರಿಸ್ಥಿತಿಗಳು ಜೀವಿಗಳಿಗೂ, ಬೆಳೆಗಳಿಗೂ ಗಂಭೀರ ಪರಿಣಾಮ ಬೀರುತ್ತಿವೆ.

ಪವಿತ್ರ ಪುಸ್ತಕದಲ್ಲಿ ದೇವರಾದ ಸರ್ವೇಶ್ವರ ಮನುಷ್ಯನನ್ನು ಕರೆದುಕೊಂಡು ಹೋಗಿ ಏದೆನ್ ವನವನ್ನು ಕೃಷಿ ಮಾಡುವುದಕ್ಕೂ ಕಾಯುವುದಕ್ಕೂ ಅದರಲ್ಲಿ ಬಿಟ್ಟರು (ಆದಿಕಾಂಡ 2:15). ಇದರಿಂದ ಪ್ರಕೃತಿಯ ರಕ್ಷಣೆಯ ಜವಾಬ್ದಾರಿ ಪ್ರತಿಯೊಬ್ಬ ಮಾನವನ ಮೇಲೆ ಇದೆ. ಯೋಬನು ಹೇಳುತ್ತಾನೆ: "ಹಕ್ಕಿಗಳು ನಿನ್ನನ್ನು ಬೋಧಿಸಲಿ, ಭೂಮಿ ನಿನ್ನನ್ನು ಉಪದೇಶಿಸಲಿ" (ಯೋಬ 12:7–10). ಈ ಶ್ಲೋಕಗಳು ಪ್ರಕೃತಿಯಲ್ಲಿರುವ ಪಾಠಗಳ ಮಹತ್ವವನ್ನು ಸಾರುತ್ತವೆ.

ಕಥೋಲಿಕ ಧರ್ಮಸಭೆಯ ಶಿಕ್ಷಕರೂ, ಸಂತರಿಗೂ ಪರಿಸರದ ರಕ್ಷಣೆಯ ಬಗ್ಗೆ ಅಪಾರ ಎಚ್ಚರಿಕೆಯಾಗಿತ್ತು. ಅಸ್ಸಿಸಿಯ ಸಂತ ಫ್ರಾನ್ಸಿಸ್ ಪ್ರಕೃತಿಯ ಎಲ್ಲ ಜೀವಿಗಳನ್ನು ತಮ್ಮ ಸಹೋದರ–ಸಹೋದರಿಯರಂತೆ ಕರೆದವರು. ಪೋಪ್ ಜಾನ್ ಪಾಲ್ II ಅವರು ಅವರನ್ನು "ಪರಿಸರದ ಆಶ್ರಯಕರು" ಎಂದು ಘೋಷಿಸಿದ್ದರು. ಪೋಪ್ ಫ್ರಾನ್ಸಿಸ್ ಅವರು 2015 ರಲ್ಲಿ ಪ್ರಕಟಿಸಿದ Laudato Si ಎಂಬ encyclical ನಲ್ಲಿ ಭೂಮಿಯು ನಮ್ಮ ಸಾಮಾನ್ಯ ಗೃಹವಾಗಿದ್ದು, ನಾವು ಅದನ್ನು ಕಾಪಾಡಬೇಕಾದ ಜವಾಬ್ದಾರಿ ಹೊಂದಿದ್ದೇವೆ ಎಂಬ ಧ್ವನಿಯನ್ನು ನೀಡುತ್ತಾರೆ. "ಪ್ರಕೃತಿ ನಮ್ಮ ತಾಯಿಯಂತೆಯೇ. ನಾವು ಅವಳನ್ನು ಸ್ಪಂದಿಸುತ್ತಿದ್ದರೆ, ಅವಳು ನಮಗೆ ಪ್ರತಿಫಲವಾಗಿ ಜೀವನವನ್ನು ನೀಡುತ್ತಾಳೆ."

**ಕೀರ್ತನೆ 34:6 – "ಈ ಬಡವನು ಮೊರೆಯಿಟ್ಟನು; ಕರ್ತನು ಕೇಳಿ ಬಾಧೆಯಿಂದ ರಕ್ಷಿಸಿದನು."**

Laudato Si ನ ಉದ್ದೇಶವನ್ನು ಸ್ಪಷ್ಟಗೊಳಿಸಲು ಗುಲ್ಬರ್ಗಾ ಧರ್ಮಕ್ಷೇತ್ರವು 2025 ವರ್ಷದ ಸವಿನೆನಪಿಗೆ ಹಸಿರು ಜುಬಿಲಿಯ ಸಂದರ್ಭದಲ್ಲಿಯೇ ವಿವಿಧ ಹಸಿರು ಚಟುವಟಿಕೆಗಳನ್ನು ಆರಂಭಿಸಿದೆವು. ಈ ಕಾರ್ಯಕ್ರಮಗಳಲ್ಲಿ 2,025ಕ್ಕೂ ಹೆಚ್ಚು ಗಿಡಗಳನ್ನು ನೆಡುವ ಕಾರ್ಯತತ್ಪರ ಯೋಜನೆ, ಪರಿಸರ ಜಾಗೃತಿ ರ್ಯಾಲಿಗಳು, ಪರಿಸರ ಸಂರಕ್ಷಣೆಯ ಕುರಿತು ಶಾಲಾ ಮಕ್ಕಳಿಗೆ ಬೋಧನೆ, ಧರ್ಮಕೇಂದ್ರ ಮಟ್ಟದ 'ಹಸಿರು ದಿನ' ಆಚರಣೆ, ಶಿಕ್ಷಕರಿಗೆ ಪರಿಸರ ಶಿಕ್ಷಣ ಕಾರ್ಯಾಗಾರಗಳು ಮತ್ತು ಪ್ರಕೃತಿಗೆ ಸಂಬಂಧಿಸಿದ ಹಸಿರು ಕ್ರೂಸ್ ಮಾರ್ಗವನ್ನು ಸ್ಥಾಪಿಸುವಂತಹ ಕಾರ್ಯಗಳಿವೆ.

ಯೇಸು ತಮ್ಮ ಪ್ರಾರ್ಥನೆಯಲ್ಲಿ "Give us this day our daily bread" ಎಂದರು. ಈ 'bread' ಎಂದರೆ ಕೇವಲ ಆಹಾರವಲ್ಲ, ಅದು ಪ್ರಕೃತಿಯಿಂದ ದೊರೆಯುವ ಎಲ್ಲಾ ಮೂಲಭೂತ ಅಗತ್ಯಗಳು – ಗಾಳಿ, ನೀರು, ಬೆಳಕು, ಭೂಮಿ, ಹಣ್ಣು, ಸಸ್ಯ, ಆಮ್ಲಜನಕ – ಇವೆಲ್ಲವೂ ದೇವದತ್ತ ದಾನಗಳು. ನಮ್ಮ ಪರಿಸರವನ್ನು ನಾಶಪಡಿಸುವುದು ದೇವರ ದಾನದ ವಿರೋಧಿ ಕ್ರಿಯೆಯಾಗುತ್ತದೆ.

**ಪೋಪ್ ಬೆನೆಡಿಕ್ಟ್ XVI ಅವರು ಹೇಳುತ್ತಾರೆ:** "ಪರಿಸರ ಸಂರಕ್ಷಣೆಯು ಕೇವಲ ಸಾಂಸ್ಕೃತಿಕ ಕರ್ತವ್ಯವಲ್ಲ, ಅದು ಧಾರ್ಮಿಕ ಕರ್ತವ್ಯವೂ ಹೌದು." ನಾವು ಅರಣ್ಯಗಳನ್ನು ಕಡಿದು ನಾಶಪಡಿಸುತ್ತಿರುವುದು, ನದಿಗಳನ್ನು ಕಲುಷಿತಗೊಳಿಸುವುದು, ಗಾಳಿಯನ್ನು ವಿಷಯುಕ್ತಗೊಳಿಸುತ್ತಿರುವುದು–all are sins against creation.

ಈ 'ಮೇಡೇ' ಕರೆಯು ಪ್ರಕೃತಿಯಿಂದಲೂ, ಭೂಮಿಯಿಂದಲೂ, ಪಕ್ಷಿಗಳಿಂದಲೂ, ಮೃಗಗಳಿಂದಲೂ ಕೇಳಿಬರುತ್ತಿರುವ ಸಂಕಟದ ಧ್ವನಿಯಾಗಿದೆ. ನಾವು ಇಂದು ತಕ್ಷಣ ಎಚ್ಚರಿಸದಿದ್ದರೆ, ಭವಿಷ್ಯದಲ್ಲಿ ಬದುಕಲು ಯೋಗ್ಯವಾದ ಭೂಮಿಯೇ ಇರದು. ಈ ಸಂದರ್ಭದಲ್ಲಿ ಪ್ರತಿ ಯಾಜಕರು, ಧರ್ಮಭಗಿನೀಯರು, ಶಿಕ್ಷಕರು, ಪೋಷಕರು ಮತ್ತು ವಿದ್ಯಾರ್ಥಿಗಳು ನವೀಕೃತ ಬದ್ಧತೆಯೊಂದಿಗೆ ಪರಿಸರ ಸಂರಕ್ಷಣೆಗೆ ಮುಂದಾಗಬೇಕು. ನಮ್ಮ ಶಾಲೆಗಳಲ್ಲಿ ಪರಿಸರ ಶಿಕ್ಷಣವು ಕಡ್ಡಾಯವಾಗಬೇಕು. ಪ್ರತಿಯೊಂದು ಶಾಲೆಯು ವರ್ಷಕ್ಕೊಮ್ಮೆ ಹಸಿರು ದಿನವನ್ನು ಆಚರಿಸಬೇಕು.

**ಸಂತ ಪೌಲರು:** ದೇವರ ಮಕ್ಕಳ ಮಹಿಮೆಯು ಯಾವಾಗ ಪ್ರತ್ಯಕ್ಷವಾದೀತೋ ಎಂದು ಸೃಷ್ಟಿ ಸಮಸ್ತವು ಬಹು ಉತ್ಸುಕತೆಯಿಂದ ಎದುರು ನೋಡುತ್ತಿದೆ. (ರೋಮಾ 8:19). ನಾವು ಸೃಷ್ಟಿಯನ್ನು ರಕ್ಷಿಸುವ ಮೂಲಕ ದೇವರ ಮಕ್ಕಳು ಎನ್ನುತ್ತೇವೆ.ಇದನ್ನು ನಾವೆಲ್ಲರೂ ಆತ್ಮಪರಿಶೀಲನೆಯಾಗಿ ನೋಡೋಣ. ಇಂದು ಪ್ರಕೃತಿಯ ಎಲ್ಲ ಅಂಶಗಳಿಂದ "ಮೇಡೇ" ಎಂಬ ಕರೆಯು ಮೊಳಗುತ್ತಿದೆ. ಮನುಷ್ಯ, ಮೃಗ, ಗಾಳಿ, ನದಿ, ಭೂಮಿ ಎಲ್ಲವೂ ಸಹಾಯಕ್ಕಾಗಿ ಮೊರೆಯಿಡುತ್ತಿದೆ. ಈ ಆಕ್ರಂದನಕ್ಕೆ ನಾವು ಸ್ಪಂದಿಸಲೇಬೇಕು. ಮರ ನೆಡುವುದು ಕೇವಲ ಪರಿಸರ ಚಟುವಟಿಕೆ ಅಲ್ಲ – ಅದು ದೇವರೊಂದಿಗೆ ಮಾಡಿದ ಒಡಂಬಡಿಕೆಯ ಪುನರಾವೃತ್ತಿ.

ಆದ್ದರಿಂದ, ಎಲ್ಲರಿಗೂ ಈ ಕಿರುಹೆಜ್ಜೆಯ ಮೂಲಕ ದೊಡ್ಡ ಬದಲಾವಣೆಗೆ ಮೊದಲು ಹಾಕುವ ಪ್ರೇರಣೆಯಾಗಲಿ. ಪ್ರಾರ್ಥಿಸಿ, ನೆಡಿ, ಉಳಿಸಿ!

**ಪುಟ ಸಂಖ್ಯೆ 4ರ ಮುಂದುವರಿದ ಭಾಗ**

ಭಿಕ್ಷೆಯನ್ನು ಸಹಾಯವನ್ನು ಪಡೆಯುವ ಪರಿಸ್ಥಿತಿ ಬಂದಾಗ ದೀನತೆಯಿಂದ ಅದನ್ನು ಪಡೆಯುವ ದೀನ ಸ್ಥಿತಿ ನಮ್ಮಲ್ಲಿರಲಿ. ಅಹಂಕರ, ಅಹಂಬಾವ, ಎಲ್ಲಿಗೂ ಸಲ್ಲದು ಬೇರೆಯವರಿಗೆ ಇಂಥಸ್ಥಿತಿ ಬಂದಾಗ ಅವರನ್ನು ಕಡೆಗಣಿಸದೆ, ಶಿಕ್ಷೆ ಎಚಿದು ಭಾವಿಸದ, ದೇವರನ್ನು ದೂರದೆ ದೀನತೆಯಿಂದ ಸ್ವೀಕರಿಸಿ, ನಮ್ಮ ಜೀವನವನ್ನು ಈಗಲೇ ಸರಿಪಡಿಸಿ ಎಚ್ಚರಿಕೆಯಿಂದ ಸದಾಸಿದ್ದ ಇರುವ ಒಳ್ಳೆಯ ಸೇವಕರಂತೆ ನಾವು ಅಣೋಣ.

ಸ್ವಾಮಿ ನಮಗೆ ಕಾಪಾಡಿ, ನೀವೆ ನಮ್ಮ ರಕ್ಷಕರು. ನನ್ನ ನೆರೆಯವನ ಸಹಾಯ ನಿಮ್ಮಿಂದಲೇ ಬಂದಿದೆ ಎಂದು ಸ್ವೀಕರಿಸುವ ದೀನ ಮನೋಭಾವವನ್ನು ನಮಗೆ ದಯಪಾಲಿಸಿರಿ. ಕೀರ್ತನೆ 91 "ದೇವಾರಾಶ್ರಿತರು ಸುರಕ್ಷಿತರು" ಎನ್ನುತ್ತದೆ. ಈ ದೇಹ, ವಸ್ತು, ಸ್ಥಾನ, ಇವೆಲ್ಲವೂ ಸುರಕ್ಷಿತ ಇಲ್ಲದಿದ್ದರೂ, ನಮ್ಮ ರಕ್ಷಣೆ, ನಮ್ಮ ಆತ್ಮ ದೇವರಲ್ಲ ಸದಾ ಸುರಕ್ಷಿತವಾಗಿರುವಂತೆ ಪ್ರಭುಯೇಸುವಿನಲ್ಲಿ ಸದಾ ನಂಬಿಕೆ ಇಟ್ಟು ಜೀವಿಸೋಣ.

**ಕೀರ್ತನೆ 40:1 – "ನಾನು ಕರ್ತನಿಗಾಗಿ ಕಾಯುತ್ತಿದ್ದೆನು; ಆತನು ನನ್ನ ಪ್ರಾರ್ಥನೆ ಕೇಳಿದನು."**





ಬ್ರದರ್ ಮೆಲ್ವಿನ್

# ಕ್ರೈಸ್ತ ಕುಟುಂಬಗಳು, ಪರಮ ತ್ರಿತ್ವದ ಪ್ರತಿಬಿಂಬಗಳು

ಕಥೋಲಿಕ ಧರ್ಮಸಭೆಯ ಪ್ರಕಾರ, ಮದುವೆಯ ಬಂಧ ಪವಿತ್ರವಾದದು ಮತ್ತು ಅದು ದೇವರಿಂದಲೇ ಬಂದದ್ದು. ಆದರೆ, ಮದುವೆ ಅಥವಾ ವಿವಾಹ ಕೇವಲ ಒಂದು ಪವಿತ್ರ ಬಂಧವಲ್ಲ, ಬದಲಾಗಿ ಒಂದು ಸಂಸ್ಕಾರ – ದೇವರು ಸ್ಥಾಪಿಸಿದ ಅದೃಶ್ಯ ಅನುಗ್ರಹದ ಸದೃಶ್ಯ ಸಂಕೇತ. ವಿವಾಹ ಸಂಸ್ಕಾರದಲ್ಲಿ ಒಂದಾದ ವಧು ಮತ್ತು ವರ, ಗಂಡು ಮತ್ತು ಹೆಣ್ಣು, ಮತ್ತು ಇಡೀ ಪರಿವಾರವು ಪರಮ ತ್ರಿತ್ವದ ಪಿತ, ಸುತ ಮತ್ತು ಪವಿತ್ರಾತ್ಮರ ಪ್ರತಿಬಿಂಬವಾಗುತ್ತಾರೆ. ಕಥೋಲಿಕ ಧರ್ಮ ಗ್ರಂಥವು, ಧರ್ಮಸಭೆಯ ಲೇಖನಗಳು, ಧರ್ಮಶಾಸ್ತ್ರವು, ಮತ್ತು ಸಂತರ ಹೇಳಿಕೆಗಳ ಪ್ರಕಾರ ಕ್ರೈಸ್ತ ಕುಟುಂಬಗಳು ಪರಮ ತ್ರಿತ್ವದ ಪ್ರತಿಬಿಂಬವಾಗಿದೆ.

1. ದೇವರೇ ಅಥವಾ ಪರಮ ತ್ರಿತ್ವವೇ ಕುಟುಂಬದ ರಚನಾಕಾರರು. ಸರ್ವೇಶ್ವರ ಸ್ವಾಮಿ ನುಡಿಯುತ್ತಾರೆ, "ಮನುಷ್ಯನು ಒಬ್ಬಂಟಿಯಾಗಿರುವುದು ಒಳ್ಳೆಯದಲ್ಲ" ಎಂದು ಕಂಡು ಸರ್ವೇಶ್ವರ ದೇವರು ಆದಾಮನ ಪಕ್ಕೆಯ ಎಲುಬುನಿಂದ ಹವ್ವಳನ್ನು ಸೃಷ್ಟಿಸುತ್ತಾರೆ. ಪುರುಷನ ಪಕ್ಕೆಯ ಎಲುಬಿನಿಂದ ಮಹಿಳೆಯನ್ನು ಸೃಷ್ಟಿಸಿದ ದೇವರು, ಆದಾಮ ಮತ್ತು ಹವ್ವಳು ಪರಸ್ಪರ ಪ್ರೀತಿ, ಅನ್ಯೋನ್ಯತೆ ಮತ್ತು ಏಕತೆಯಲ್ಲಿ, ಪರಮ ತ್ರಿತ್ವದಂತೆ ಜೀವಿಸಲಿ ಎನ್ನುವುದನ್ನು ನಾವಿಲ್ಲಿ ಕಾಣುತ್ತೇವೆ. ಅಷ್ಟೇ ಅಲ್ಲ ಇದಕ್ಕೆ ಪ್ರತಿಕ್ರಿಯೆಯಾಗಿ ಆದಾಮನು ಹವ್ವಳನ್ನು ನೋಡಿ– "ಇಗೋ, ನನಗೀಗ ಇವಳು ನನ್ನ ಎಲುಬಿನ ಎಲುಬು ಮತ್ತು ನನ್ನ ಒಡಲಿನ ಒಡಲು" ಎಂದು ವಿವಾಹ ಸಂಸ್ಕಾರಕ್ಕೆ ವ್ಯಾಖ್ಯಾನಿಸುವ ಆಳವಾದ ವಾಕ್ಯಗಳನ್ನು ನುಡಿಯುತ್ತಾನೆ. (ಆದಿಕಾಂಡ 2:23). ದೇವರು ರಚಿಸಿದ ಈ ಕುಟುಂಬವು ಆಕಸ್ಮಿಕವಲ್ಲ ಆದರೆ ಉದ್ದೇಶಪೂರ್ವಕವಾದದ್ದು. "ಅವರಿಬ್ಬರೂ, ಒಂದೇ ಒಡಲಾಗಿ ಬಾಳುವರು" (ಆದಿಕಾಂಡ 2:24)

2. ಪರಮ ತ್ರಿತ್ವವು ಏಕತೆಯ ಮತ್ತು ಐಕ್ಯತೆಯ ಪ್ರತಿರೂಪ. ಹಾಗೇ ಕುಟುಂಬವು ಸಹ ಏಕತೆಯ ಮತ್ತು ಐಕ್ಯತೆಯ ಪ್ರತಿರೂಪ. ಶುಭಸಂದೇಶದಲ್ಲಿ ಯೇಸು ನುಡಿಯುತ್ತಾರೆ, "ಇನ್ನು ಮುಂದೆ ಅವರು ಇಬ್ಬರಲ್ಲ, ಒಂದೇ ಶರೀರ" ಎಂದು. ಪರಮ ತ್ರಿತ್ವದ ಆಳವಾದ ರಹಸ್ಯದಲ್ಲಿ, ಪಿತ, ಸುತ ಮತ್ತು ಪವಿತ್ರಾತ್ಮರು ಒಂದಾಗಿರುವಂತೆ, ಕೇವಲ ಪತಿ–ಪತ್ನಿ ಮಾತ್ರವಲ್ಲ, ಕುಟುಂಬದ ಪ್ರತಿ ಸದಸ್ಯರು ಕೂಡ ಪರಮ ತ್ರಿತ್ವದಂತೆ ಒಂದೇ ಶರೀರವಾಗಿದ್ದು, ಆ ಶರೀರದ ಬೇರೆ ಬೇರೆ ಅಂಗಾಂಗಗಳಂತೆ ಸುಖ ದುಃಖದಲ್ಲಿ, ನೋವು ನಲಿವಿನಲ್ಲಿ, ತ್ಯಾಗ ಸೇವೆಯಲ್ಲಿ, ಐಕ್ಯತೆಯನ್ನು ತೋರ್ಪಡಿಸುತ್ತದೆ.

3. ಪರಮ ತ್ರಿತ್ವವು ಪುನೀತ ಮತ್ತು ಪವಿತ್ರ. ಕ್ರೈಸ್ತ ಕುಟುಂಬಗಳು ಪಾವನತೆಗೆ ಕರೆ ಹೊಂದಿದ್ದು, ಪುನೀತ ಕುಟುಂಬಗಳಾಗಲು ಸಾಧ್ಯ. ಕುಟುಂಬ ಪ್ರಾರ್ಥನೆ, ಧರ್ಮಕೇಂದ್ರದಲ್ಲಿ ಸಕ್ರಿಯ ಸೇವೆ, ಸಮಾಜ ಸೇವೆಯ ಮುಖಾಂತರ ಪುನೀತ ಕುಟುಂಬಗಳಾಗಲು ಸಾಧ್ಯ. ಆದ್ದರಿಂದ, ಕ್ರೈಸ್ತ ಕುಟುಂಬಗಳು, ಪರಮ ತ್ರಿತ್ವದಂತೆ ಪಾವನ ಮತ್ತು ಪುನೀತ.

**ಕೀರ್ತನೆ 50:15 – "ಕಷ್ಟದ ದಿನದಲ್ಲಿ ನನ್ನನ್ನು ಕರೆ; ನಾನು ನಿನ್ನನ್ನು ರಕ್ಷಿಸೆನು."**

4. ಪವಿತ್ರ ತ್ರಿತ್ವವು ವಿಶ್ವಾಸದ ತಾಣ. ಪಿತ ದೇವರು ಸೃಷ್ಟಿ ಕರ್ತನಾಗಿ, ಸುತನು ವಿಮೋಚಕನಾಗಿ, ಮತ್ತು ಆತ್ಮರು ಪೋಷಕರು ಮತ್ತು ಜೀವದಾತರಾಗಿ, ನಮ್ಮ ಜೀವಿತದ ಆಶ್ರಯವಾಗಿ, ವಿಶ್ವಾಸದ ಮೂಲಸ್ಥಾನವಾಗಿದ್ದರೆ. ಹಾಗೇ, ಕ್ರೈಸ್ತ ಕುಟುಂಬಗಳು ಜಪ ತಪ ಎಂಬ ವಿಶ್ವಾಸದ ಪಾಠವನ್ನು ಕಲಿಸಿ, ಸೂಕ್ತ ಶಿಕ್ಷಣವನ್ನು ನೀಡಿ, ಸಂಸ್ಕಾರಗಳ ಅನುಗ್ರಹದಿಂದ ನಮ್ಮನ್ನು ತುಂಬಿ, ಜನನದಿಂದ ಜೀವನ ಅಂತ್ಯದವರೆಗೂ ವಿಶ್ವಾಸದ ಸಾಗರವಾಗಿ ಜೀವನವನ್ನು ಮಾರ್ಪಡಿಸುವ, ವಿಶ್ವಾಸದ ಕೇಂದ್ರಗಳು.

5. ಪರಮ ತ್ರಿತ್ವವು ತ್ಯಾಗದ ನೆಲೆ, ಹಾಗೇ ಕ್ರೈಸ್ತ ಕುಟುಂಬಗಳು. ಪಿತ, ಸುತ ಮತ್ತು ಆತ್ಮರ ಪರಸ್ಪರ ಪ್ರೀತಿ ಮತ್ತು ಅನ್ಯೋನ್ಯತೆ, ತ್ಯಾಗದ ದೈವಿಕ ಸಮುದಾಯ. ಪಿತ ದೇವರು ತಮ್ಮ ಏಕೈಕ ಪುತ್ರನನ್ನು ಜಗತ್ತಿಗೆ ನೀಡಿದರು (ಯೊವಾನ್ನ 3:16). ಪ್ರಭು ಯೇಸು ಕ್ರಿಸ್ತರು ಶಿಲುಬೆಯ ಮೇಲೆ ಮಾನವ ಕುಲಗೋಸ್ಕರ ತಮ್ಮ ಪ್ರಾಣವನ್ನು ಅರ್ಪಿಸಿದರು. ಮತ್ತು ಪವಿತ್ರಾತ್ಮರು ನಮ್ಮೊಂದಿಗಿದ್ದು ನಮ್ಮನ್ನು ಮುನ್ನಡೆಸುವ ತ್ಯಾಗದ ಪ್ರತಿರೂಪಿ. ಹಾಗೇ ಕ್ರೈಸ್ತ ಕುಟುಂಬಗಳು, ಪರಸ್ಪರ ಪ್ರೀತಿಸಿ, ಕ್ಷಮಿಸಿ, ಗೌರವಿಸಿ, ಕುಟುಂಬದ ಅಭಿವೃದ್ಧಿಗಾಗಿ ಶ್ರಮಿಸಿ, ಜೀವಿಸುವ ತ್ಯಾಗದ ನೆಲೆಗಳು.

ಆದ್ದರಿಂದ, ಕ್ರೈಸ್ತ ಕುಟುಂಬಗಳು ಪರಮ ತ್ರಿತ್ವದ ಜೀವಂತ ಪ್ರತಿಬಿಂಬಗಳಾಗಿವೆ. ಪಿತ, ಸುತ ಮತ್ತು ಪವಿತ್ರಾತ್ಮರ ಪ್ರೀತಿಯ, ಏಕತೆಯ ಹಾಗೂ ತ್ಯಾಗದ ಸಂಬಂಧದಂತೆ, ಕುಟುಂಬವು ಕೇವಲ ಸಾಮಾಜಿಕ ಘಟಕವಲ್ಲದೆ, ದೇವರ ಕರೆಯನ್ನು ಕುಟುಂಬ ಜೀವನದಲ್ಲಿ ಅನುಭವಿಸಿ, ಕುಟುಂಬ ಪ್ರೀತಿಯಲ್ಲಿ ಪರಮ ತ್ರಿತ್ವದ ಐಕ್ಯತೆಯನ್ನು ಕಾಣುವ, ವಿಶ್ವಾಸವನ್ನು ಬೆಳೆಸುವ ಒಂದು ಸುಂದರ ತಾಣವಾಗಿದೆ. ಪ್ರತಿ ಕ್ರೈಸ್ತ ಕುಟುಂಬವೂ ತನ್ನ ಜೀವನದ ಮೂಲಕ ಪರಮ ತ್ರಿತ್ವದ ಆಂತರಿಕ ಶಕ್ತಿಯನ್ನು ಬಿಂಬಿಸಲಿ, ಪರಮ ತ್ರಿತ್ವದ ಪ್ರೀತಿಯನ್ನು ಮತ್ತು ವಿಶ್ವಾಸವನ್ನು ಜೀವಿಸಲಿ ಮತ್ತು ಪಸರಿಸಲಿ.





**Sr Amala SSAM**
Joint Secretary
Women Commission

## Nimisha – A Cry Beyond Herself

In a foreign land, a dream took flight,
In healing hands, she held the light.
A woman of strength, a nurse so kind,
With care and love, her heart aligned.

In Oman's winds, her hopes would soar,
To start a clinic, to serve the poor.
But in the shadows, deceit took shape,
Her dreams were trapped in a cruel escape.

A man she trusted turned into fear,
He took her passport, drew her near.
He crushed her plans, denied her grace,
And turned her life into a hopeless race.

He saw her not as soul or flame,
But as a pawn in a selfish game.
One fateful night, she took a stand,
Her trembling heart, her desperate hand.

They call it murder – cold and wrong,
But we hear a different, buried song.
In her silence echoes many cries,
Of sisters trapped 'neath foreign skies.

This isn't just Nimisha's pain,
It's every woman's silent chain.
Her story isn't hers alone –
It speaks of hearts that fight unknown.

Let this not end in hopeless night,
Let her tears become our light.
Her name shall ring beyond the bars,
A voice for justice written in stars.

Even now, a woman dares to dream,
Though the world may tear her seam.
Nimisha, your voice is not the end,
But a rising tide we must defend

**ಕೀರ್ತನೆ 55:17 – “ಸಂಜೆ, ಬೆಳಗ್ಗೆ, ಮಧ್ಯಾಹ್ನ ನಾನು ಮೊರೆಯಿಡುತ್ತೇನೆ; ಆತನು ನನ್ನ ಧ್ವನಿ ಕೇಳುವನು.”**




# ಪ್ರಾರ್ಥನೆ ಮಾತ್ರವೇ ಕುಟುಂಬವನ್ನು ರಕ್ಷಿಸಬಹುದು

ಸೇವಾದರ್ಶಿ ಆನ್ಸಿ ವಿಯೋನ್

ಮಾನವನ ಜೀವನದಲ್ಲಿ ಕುಟುಂಬವು ಅತ್ಯಂತ ಪವಿತ್ರವಾದ, ಆಪ್ತವಾದ ಹಾಗೂ ಪ್ರಭಾವಶಾಲಿಯಾದ ಸಂಬಂಧಗಳ ಗುಚ್ಛವಾಗಿದೆ. ಇದು ವ್ಯಕ್ತಿಯ ಪ್ರಥಮ ಶಾಲೆಯೂ ಹೌದು, ಜೀವನದ ಪಾಠಗಳನ್ನು ಕಲಿಸುವ ಮೊದಲಾದರದ ಮೂಲವೂ ಹೌದು. ಕುಟುಂಬದಿಂದಲೇ ನಾವು ಪ್ರೀತಿ, ಶ್ರದ್ಧೆ, ಸಹಿಷ್ಣುತೆ, ಸಹಾನುಭೂತಿ, ಕಾಳಜಿ ಮತ್ತು ಶಿಸ್ತಿನಂತಹ ಮೌಲ್ಯಗಳನ್ನು ಅರ್ಥಮಾಡಿಕೊಳ್ಳುತ್ತೇವೆ. ಆದರೆ ಇಂದಿನ ಆಧುನಿಕ ಜಗತ್ತಿನಲ್ಲಿ, ಈ ಪವಿತ್ರ ಬಂಧಗಳು ನಿಧಾನವಾಗಿ ಕಿರಿದಾಗುತ್ತಿವೆ. ತಂತ್ರಜ್ಞಾನ, ವೃತ್ತಿಪರ ಜೀವನದ ಒತ್ತಡ, ವೈಯಕ್ತಿಕ ಆಸೆಗಳು ಮತ್ತು ವೈಮನಸ್ಯದಿಂದಾಗಿ ಕುಟುಂಬದ ಒಗ್ಗಟ್ಟು ಬಲಹೀನವಾಗುತ್ತಿದೆ. ಹೃದಯಸ್ಪರ್ಶಿಯಾಗಿ ಒಟ್ಟಾಗಿ ಊಟ ಮಾಡುವ ಸಂಪ್ರದಾಯ, ದಿನದಲ್ಲಿ ಒಂದೂ ಸಾರಿ ಜೊತೆಯಾಗಿ ಮಾತುಕತೆ ಮಾಡುವ ಅಭ್ಯಾಸ, ಕುಟುಂಬದ ಹಿರಿಮೆಯನ್ನು ಅರಿಯುವ ಮನೋಭಾವ ಮಕ್ಕಳು ತಂತ್ರಜ್ಞಾನದಲ್ಲಿ ತೊಡಗಿರುವಾಗ, ಪೋಷಕರು ಉದ್ಯೋಗದ ಗೊಂದಲದಲ್ಲಿ ತಲ್ಲೀನರಾಗಿದ್ದಾರೆ. ಇಂತಹ ಸ್ಥಿತಿಯಲ್ಲಿ, ಕುಟುಂಬದ ಸಂಸ್ಕೃತಿ ಮತ್ತು ಶ್ರದ್ಧೆ ಉಳಿಯುವುದೇ ಪ್ರಶ್ನೆಯಾಗಿದೆ.

ಇದೆಲ್ಲವನ್ನೂ ಹಿಂತಿರುಗಿಸಿ, ಕುಟುಂಬವನ್ನು ಪುನಃ ಒಗ್ಗೂಡಿಸಲು, ಮನಸ್ಸುಗಳನ್ನು ದೇವರಲ್ಲಿ ಕೇಂದ್ರೀಕರಿಸಲು, ಸಂಸ್ಕಾರವನ್ನು ಉಳಿಸಿಕೊಳ್ಳಲು ಒಂದು ಮಾತ್ರ ಶಕ್ತಿಯುತ ಮಾರ್ಗವಿದೆ. ಅದು ಪ್ರಾರ್ಥನೆ. ಇಂದಿನ ಯುಗದಲ್ಲಿ ಕುಟುಂಬಗಳು ಹಲವಾರು ಆಧುನಿಕ ಸವಾಲುಗಳನ್ನು ಎದುರಿಸುತ್ತಿವೆ. ತಾಂತ್ರಿಕ ಅಭಿವೃದ್ಧಿ, ಆರ್ಥಿಕ ತೊಂದರೆ, ಸಮಯದ ಕೊರತೆ ಮತ್ತು ಆತ್ಮೀಯತೆಯ ಅಭಾವ ಇಂತಹ ಸಂದರ್ಭಗಳಲ್ಲಿ, ಪ್ರಾರ್ಥನೆಯು ಮಾತ್ರವೇ ಒಂದು ಕುಟುಂಬವನ್ನು ಒಂದಾಗಿ ಇಟ್ಟುಕೊಳ್ಳಬಲ್ಲ ಶಕ್ತಿಶಾಲಿ ಮಾರ್ಗವಾಗಿದೆ.

ಪ್ರಾರ್ಥನೆ ಕೇವಲ ಧಾರ್ಮಿಕ ಆಚರಣೆ ಅಲ್ಲ. ಇದು ಮನಸ್ಸನ್ನು ಶುದ್ಧಗೊಳಿಸುವ ಆತ್ಮೀಯ ಸಾಧನೆ. ಪ್ರಾರ್ಥನೆ ಮಾಡುವಾಗ ನಾವು ದೇವರ ಮುಂದೆ ನಮ್ಮ ಸಂಕಟ, ಆತಂಕ, ಧನ್ಯತೆ ಹಾಗೂ ಆಶಯಗಳನ್ನು ತೆರೆದಿಡುತ್ತೇವೆ. ಕುಟುಂಬದ ಎಲ್ಲ ಸದಸ್ಯರೂ ಒಟ್ಟಾಗಿ ದೇವರ ಸನ್ನಿಧಿಯಲ್ಲಿ ಕುಳಿತು ಪ್ರಾರ್ಥಿಸುವಾಗ, ಆತ್ಮೀಯತೆ ಬೆಳೆದೀತು, ಭಾವನೆಗಳ ನಡುವಿನ ಅಂತರ ಕಡಿಮೆಯಾಗುತ್ತದೆ, ಒಗ್ಗಟ್ಟಿಗೆ ಪುನಶ್ಚೇತನ ಸಿಗುತ್ತದೆ.

ಬೈಬಲ್, ಭಗವದ್ಗೀತೆ, ಕುರಾನ್ ಅಥವಾ ಯಾವುದೇ ಧರ್ಮಗ್ರಂಥವಾದರೂ ಒಟ್ಟಾಗಿ ಪ್ರಾರ್ಥಿಸುವ ಕುಟುಂಬಗಳು ದೇವರ ಆಶೀರ್ವಾದವನ್ನು ಪಡೆಯುತ್ತವೆ ಎಂಬುದು ಅವುಗಳ ಸಾಮಾನ್ಯ ಸಂದೇಶವಾಗಿದೆ. ಸಮಯ ಬದಲಾಗಬಹುದು, ತಂತ್ರಜ್ಞಾನ ಮುಂದುವರಿಯಬಹುದು, ಜೀವನದ ಶೈಲಿ ವಿಭಿನ್ನವಾಗಬಹುದು. ಆದರೆ, ಮನಸ್ಸುಗಳನ್ನು ಒಗ್ಗೂಡಿಸಲು, ಪರಸ್ಪರ ಸ್ನೇಹವನ್ನು ಬೆಳೆಸಲು, ಮತ್ತು ಮಕ್ಕಳಲ್ಲಿ ನೈತಿಕ ಜವಾಬ್ದಾರಿ ಬೆಳೆಸಲು ಪ್ರಾರ್ಥನೆಗೆ ಸಮಾನವಾದ ಆಯ್ಕೆಯೇ ಇಲ್ಲ.

ಆದ್ದರಿಂದ, ಇಂತಹ ಕಾಲಘಟ್ಟದಲ್ಲಿ, "ಪ್ರಾರ್ಥನೆ ಮಾತ್ರವೇ ಕುಟುಂಬವನ್ನು ರಕ್ಷಿಸಬಲ್ಲದು" ಎಂಬ ಸತ್ಯವನ್ನು ನಾವು ಮತ್ತೆ ಅರಿತುಕೊಳ್ಳಬೇಕು. ಈ ಲೇಖನದಲ್ಲಿ, ಪ್ರಾರ್ಥನೆಯು ಕುಟುಂಬದ ಒಗ್ಗಟ್ಟು, ಶಾಂತಿ ಮತ್ತು ಭಕ್ತಿಗೆ ಹೇಗೆ ಸಹಕಾರಿಯಾಗುತ್ತದೆ ಎಂಬುದನ್ನು ವಿಶ್ಲೇಷಿಸುತ್ತೇವೆ.

**ಕೀರ್ತನೆ 61:1-2 – "ದೇವರೆ, ನನ್ನ ಮೊರೆಯನ್ನು ಕೇಳು  ನನ್ನ ಹೃದಯ ಬೇಸರಗೊಂಡಿರುವಾಗ ನಿನ್ನ ಶರಣಾಗುತ್ತೇನೆ."**

**1. ಪ್ರಾರ್ಥನೆಯ ಶಕ್ತಿ – ಕುಟುಂಬದ ಆಧಾರ:** ಪ್ರಾರ್ಥನೆ ಎಂದರೆ ದೇವರೊಡನೆ ನಡೆಸುವ ಆತ್ಮೀಯ ಸಂಭಾಷಣೆ. ಇದು ಆತ್ಮವಿಶ್ವಾಸ, ಧೈರ್ಯ ಮತ್ತು ಶಾಂತಿಯನ್ನು ಒದಗಿಸುತ್ತದೆ. ಪ್ರತಿದಿನವೂ ಕುಟುಂಬದ ಸದಸ್ಯರು ಒಂದಾಗಿ ಕುಳಿತು ದೇವರನ್ನು ಸ್ಮರಿಸುವುದು ನೈತಿಕ ಮೌಲ್ಯಗಳನ್ನು ಬೆಳೆಸುತ್ತದೆ. ದಿನನಿತ್ಯದ ಗೊಂದಲಗಳ ನಡುವೆ ಕೆಲ ನಿಮಿಷಗಳ ಪ್ರಾರ್ಥನೆ ಮನಸ್ಸಿಗೆ ತಂಪು ನೀಡುತ್ತದೆ. ಯೋಶುವಾ 24:15 "ನಾನು ಮತ್ತು ನನ್ನ ಮನೆತನವು ಕರ್ತನನ್ನು ಸೇವಿಸುತ್ತೇವೆ." ಇದೊಂದು ಶಕ್ತಿಶಾಲಿಯಾದ ಘೋಷಣೆ. ಇದು ನಮಗೆ ತಿಳಿಸುತ್ತದೆ. ಒಂದು ಕುಟುಂಬದ ಉದ್ದೇಶ ದೇವಸೇವೆಯಾಗಬೇಕು.

**2. ಸಂಸ್ಕಾರ ಮತ್ತು ಭಕ್ತಿಯ ಬಿತ್ತನೆ:** ಪ್ರಾರ್ಥನೆಯು ಮಕ್ಕಳು ಶ್ರದ್ಧಾವಂತ ಬದುಕಿಗೆ ಹೇಗೆ ರೂಪುಗೊಳ್ಳಬೇಕು ಎಂಬ ಪಾಠವನ್ನು ಕಲಿಸುತ್ತದೆ. ಮನೆಮಾತುಗಳು, ಪ್ರಾರ್ಥನೆ ಶೀಲಗಳು, ನಿತ್ಯದ ಆರಾಧನೆ. ಜ್ಞಾನೋಕ್ತಿಗಳು 22:6 "ಮಕ್ಕಳನ್ನು ತಾವು ನಡೆಯಬೇಕಾದ ಮಾರ್ಗದಲ್ಲಿ ಓಡಿಸಿ..." ಅವರು ಹೇಗೆ ಬೆಳೆಯುತ್ತಾರೆ ಎಂಬುದು ಪೋಷಕರ ಶೀಲದ ಮೇಲೆ ಅವಲಂಬಿತವಾಗಿದೆ. ಪ್ರಾರ್ಥನೆ ಯುಕ್ತ ಕುಟುಂಬದಲ್ಲಿ ಮಕ್ಕಳಿಗೆ ಸಮರ್ಪಕ ಮಾರ್ಗದರ್ಶನ ದೊರೆಯುತ್ತದೆ.

**3. ಸಂಕುಚಿತ ಕುಟುಂಬದಿಂದ ಸಹಾನುಭೂತಿ ತುಂಬಿದ ಕುಟುಂಬದವರೆಗೆ:** ಇಂದಿನ ತಂತ್ರಜ್ಞಾನ ಪ್ರಪಂಚದಾಗಿ ನೋಡಿದರೆ, ಎಲ್ಲರೂ ತಮ್ಮ ಮೊಬೈಲ್, ಟಿವಿ ಅಥವಾ ಕಂಪ್ಯೂಟರ್‌ಗಳಲ್ಲಿ ತೊಡಗಿರುತ್ತಾರೆ. ಈ ತಂತ್ರಜ್ಞಾನ ನಮಗೆ ಬೌದ್ಧಿಕ ಸುಧಾರಣೆ ನೀಡಬಹುದು, ಆದರೆ ಹೃದಯಗಳನ್ನು ಸಂಪರ್ಕಿಸುವುದಿಲ್ಲ. ಪ್ರಾರ್ಥನೆಯು ಮಾತ್ರವೇ ಸಹಾನುಭೂತಿಯ ಸಂಪರ್ಕವನ್ನು ಉಂಟುಮಾಡುತ್ತದೆ. ಪ್ರಾರ್ಥನೆಯ ಸಂದರ್ಭದಲ್ಲಿ ಎಲ್ಲರೂ ಒಟ್ಟಾಗಿ ಕೂಡಿ ದೇವರ ಸನ್ನಿಧಿಯಲ್ಲಿ ಕುಳಿತುಕೊಳ್ಳುವುದು ಒಂದು ಆತ್ಮೀಯ ಅನುಭವ. ಫಿಲಿಪ್ಪಿಯ 4:6–7 "ಯಾವುದಕ್ಕೂ ಚಿಂತಿಸಬೇಡಿ; ಬದಲಾಗಿ ಪ್ರಾರ್ಥನೆಯ ಮೂಲಕ ದೇವರ ಮುಂದೆ ಬೇಡಿಕೆಗಳನ್ನು ಇಡಿ..." ಈ ವಾಕ್ಯವು ನಮಗೆ ದೇವರ ಮೇಲೆ ನಂಬಿಕೆಯಿಂದ ಬದುಕುವುದನ್ನು ಕಲಿಸುತ್ತದೆ.

**4. ಒಗ್ಗಟ್ಟು, ಶಾಂತಿ ಮತ್ತು ಕ್ಷಮೆಯ ಮೂಲ:** ಪ್ರಾರ್ಥನೆಯು ವ್ಯಕ್ತಿಯ ಮನಸ್ಸನ್ನು ಶುದ್ಧಗೊಳಿಸುತ್ತದೆ. ಇದರ ಮೂಲಕ, ಕುಟುಂಬದ ಒಳಜಗಳಗಳು ಕಡಿಮೆಯಾಗುತ್ತವೆ. ಒಂದಾಗಿರುವ ಮನಸ್ಸುಗಳು ಒಳ್ಳೆಯ ನಿರ್ಣಯಗಳನ್ನು ತೆಗೆದುಕೊಳ್ಳುತ್ತವೆ. ಕ್ಷಮೆಯ ಬುದ್ಧಿ ಬೆಳೆಯುತ್ತದೆ.

ಮತ್ತಾಯ 18:20 "ಎಲ್ಲಿ ಇಬ್ಬರು ಅಥವಾ ಮೂವರು ನನ್ನ ಹೆಸರಿನಲ್ಲಿ ಸೇರುತ್ತಾರೋ, ಅಲ್ಲಿಯಲ್ಲೇ ನಾನು ಅವರ ಮಧ್ಯದಲ್ಲಿರುತ್ತೇನೆ." ಇದು ಒಟ್ಟಾಗಿ ಪ್ರಾರ್ಥಿಸುವ ಶಕ್ತಿಯನ್ನು ಎತ್ತಿ ತೋರಿಸುತ್ತದೆ.

ಪ್ರಾರ್ಥನೆಯು ಕೇವಲ ಧಾರ್ಮಿಕ ಆಚರಣೆ ಅಲ್ಲ. ಇದು ಕುಟುಂಬವನ್ನು ಸಂಯಮ, ಶ್ರದ್ಧೆ ಮತ್ತು ಶಕ್ತಿಯ ಮೂಲಕ ಕಟ್ಟಿಕೊಡುವ ಆಧ್ಯಾತ್ಮಿಕ ಸೇತುವೆ. ಪ್ರತಿದಿನದ ಪ್ರಾರ್ಥನೆ, ದೇವರ ಸನ್ನಿಧಿಯೊಂದಿಗೆ ಕುಟುಂಬದ ಬಾಂಧವ್ಯವನ್ನು ಗಾಢಗೊಳಿಸುತ್ತದೆ. ಯಾವ ಸಂಜೆಯಾದರೂ, ಎಲ್ಲರೂ ಒಂದಾಗಿ ಕುಳಿತು ಪ್ರಾರ್ಥಿಸುವ ಕ್ಷಣಗಳು ಅವು ಕುಟುಂಬದ ಪಾಲಿಗೆ ಅಮೂಲ್ಯವಾದ ಸಂಬಂಧದ ನೆನಪಾಗಿ ಉಳಿಯುತ್ತವೆ. ಆದ್ದರಿಂದ, ಸಮಯ ಏನೇ ಆಗಿರಲಿ, ಬದುಕಿನ ಯಾವ ಹಂತದಲ್ಲೇ ಇದ್ದರೂ, ಪ್ರಾರ್ಥನೆಗೆ ಸ್ಥಳವಿರಲಿ. ಏಕೆಂದರೆ ಪ್ರಾರ್ಥನೆ ಮಾತ್ರವೇ ಕುಟುಂಬವನ್ನು ಶಾಶ್ವತವಾಗಿ ರಕ್ಷಿಸಬಲ್ಲದು.

**ಪುಟ ಸಂಖ್ಯೆ 10ರ ಮುಂದುವರಿದ ಭಾಗ**

ಪೋಪ್ ಬೆನೆಡಿಕ್ಟ್ XVI ಅವರು ಹೇಳಿದರು: "ನಿಜವಾದ ಶಿಕ್ಷಣ ಎಂದರೆ, ಅದು ನೈತಿಕ ಜವಾಬ್ದಾರಿಯನ್ನು ರೂಪಿಸುತ್ತೆ. ಅದು ಕೇವಲ ಜ್ಞಾನ ನೀಡುವುದಲ್ಲ, ಆತ್ಮವನ್ನೂ ಬೆಳೆಯಿಸುತ್ತದೆ." ಈ ಮಾತುಗಳಂತೆ, ನಮ್ಮ ಶಾಲೆಗಳು ಪುನಃ ಆತ್ಮಬಲವಂತವಾಗಬೇಕು. ಶಿಕ್ಷಣವೆಂದರೆ ಕೇವಲ ಮಕ್ಕಳ ಭವಿಷ್ಯವಲ್ಲ, ಅದು ಸಮಾಜದ ಆತ್ಮದ ಪ್ರತಿಬಿಂಬ.

ಆದ್ದರಿಂದ 'ಮೇಡೇ' ಎಂಬ ತುರ್ತು ಕರೆ ಇಂದು ನಮ್ಮ ಎಲ್ಲಾ ಶಾಲೆಗಳ ಬಾಗಿಲಲ್ಲಿ ಮೊಳಗುತ್ತಿದೆ. ಶಾಲಾ ಆಡಳಿತ ಮಂಡಳಿಗಳು, ಶಿಕ್ಷಕರು, ಪೋಷಕರು – ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಬೇಕಾಗಿದೆ. ನಾವು ತಕ್ಷಣ ಎಚ್ಚರಿಕೆಯಿಂದ ಕ್ರಮ ಕೈಗೊಂಡು ಬದಲಾವಣೆ ತರದಿದ್ದರೆ, ಮುಂದಿನ ತಲೆಮಾರಿಗೆ ನಾವು ತಲೆಬಾಗುವಂತಾಗುತ್ತದೆ.

**ಕೀರ್ತನೆ 66:19 – "ದೇವರು ನನ್ನ ಪ್ರಾರ್ಥನೆಯನ್ನು ಆಲಿಸಿದನು."**





# ಋತುಪರ್ಣ ಸುಂಧರಿಯ ಸೀತಾಫಲ

ಬ್ರದರ್ ಸಚಿನ್ ಮೊಂತೇರೊ,
ಮೈಸೂರು

"ದೇವರು ತಾನು ಸೃಷ್ಟಿಸಿದ ಎಲ್ಲವನ್ನೂ ನೋಡಿ, ಅದನ್ನು ಚೆನ್ನಾಗಿತ್ತು ಎಂದು ಹೇಳಿದರು." (ಆದಿಕಾಂಡ 1:31). ಈ ಪವಿತ್ರ ಶ್ಲೋಕವು ನಮಗೆ ಪ್ರಕೃತಿಯ ಎಲ್ಲ ಸೃಷ್ಟಿಗಳ ಪವಿತ್ರತೆಯನ್ನು ನೆನಪಿಸುತ್ತದೆ. ದೇವರು ನೀಡಿದ ಆ ಸೃಷ್ಟಿಗಳ ಪೈಕಿ ಸೀತಾಫಲವೂ ಒಂದು ದೈವೀ ಉಡುಗೊರೆ. ಗುಲ್ಬರ್ಗಾ ನಗರದಿಂದ ಹುಮ್ನಾಬಾದ್ ಹಾದಿಯಲ್ಲಿ ನಾವು ಪ್ರಯಾಣಿಸಿದಾಗ, ಮಳೆಗಾಲದ ನಂತರ ಹಸಿರಿನಿಂದ ಹೊಳೆಯುವ ಪರಿಸರದ ನಡುವೆ ರಸ್ತೆಯ ಬದಿಯಲ್ಲಿ ನೂರಾರು ಸೀತಾಫಲ ಮಾರಾಟದ ಗಾಡಿಗಳು ಕಣ್ಣಿಗೆ ಬೀಳುತ್ತವೆ. ಈ ಹಣ್ಣು ಕೇವಲ ಆಹಾರವಲ್ಲ, ಇದು ದೇವದತ್ತ ಔಷಧ ಕೂಡ ಹೌದು.

**ಸೀತಾಫಲದ ಪ್ರಾಕೃತಿಕ ಪರಿಚಯ :** ಸೀತಾಫಲ (ಅಥವಾ ಸೀತಾ ಹಣ್ಣು) Annonaceae ಕುಲಕ್ಕೆ ಸೇರಿದ ಹಣ್ಣು. ವೈಜ್ಞಾನಿಕವಾಗಿ Annona squamosa ಎಂದು ಕರೆಯಲ್ಪಡುವ ಈ ಹಣ್ಣು ಉತ್ತರ ಕರ್ನಾಟಕದಲ್ಲಿ ತಾನಾಗಿ ಬೆಳೆಯುವ ಸಹಜ ಸಸ್ಯ. ಇದರ ಸಿಹಿತನ, ನಯವಾದ ಬಿಳಿ ಗುಡುರಿ, ಮತ್ತು ಆಂತರಿಕ ತಂಪುಭಾವವು ದೇಹಕ್ಕೆ ಶಾಂತಿ ನೀಡುತ್ತದೆ. "ಪವಿತ್ರಾತ್ಮದ ಫಲವೆಂದರೆ ಪ್ರೀತಿಯು, ಸಂತೋಷವು, ಶಾಂತಿಯು..." (ಗಲಾತ್ಯ 5:22) ಎಂದು ಪೌಲನು ಬರೆದಿದ್ದಂತೆ, ಈ ಹಣ್ಣು ದೇಹ–ಮನಸ್ಸಿಗೆ ಆಂತರಿಕ ಶಾಂತಿ ನೀಡುವ ಪ್ರಾಕೃತಿಕ ಫಲವಾಗಿದೆ.

**ಆಯುರ್ವೇದ ಮತ್ತು ಕ್ರೈಸ್ತ ದೃಷ್ಟಿಕೋಣ:** ಆಯುರ್ವೇದದ ಪ್ರಕಾರ, ಸೀತಾಫಲವು ಮಧುರ ರಸ, ಶೀತ ವೀರ್ಯ ಹೊಂದಿದ್ದು ದೇಹಕ್ಕೆ ಶಕ್ತಿಯುಂಟುಮಾಡುತ್ತದೆ. ಕ್ರೈಸ್ತ ಆಧ್ಯಾತ್ಮಿಕ ದೃಷ್ಟಿಕೋನದಲ್ಲಿ, ದೇಹವು ದೇವರ ಮಂದಿರ (1 ಕೊರಿಂಥ 6:19) ಎಂಬ ಕಾರಣದಿಂದಾಗಿ ನಾವು ನಮ್ಮ ದೇಹದ ಆರೋಗ್ಯದತ್ತ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಈ ಹಣ್ಣು ದೇಹವನ್ನು ತಂಪುಗೊಳಿಸುವ ಮೂಲಕ ತೀವ್ರವಾದ ಉಷ್ಣದ ಖಾಯಿಲೆಗಳಿಂದ ದೂರ ಇಡುತ್ತದೆ.

**ಸೀತಾಫಲದ ಔಷಧೀಯ ಉಪಯೋಗಗಳು:** ಶಾಂತಿಯುಂಟುಮಾಡುವ ಶಕ್ತಿಯು: ತೀವ್ರ ಮನುಷ್ಯ ಸಂತಾಪದ ಸಮಯದಲ್ಲಿ – ಉದಾಹರಣೆಗೆ ದುಃಖ, ಒತ್ತಡ – ಸೀತಾಫಲದ ಸೇವನೆಯು ದೇಹವನ್ನು ತಂಪುಗೊಳಿಸಿ ಮನಸ್ಸಿಗೆ ಸಮಾಧಾನ ನೀಡುತ್ತದೆ. ಈ ದೃಷ್ಟಿಕೋನದಲ್ಲಿ, "ನಿಮ್ಮ ಚಿಂತೆಗಳನ್ನೆಲ್ಲಾ ದೇವರಿಗೆ ಒಪ್ಪಿಸಿ" ಎಂಬ ಪೇತ್ರನ ಬೋಧನೆ (1 ಪೇತ್ರ 5:7) ಪ್ರಾಮುಖ್ಯತೆಯಾಗಿದೆ.

**ದಯೆಯ ಫಲವಾಗಿ ಆಹಾರ:** ಇಸ್ರಾಯೇಲರಿಗೆ ಮನು ನೀಡಿದ ದೇವರು, ಇವತ್ತಿನ ದಿನಗಳಲ್ಲಿ ನಮ್ಮ ಪರಿಸರದಲ್ಲಿಯೇ ನಾವು ಬೆಳೆದಂತಹ ಆಹಾರಗಳ ಮೂಲಕ ನಮ್ಮ ಮೇಲಿನ ಪ್ರೀತಿಯನ್ನು ತೋರಿಸುತ್ತಾನೆ. ಸೀತಾಫಲವೂ ಅವುಗಳಲ್ಲಿ ಒಂದಾಗಿದೆ.

**ರೋಗ ನಿರೋಧಕ ಶಕ್ತಿ:** ವಿಟಮಿನ್ ಅ ಯಿಂದ ಕೂಡಿರುವ ಈ ಹಣ್ಣು ದೇಹದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ – ದೈವಿಕ ಆರೋಗ್ಯವಿಧಾನದ ಪ್ರಕಾರ ಇದು ದೇವರ ರಕ್ಷಣೆಯ ಪಾತವಾಗಿದೆ.

**ಗರ್ಭಿಣಿಯರಿಗಾಗಿ ದೇವರ ದೈವಿಕ ಆರೈಕೆ:** ತಾಯಿ ಗರ್ಭದಲ್ಲಿರುವ ಶಿಶು ದೇವರಿಂದ ಇಟ್ಟ ಪರಮ ಉಡುಗೊರೆ.

**ಕೀರ್ತನೆ 69:33 – "ಕರ್ತನು ಬಡವರನ್ನು ಕೇಳುವನು; ಬಂಧಿತರನ್ನು ತಿರಸ್ಕರಿಸುವುದಿಲ್ಲ."**

ಗರ್ಭಿಣಿಯರು ಈ ಹಣ್ಣನ್ನು ಸೇವಿಸಿದರೆ ತಾಯಿ ಮತ್ತು ಶಿಶು ಎರಡಕ್ಕೂ ಪೋಷಣೆಯುಂಟಾಗುತ್ತದೆ.

ಪವಿತ್ರತೆ ಮತ್ತು ಶುದ್ಧತೆ: ಹಣ್ಣು ಶುದ್ಧ, ಅದನ್ನು ಸ್ವಲ್ಪವೂ ತಯಾರಿಕೆ ಅಥವಾ ಸಂಸ್ಕರಣೆ ಇಲ್ಲದೆ ಸೇವಿಸಬಹುದು. ಯೇಸು ಹೇಳಿದರು: "ಆತ್ಮವನ್ನೆಲ್ಲಾ ಶುದ್ಧವಾಗಿಡಿ." (ಮತ್ತಾಯ 5:8) ಎಂಬ ಭಾವವನ್ನು ಪ್ರತಿಬಿಂಬಿಸುವ ಹಣ್ಣು ಇದಾಗಿದೆ.

**ಬೀಜಗಳ ಉಪಯೋಗ:** ಸೀತಾಫಲದ ಬೀಜಗಳನ್ನು ಪುಡಿ ಮಾಡಿ ಹೊರಾಂಗವಾಗಿ ಉಪಯೋಗಿಸಿದರೆ ಹುಳಗೆ ನಿವಾರಣೆ, ತಲೆನೋವು, ಕೂದಲಿಗೆ ಪೋಷಣೆ ಇತ್ಯಾದಿಗಳಿಗೆ ಸಹಕಾರಿಯಾಗುತ್ತದೆ. ಆದರೆ ಶೋಧಿತ ಜ್ಞಾನದಿಂದ ಮಾತ್ರ ಉಪಯೋಗಿಸಬೇಕು.


**ಪರಿಸರದ ದೈವೀ ಕರ್ತವ್ಯ:** ಪೋಪ್ ಫ್ರಾನ್ಸಿಸ್ ಅವರ Laudato Si ಪತ್ರದಲ್ಲಿ ನಾವು ಭೂಮಿಯನ್ನು "ನಮ್ಮ ಸಾಮಾನ್ಯ ಗೃಹ" ಎಂದು ತಿಳಿದುಕೊಳ್ಳಬೇಕು ಎಂದು ಹೇಳಿದರು. ಸೀತಾಫಲದ ಮರಗಳು ಮಳೆಗಾಲದ ಕೊನೆಯಲ್ಲಿ ಪರಿಸರಕ್ಕೆ ಶುದ್ಧ ಗಾಳಿ ನೀಡುತ್ತವೆ. **"ಸೃಷ್ಟಿಯು ದೇವರನ್ನು ಘೋಷಿಸುತ್ತಿದೆ"** (ಜೋಬ 12:7–10). ಸೀತಾಫಲದ ಮರವು ನಿಶ್ಚಲವಾಗಿ ಆ ಘೋಷಣೆಯನ್ನು ದಿನೇ ದಿನೇ ಮಾಡುವಂತಹ ಜೀವಂತ ಉದಾಹರಣೆ.

**ಸ್ಥಳೀಯ ಜನರ ಬದುಕಿಗೆ ಆಶಾಕಿರಣ:** ಗುಲ್ಬರ್ಗಾ, ಬೀದರ್, ಬಿಜಾಪುರ ಮತ್ತು ಹುಮ್ನಾಬಾದ್ ರೈತರು ತಮ್ಮ ತೋಟಗಳಲ್ಲಿ ಈ ಮರಗಳನ್ನು ಬೆಳೆಸುವ ಮೂಲಕ ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುತ್ತಿದ್ದಾರೆ. ಇದು ಕೇವಲ ಆರ್ಥಿಕ ಸಾಧನವಲ್ಲ, ಇದು ದೇವರ ದಯೆಯಿಂದ ಜೀವಿತಕ್ಕೆ ಬಂದ ಸಮೃದ್ಧಿ.

**ಪವಿತ್ರ ಪಾಠಗಳು:** ಪ್ರಕೃತಿಯೊಂದಿಗೆ ನೆಲೆ: ದೇವರು ಎಲ್ಲಾ ಹಣ್ಣುಗಳನ್ನು ಕೇವಲ ಆಹಾರಕ್ಕೆ ಮಾತ್ರವಲ್ಲ, ಔಷಧೀಯ ಉಪಯೋಗಕ್ಕೂ ಸೃಷ್ಟಿಸಿದ್ದಾರೆ. ದೇಹವನ್ನು ದೇವರ ಮಂದಿರವೆಂದು ನೋಡಿ, ನಾವು ಸೇವಿಸುವ ಆಹಾರಗಳ ಗುಣಮಟ್ಟಕ್ಕೆ ಗಮನ ಕೊಡಬೇಕು.

**ಪರಿಸರ ಸ್ನೇಹಿ ಜೀವನ:** ಪ್ರತಿಯೊಬ್ಬ ಕ್ರೈಸ್ತನು Laudato Si ಯ ಪ್ರಕಾರ ಪರಿಸರ ಸಂರಕ್ಷಣೆಯಲ್ಲಿ ಪಾಲ್ಗೊಳ್ಳಬೇಕಿದೆ. ಒಂದು ಮರ ನೆಡುವುದು ಒಂದು ಪ್ರಾರ್ಥನೆಯಂತೆಯೇ. ನೀವು ಮಾಡಬಹುದಾದ ಧಾರ್ಮಿಕ ಕಾರ್ಯಗಳು: ಮನೆಬಾಗಿಲಿನಲ್ಲಿ ಒಂದು ಸೀತಾಫಲದ ಮರ ನೆಡಿ ಎಲ್ಲಾ ಕಾಲದಲ್ಲಿ ಬಡ ಮಕ್ಕಳಿಗೆ ಹಣ್ಣು ದಾನ ಮಾಡಿ, ಧರ್ಮಕೇಂದ್ರದ ಮಟ್ಟದಲ್ಲಿ ಹಣ್ಣುಗಳ ದಿನಾಚರಣೆ ಮಾಡಿ, ಸಜೀವ ಆಹಾರಗಳ ಬಗ್ಗೆ ಬೋಧನೆ ಮಾಡಿ ಸೀತಾಫಲ – ಹಸಿವು ತಣಿಸುವುದಷ್ಟೇ ಅಲ್ಲ, ದೇಹಕ್ಕೆ ತಂಪು, ಆತ್ಮಕ್ಕೆ ಶಾಂತಿ, ಪರಿಸರಕ್ಕೆ ಶುದ್ಧತೆ ನೀಡುವ ಹಣ್ಣು. ಈ ಫಲ ನಿನ್ನ ಪಾಲಿಗೆ 'ದೇವರ ವರ'ವಾಗಿದೆ. ಈ ಹಣ್ಣಿನ ಮೂಲಕ ದೈವಿಕ ಪ್ರೀತಿ, ಆರೋಗ್ಯದ ಬೋಧನೆ ಮತ್ತು ಪರಿಸರದ ಪ್ರಾಮುಖ್ಯತೆಯ ಪಾಠ ನಮಗೆ ದೊರೆಯುತ್ತದೆ. ನಾವು ಈ ಸೀತಾಫಲವನ್ನು ಸೇವಿಸುವಾಗ ದೇವರ ಸೃಷ್ಟಿಯ ಮಹತ್ವವನ್ನು ಸ್ಮರಿಸೋಣ.

"ಎಲ್ಲವನ್ನೂ ದೇವರ ಮಹಿಮೆಗಾಗಿ ಮಾಡಿ" (1 ಕೊರಿಂಥ 10:31) ಎಂಬಂತೆ, ನಮ್ಮ ಆಹಾರವೂ, ಪರಿಸರವೂ, ಜೀವನಶೈಲಿಯೂ ದೇವರ ಮಹಿಮೆಯ ಪ್ರತಿಬಿಂಬವಾಗಲಿ.



**ಕೀರ್ತನೆ 86:6-7 – "ನನ್ನ ವಿಜ್ಞಾಪನೆಯ ಶಬ್ದವನ್ನು ಕೇಳು ನಾನು ನಿನ್ನನ್ನು ಕರೆಯುವೆನು."**





## ವಿಶ್ವಾಸದ ಪಯಣದಲ್ಲಿ ಸಮುದ್ರದ ಅಲೆಗಳು

ಸಿ. ಜೇನ್ ಪಾಯ್ಸ್, ಬೆಥನಿ

ಒಂದು ಬಿರುಗಾಳಿಯ ಮಧ್ಯದಲ್ಲಿ, ಒಂದೇ ಕಕ್ಷೆಗೆ ನಿಂತ ನಮ್ಮೆಲ್ಲರ ಕಥೆಯೂ ಆ ಪೇತ್ರನ ಕಥೆಯಂತೆಯೇ ಆಗಿದೆ. ಮಂಜು ಮುಸುಕಿದ ದೀಪದ ಬೆಳಕಿನ ನಡುವೆ, ಮರುಭೂಮಿಯ ಹಂಬಲದಂತೆ, ಸಮುದ್ರದ ಅಲೆಗಳ ನಡುವೆ, ಒಂದು ಧೈರ್ಯದ ಹೆಜ್ಜೆ ಇಡಲಾಗಿತ್ತು – ಆದರೆ ಕ್ಷಣ ಮಾತ್ರದಲ್ಲಿ ಅದು ಭಯದ ಬೂದಿಯಾಗಿ ಕರಗಿ ಬಿಟ್ಟಿತು. ಆಕಾಲಿಕವಾಗಿ ಎದ್ದು ಬರುವ ಅಲೆಗಳು, ಮೂರನೆಯ ಗಡಿಯ ನೆಗಿಲುಗಳನ್ನು ಛಿದ್ರಮಾಡುವ ಗಾಳಿಗಳ ನಡುವೆ, ಪೇತ್ರನು ತನ್ನ ನಿಟ್ಟಿನ ದೃಷ್ಟಿಯನ್ನು ಯೇಸುವಿನ ಕಡೆ ಇಟ್ಟು ನಡೆಯತೊಡಗಿದನು. ಅವನು ತನ್ನ ಪಾದಗಳಲ್ಲಿ ಸಮುದ್ರವಿಲ್ಲ, ತನ್ನ ಚಿತ್ತದಲ್ಲಿ ಭಯವಿಲ್ಲವೆಂಬಂತೆ ನಡೆಯುತ್ತಿದ್ದನು. ಆದರೆ ಹೇಗೆಂದರೂ ಕಣ್ಣು ಅಲೆಗಳೆಡೆ ತಿರುಗಿತು. ಕ್ಷಣಮತ್ರದಲ್ಲಿ ವಿಶ್ವಾಸದ ಭದ್ರತೆ ಹಿಮದಂತೆ ಕರಗಿತು. ಉಸಿರುಗಟ್ಟಿದಂತೆ, ಆತನು ಮುಳುಗಲು ಆರಂಭಿಸಿದನು.

ಅದೇ ಕ್ಷಣದಲ್ಲಿ ಹೊರಬಂದ ಆ ನುಡಿಮುತ್ತು – "ಸ್ವಾಮಿ, ನನ್ನನ್ನು ರಕ್ಷಿಸು!" – ಅದು ನಿನ್ನ ನಾಳೆಯ ಪ್ರಾರ್ಥನೆ ಕೂಡ ಹೌದು. ಅದು ನಿನ್ನ ನನ್ನ ಹೃದಯದ ನಾಳಗಳಲ್ಲಿ ಹೊಕ್ಕು ನಿಂತಿರುವ ನಿಸ್ಸಹಾಯಕತೆಯ ಮೊರೆಯಾಗಿದೆ. "ಮೇಡೇ!" – ನಾವಿನ್ನೂ ಹೇಳುತ್ತೇವೆ. ಬಿಟ್ಟುಕೊಡುತ್ತಿದ್ದೇವೆ, ಆದರೆ ಅಲ್ಲಿರುವನು ಎನ್ನುವ ವಿಶ್ವಾಸವೊಂದು ಉಳಿದಿದೆ. ದೇವರ ದಯೆ ಎಂದಿಗೂ ಮುಳುಗುವುದಿಲ್ಲ. ಪೇತ್ರನಿಗೋಸ್ಕರ, ಆ ಕೈ ತಕ್ಷಣವೇ ಚಾಚಲ್ಪಟ್ಟಿತು. ಕರ್ತನು ತಡಮಾಡಲಿಲ್ಲ. ದೇವರ ಕೈಯು ದಾರಿ ತಪ್ಪಿದ ಶಿಷ್ಯನನ್ನು ಧೈರ್ಯದಿಂದ ಎತ್ತಿ ಹಿಡಿದಿತು.

ಅದೊಂದು ಶಬ್ದವಲ್ಲ, ಅದು ನಿನ್ನ ಆತ್ಮದ ಪ್ರಾರ್ಥನೆ. “ಸ್ವಾಮಿ, ನನ್ನನ್ನು ರಕ್ಷಿಸು!” ಎಂಬ ಪ್ರಾರ್ಥನೆಯು ಕನಸಲ್ಲಿ ನಾನೊಂದು ಮೊಗವಿಲ್ಲದ ಭೀತಿಯಿಂದ ಓಡುತ್ತಿರುವಂತೆ – ಏನೂ ಹಿಡಿಯಲಾಗದ, ಯಾವುದೂ ಅರ್ಥವಾಗದ ಕ್ಷಣಗಳಲ್ಲಿ ಹೊಡೆಯುವ ದೇವರ ಬಾಗಿಲು.

ಪೇತ್ರನಿಗೆ ಆ ಕ್ಷಣ ನಂಬಿಕೆಯ ನಾಳೆಯ ಉಸಿರು ಅಂತಹದ್ದು. ದೇವರ ನಂಬಿಕೆಯ ಆ ಭಿನ್ನಧ್ವನಿಯ ಸೆಳೆವಳಿಯಂತಿದ್ದುದು. ನಾವು ಎಲ್ಲರೂ, ಸಮಯದ ಒತ್ತಡ, ಪಾಪದ ಭಾರ, ನಿರಾಶೆಯ ಭೀಕರ ಮೌನದ ನಡುವೆ, ಅಂತಹ ಪ್ರಾರ್ಥನೆಗಳನ್ನು ನಮ್ಮ ಹೃದಯದ ಅಗಾಧತೆಯಿಂದ ಕೂಗಿದವರಾಗಿದ್ದೇವೆ.

ಈ ನುಡಿಗೆ ಪೂಜ್ಯತೆಯ ಒರೆಯಿದೆ, ನಿರೀಕ್ಷೆಯ ಚಿಲುಮೆಯಿದೆ. ಅದು ನಾನಾ ಶಬ್ದಗಳಲ್ಲಿ ಮೂಡಬಹುದಾದರೂ, ಅರ್ಥ ಒಂದೇ – "ನಾನು ನಿನಗೆ ಬೇಕು ಕರ್ತನೇ!" ಪವಿತ್ರ ಪುಸ್ತಕದಲ್ಲಿ ಪುನಃ ಪುನಃ ಪ್ರತಿಧ್ವನಿಸುತ್ತದೆ. ಕೀರ್ತನೆಗಾರನು ಮೊರೆಯಿಡುತ್ತಾನೆ – “ನೀರು ನನ್ನೆದುರಿಗೆ ಬಂದಿದೆ ದೇವಾ! ನನ್ನನ್ನು ರಕ್ಷಿಸು!” ಪೌಲನು ಧ್ವನಿ “ಯಾರು ಕರ್ತನ ಹೆಸರೆತ್ತಿ ಕರೆಯುತ್ತಾರೋ ಅವರು ರಕ್ಷಿಸಲ್ಪಡುತ್ತಾರೆ.”

ಪೇತ್ರನು ಸಾಗರದ ಹಾದಿಯಲ್ಲಿ ನಡೆಯುತ್ತಿದ್ದನು, ನಾವೂ ಜೀವನದ ಸಾಗರದಲ್ಲಿ ನಡೆಯುತ್ತಿದ್ದೇವೆ. ಆದರೆ ವಿಶ್ವಾಸದಿಂದಲೇ ಅಲ್ಲ – ಪ್ರೀತಿಯಿಂದ ಅಲ್ಲದಿದ್ದರೂ, ಆತನು ಹತ್ತಿರವಿದ್ದಾನೆ.

**ಕೀರ್ತನೆ 91:15 – “ಅವನು ನನ್ನನ್ನು ಕರೆಯುವಾಗ ನಾನು ಉತ್ತರಿಸೆನು.”**

ವಿಶ್ವಾಸವು ಪರಾಕಾಷ್ಠೆಗೇರುವ ಮುನ್ನದ ಭಯದ ಮಳಿಗೆ. ನಾವು ನಂಬಿದ ಕ್ಷಣ, ಬಿರುಗಾಳಿ ಬರುವುದು ಖಚಿತ. ಯೇಸು ಎಂದು ಹೇಳಿದರು: "ಶಾಂತವಾಗು" ಆದರೆ ಅಲ್ಲಿಯ ನಂತರ ಯಾವ ಹಣೆ ಹಾಕಿಲ್ಲ. ಸಾಗರ ಬಿರುಗಾಳಿಯ ನಡುವೆ **"ಶಾಂತವಾಗು"** ಎಂದದ್ದು, ನಂಬಿಕೆಗೆ ನೀಡಿದ ಆಹ್ವಾನ. ನಾವು ಅಲ್ಲಿಗೆ ಹೆಜ್ಜೆ ಇಟ್ಟ ಕ್ಷಣ, ಭರವಸೆ ಮತ್ತು ಶಕ್ತಿಯ ದಾರಿ ಆರಂಭವಾಗುತ್ತದೆ. ಆದರೆ ಈ ದಾರಿ ಸಮಶೀಲವಲ್ಲ, ಇದು ಸಂಕೀರ್ಣವಾದ ಪರ್ವತಾರೋಹಣ. ಎತ್ತಲೂ ಸಾಗರದ ನಡುವೆ ನಡೆವ ನೂಕಾಟ.

ಆಗ, ಕರೆಯುವುದು ಮಾತ್ರ ಉಳಿದಿರುತ್ತದೆ. "ಸ್ವಾಮಿ " ಅನ್ನುವುದು ನಿಷ್ಕಪಟ ದಿಕ್ಕಿನಂತೆ.

ಆಹಾ! ಕರ್ತನ ಕೈ! ಅದು ತಕ್ಷಣವೇ ಹತ್ತಿರ ಬರುತ್ತದೆ. ಅದು ಪ್ರತ್ಯಕ್ಷ, ಪರಿಪೂರ್ಣ. ಅದು ನಮಗೆ ಧೈರ್ಯ ಕೊಡುತ್ತದೆ. ಯೇಸು ತಕ್ಷಣ ಕೈ ಚಾಚಿದನು, ಪೇತ್ರನನ್ನು ಎತ್ತಿದನು. ಆ ಕೈ – ಅದು ಇಂದು ಕೂಡ ಎತ್ತರಿಸುತ್ತಿದೆ – ಪ್ರಾಯಶ್ಚಿತ್ತದಲ್ಲಿ, ದಿವ್ಯಬಲಿಯಾರ್ಪಣೆಯಲ್ಲಿ ಪ್ರೀತಿಯ ಮಾತಿನಲ್ಲಿ, ಪವಿತ್ರ ಪಾಠದಲ್ಲಿ.

**ಆ ಕೈ ಒಂದೇ ಶಕ್ತಿ:** ಪ್ರೀತಿಯ ಕೈ. ಅದು ತಳ್ಳುವುದಿಲ್ಲ, ಎತ್ತುವುದು ಮಾತ್ರ. ಧರ್ಮಸಭೆ/ ದೇವಾಲಯ ಎಂಬ ದೋಣಿ. ನಾವು ಎಲ್ಲರೂ ಆ ದೋಣಿಯೊಳಗಿದ್ದೇವೆ. ಅದು ಬಿರುಗಾಳಿಯಿಂದ ಗಡಿದಾಡುತ್ತಿದೆ, ಆದರೆ ಆ ದೋಣಿಯ ಒಳಗಿದೆ ಕರ್ತನು. ನಂಬಿಕೆಯಿಂದ ಮುನ್ನಡೆಯುವ ಈ ದೋಣಿಯೊಳಗೆ, ನಾವು ಮುಳಿಗಿದರೂ, ಒಮ್ಮೆ ಮಾತ್ರ ಕಣ್ಣೆತ್ತಿದರೆ, ಆ ಕೈ ಇರುತ್ತದೆ. ಆ ಪ್ರೀತಿ, ಆ ರಕ್ಷಣೆಯ ಚಿಹ್ನೆ.

ಪಾಪ, ದುಃಖ, ಭಯ – ಈ ಎಲ್ಲವೂ ನಮ್ಮನ್ನು ಮಂಕುಬಟ್ಟೆಯಂತೆ ಮುಚ್ಚಿದರೂ, ಕ್ರಿಸ್ತನು ಅಲ್ಲಿ ನಮ್ಮೊಂದಿಗೆ ಇದ್ದಾನೆ. ಸಂತ ಫ್ರಾನ್ಸಿಸ್ ಹೇಳುತ್ತಾರೆ: "ಯೇಸು ನನ್ನಿಂದ ದೊಡ್ಡ ಕೆಲಸಗಳನ್ನೇನು ಬಯಸುವುದಿಲ್ಲ. ಆತನು ಬಯಸುವುದು ನನ್ನ ಪ್ರೀತಿಯ ಸಮರ್ಪಣೆ."

ಹೌದು, ಸಮರ್ಪಣೆ. ನಂಬಿಕೆಯ ಮೇಡೇ ಅಂದರೆ – ನಾನು ಏನೂ ಆಗದೆ ಇದ್ದರೂ ನಿನ್ನಲ್ಲಿ ಸಂಪೂರ್ಣವಾಗಿ ಮರೆತುಹೋಗಲು ಸಿದ್ಧನೆಂಬ ಘೋಷಣೆ. ಮೇಡೇ ಎಂಬ ಶಬ್ದ ಶಬ್ದವಲ್ಲ. ಅದು ಆತ್ಮದ ಮೊರೆ. ಅದು ರಾತ್ರಿಯ ಕೂಗು, ಬೆಳಕಿಗಾಗಿ ಹಾತೊರೆಯುವ ಮೀನಿನಂತಿದೆ. ಅದು ಮೌನದ ಬಿಂದು, ಪ್ರಾರ್ಥನೆಯ ಉಗಮಸ್ಥಳ.

ಈ ಪ್ರಾರ್ಥನೆ ಬಲಿಪೂಜೆಯಲ್ಲಿ ಪ್ರತಿದಿನ ಪ್ರತಿಧ್ವನಿಸುತ್ತದೆ. ನಾವು ಹೇಳುತ್ತೇವೆ: "ಕರ್ತನೇ, ಕರುಣೆ ತೋರಿಸು." ಪೇತ್ರನು ಕೂಗಿದ ಹಾಗೆಯೇ ನಾವೂ ಕೂಗುತ್ತೇವೆ. ಆತನು ಪ್ರತಿಕ್ರಿಯಿಸುತ್ತಾನೆ – ತನ್ನ ದೇಹದ ಮೂಲಕ, ತನ್ನ ರಕ್ತದ ಮೂಲಕ, ನಮ್ಮ ನಂಬಿಕೆಗೆ ಜೀವವಿತ್ತ ನಿಜವಾದ ಪ್ರೀತಿಯ ಮೂಲಕ.

ಪಾಪದ ಸಾಗರದಲ್ಲಿ ಮುಳುಗುತ್ತಿರುವ ನಾವೆಲ್ಲರೂ, ಒಂದೇ ಪ್ರಾರ್ಥನೆ ಹೇಳಿದರೆ ಸಾಕು – "ಸ್ವಾಮಿ, ನನ್ನನ್ನು ರಕ್ಷಿಸು!" – ಏಕೆಂದರೆ ಆ ಕೈ ಇನ್ನೂ ಹತ್ತಿರದಲ್ಲಿದೆ.

## ಗುಲ್ಬರ್ಗಾ ಧರ್ಮಕ್ಷೇತ್ರದ ಗುರುಗಳ ವರ್ಗಾವಣೆ – 2025

| ಕ್ರ. ಸಂ. | ಹೆಸರು | ಸೇವಾಕಾರ್ಯ | ಜಾರಿಯಾದ ದಿನಾಂಕ |
|---|---|---|---|
| 19 | ಫಾ ಅನಿಲ್ ಕ್ರಾಸ್ತ | ನಿರ್ದೇಶಕರು: ಮದರ್ ತೆರೆಸಾ ಆಸ್ಪತ್ರೆ, ಕಲಬುರಗಿ | 10-07-2025 |
| 20 | ಫಾ ವಿನ್ಸೆಂಟ್ ಪಿರೇರಾ | ಧರ್ಮಗುರುಗಳು: ಚಿತ್ತಾಪುರ ಧರ್ಮಕೇಂದ್ರ | 13-07-2025 |
| 21 | ಫಾ ಫೆಡ್ರಿಕ್ ಡಿ'ಸೋಜಾ | (ಮುಂದುವರಿಯುವುದು) ಹಣಕಾಸು ಸಚಿವರು : ಧರ್ಮಾಧ್ಯಕ್ಷರ ನಿವಾಸ | |

ಪೂಜ್ಯ ರಾಬರ್ಟ್ ಮಿರಾಂದ
ಧರ್ಮಾಧ್ಯಕ್ಷರು, ಕೃಪಾಲಯ, ಧರ್ಮಾಧ್ಯಕ್ಷರ ನಿವಾಸ

**ಕೀರ್ತನೆ 102:17 – "ಅವನು ಬಡವರ ಪ್ರಾರ್ಥನೆಯನ್ನು ಪರಿಗಣಿಸಿ ತಿರಸ್ಕರಿಸುವುದಿಲ್ಲ."**






ಫಾ. ಜಾರ್ಜ್ ಲೋಬೋ

# ಕ್ರಿಸ್ತಾಶ್ರಮ, ಕೌಡಿಯಾಳ್ ಧರ್ಮ ಕೇಂದ್ರ



ಬೀದರ್ ಜಿಲ್ಲೆಯ ಎಲ್ಲಾ ಐದು ತಾಲೂಕುಗಳಲ್ಲಿ ಕನಿಷ್ಠ ಒಂದಾದರೂ ಧರ್ಮ ಕೇಂದ್ರವನ್ನು ಪ್ರಾರಂಭಿಸುವ ಕನಸು, ಅಂದಿನ ಮಂಗಳೂರು ಧರ್ಮಕ್ಷೇತ್ರದ ಧರ್ಮಾಧ್ಯಕ್ಷರಾದ ಪೂಜ್ಯ ದಿವಂಗತ ಡಾ. ಬೇಸಿಲ್‌ರವರದಾಗಿತ್ತು. ಬಸವಕಲ್ಯಾಣ ತಾಲೂಕಿನ ಕೌಡಿಯಳದಲ್ಲಿ ಸುವರ್ತಾಪ್ರಸಾರವನ್ನು ಪ್ರಾರಂಭಿಸಿದರು. ಧರ್ಮಾಧ್ಯಕ್ಷರರು ಫಾದರ್ ಫ್ರಾನ್ಸಿಸ್ ಲೂಯಿಸ್, ಕೌಡಿಯಾಳ್ ಧರ್ಮ ಕೇಂದ್ರದ ನಿರ್ದೇಶಕರಾಗಿ ಡಿಸೆಂಬರ್ 3, 1996 ರಂದು ನೇಮಕಮಾಡಿ, ಸುವಾರ್ತೆ ಸಾರಲು ಪ್ರಾರಂಭಿಸಿದರು. ಪ್ರಸ್ತುತ ಈ ಧರ್ಮ ಕೇಂದ್ರವು ಇಡೀ ಗುಲ್ಬರ್ಗ ಧರ್ಮಕ್ಷೇತ್ರಕ್ಕೆ ಆಧ್ಯಾತ್ಮಿಕ ಶಕ್ತಿಯನ್ನು ಕೇಂದ್ರವಾಗಿ ಹೊರಹೊಮ್ಮುತ್ತಿದೆ. ಭಕ್ತ ಜನರು ಪ್ರಾರ್ಥನೆ, ಆಂತರಿಕ ಸೌಖ್ಯ, ಆಪ್ತ ಸಮಾಲೋಚನೆಯ ಮೂಲಕ ದೇವರಲ್ಲಿ ಒಂದುಗೂಡುವ ಸಾಧನವಾಗಿದೆ. ಧರ್ಮ ಪ್ರಾಂತ್ಯದ ಧರ್ಮ ಪ್ರಚಾರವನ್ನು ಮಾಡುವ, ಈ ಕೇಂದ್ರವು ಎಲ್ಲಾ ಜಾತಿ–ಮತ ಧರ್ಮದ ಜನರನ್ನು ಆಕರ್ಷಿತಗೊಳಿಸುವ ಕೇಂದ್ರವಾಗಿದೆ.

**ಬೆಳವಣಿಗೆಯ ಹಾದಿ:** ಪ್ರಾರಂಭದಿಂದ ಸುಮಾರು 2011ರ ತನಕ ಪ್ರಾರ್ಥನೆ, ಧ್ಯಾನಕೂಟ ಮಾಡಲು 20 ರಿಂದ 30 ಜನ ತುಂಬುವಷ್ಟು ಒಂದು ಪ್ರಾರ್ಥನಾ ಕೊಠಡಿ ಇತ್ತು. ಭಕ್ತಾದಿಗಳ ಸಂಖ್ಯೆ ಹೆಚ್ಚಾದಾಗ ಪ್ರಾರ್ಥನೆ ಮಾಡಲು, ಧ್ಯಾನ ನಡೆಸಲು ಸ್ಥಳ ಸಾಲದೆ ಹೋದಾಗ, ಹೊಸ ದೇವಾಲಯವನ್ನು ಕಟ್ಟುವ ಕೆಲಸವನ್ನು ಗುಲ್ಬರ್ಗ ಧರ್ಮಕ್ಷೇತ್ರದ ಧರ್ಮಾಧ್ಯಕ್ಷರಾದ ಅತಿ ಪೂಜ್ಯ ರಾಬರ್ಟ್ ಮೈಕಲ್ ಮಿರಾಂದರವರು, ಫಾ. ಜೆರಾಲ್ಡ್ ಸಾಗರ್‌ರವರನ್ನು, ಹೊಸ ನಿರ್ದೇಶಕರಾಗಿ ನೇಮಿಸಿ, ದೇವಾಲಯವನ್ನು ಕಟ್ಟುವ ಜವಾಬ್ದಾರಿಯನ್ನು ಕೊಟ್ಟರು. ಹೀಗೆ, ಈ ಹೊಸ ದೇವಾಲಯದ ಉದ್ಘಾಟನೆಯನ್ನು 16.10.2011ರಂದು ಧರ್ಮಾಧ್ಯಕ್ಷರು ಅತೀ ಪೂಜ್ಯ ರಾಬರ್ಟ್ ಮೈಕಲ್ ಮಿರಾಂದ ನೆರವೇರಿಸಿದರು. ಹೊಸಕೇಂದ್ರ ಆರಂಭಿಸುವಾಗ, ಕೇವಲ ಎರಡು ಕ್ರೈಸ್ತ ಕುಟುಂಬಗಳು ಇದ್ದವು. ಇಂದು ಧರ್ಮ ಕೇಂದ್ರದಲ್ಲಿ 20 ಕ್ರೈಸ್ತ ಕುಟುಂಬಗಳು ಇವೆ. ಕೌಡಿಯಾಳ್ ಧರ್ಮ ಕೇಂದ್ರವು ಆರು ವಿಶ್ವಾಸಿ ಹಳ್ಳಿಗಳನ್ನು ಒಳಗೊಂಡಿದೆ. ಕಿಟ್ಟ, ಗೋಕುಲ್, ತಡೋಲ ಹಳ್ಳಿ, ಹತ್ಯಾಲ್ ತಾಂಡ, ಮೈ–ಸಲಗ ಮತ್ತು ಬಸವಕಲ್ಯಾಣ ಪಟ್ಟಣ ಹಳ್ಳಿಗಳನ್ನು ಒಳಗೊಂಡಿವೆ. ಪ್ರಾರ್ಥನಾಲಯ ಎಂದು ಹೆಸರಿದ್ದ ಈ ಕೇಂದ್ರವು, ಆಧ್ಯಾತ್ಮಿಕ ಧ್ಯಾನ ಕೇಂದ್ರವಾಗಿ ಹೊರಬಂದಿದೆ. ಪ್ರತಿ ತಿಂಗಳು: ಒಂದು, ಎರಡು, ಮೂರು ತಾರೀಖಿನಂದು ಧ್ಯಾನ ಕೂಟಗಳು ಇರುತ್ತವೆ. ಬೇರೆ ಬೇರೆ ಊರುಗಳಿಂದ ಧರ್ಮ ಕೇಂದ್ರಗಳಿಂದ ಜಾತಿ ಮತ ಧರ್ಮ ಎಂಬ ಭೇದವಿಲ್ಲದೆ ಭಕ್ತರು ಧ್ಯಾನ ಕೂಟದಲ್ಲಿ ಭಾಗವಹಿಸುತ್ತಾರೆ. ಧ್ಯಾನ ಕೂಟದ ಸಮಯದಲ್ಲಿ, ದೇವರ ವಾಕ್ಯದ ಬೋಧನೆ, ಧರ್ಮೋಪದೇಶ, ಬೀದರ್ ಜಿಲ್ಲೆಯ ಹಾಡುಗಳು, ಸಾಕ್ಷಿ ಹೇಳುವುದು, ಪಾಪ ನಿವೇದನೆ, ಆಪ್ತ ಸಮಾಲೋಚನೆಗೆ ಹೆಚ್ಚು ಗಮನ ಹರಿಸುತ್ತೇವೆ.

ಕೇಂದ್ರದಲ್ಲಿ ನಡೆಯುವ ಅನುದಿನದ ಕಾರ್ಯಕ್ರಮಗಳು: ಪ್ರತಿ ಶುಕ್ರವಾರ ಉಪವಾಸ ಪ್ರಾರ್ಥನೆ, ಪ್ರತಿ ತಿಂಗಳ ತಾರೀಕು ಒಂದರಿಂದ ಮೂರರವರೆಗೆ ಧ್ಯಾನ ಕೂಟ, ಕರುಣೋತ್ಸವ (ಕರುಣೆಯ ಜಪಸರಗಳು 1000 ಉದ್ದೇಶಗಳಿಗಾಗಿ ಕರುಣೆಯ ಭಾನುವಾರದಂದು), ಜಪಸರೋತ್ಸವ (ಅಕ್ಟೋಬರ್ ತಿಂಗಳಲ್ಲಿ ವಿವಿಧ ಉದ್ದೇಶಗಳಿಗಾಗಿ 500 ಜಪಸರಗಳು), ಬಾಂಧವ್ಯ (ದಂಪತಿಗಳ ಧ್ಯಾನ ಕೂಟ), ಸನ್ಮಾರ್ಗ (ಮಕ್ಕಳ ಧ್ಯಾನ ಕೂಟ), ಸನ್ನಿಧಿ (ರಾತ್ರಿ ಜಾಗರಣೆ ಧ್ಯಾನ ಯುವ ಜನರಿಗೆ) ಆಯೋಜಿಸಲಾಗುತ್ತದೆ.

**ಕೇಂದ್ರದಲ್ಲಿ ಈ ತನಕ ಸೇವೆ ಸಲ್ಲಿಸಿದ ಗುರುಗಳು:**

| | | | | | |
|---|---|---|---|---|---|
| 1 | ಫಾ. ಫ್ರಾನ್ಸಿಸ್ ಲೂವಿಸ್ | 2006–2009 | 2 | ಫಾ. ಬ್ಯಾಪ್ಟಿಸ್ಟ್ ಮಿನೇಜಸ್ | 2009–2014 |
| 3 | ಫಾ. ಕ್ಲ್ಯಾರಿ ಡಿ ಸೋಜಾ | 2014–2017 | 4 | ಫಾ. ಜೆರಾಲ್ಡ್ ಸಾಗರ್ | 2017 |
| 5 | ಫಾ. ಸಿರಿಲ್ ಲೋಬೊ | 2017–2018 | 6 | ಫಾ. ಸಂತೋಷ್ ಬಾಪು | 2018–2022 |
| 7 | ಫಾ. ಜಾರ್ಜ್ ಲೋಬೊ | 2022– | | | |

**ಚೈತನ್ಯ ಕಾನ್ವೆಂಟ್ ಕೌಡಿಯಾಳ್:** ನೂತನ ಕೇಂದ್ರದಲ್ಲಿ ಸೇವೆ ಸಲ್ಲಿಸಲು ಧರ್ಮಭಗಿನೀಯರ ಸಹಾಯ ಅವಶ್ಯಕವಾಗಿತ್ತು. ಅಂದಿನ ಬೀದರ್ ಮಿಷನ್ ಇದರ ಸಂಸ್ಥಾಪಕರಾಗಿದ್ದ ಪೂಜ್ಯ ಬೇಸಿಲ್ ಡಿಸೋಜಾ, ಬೀದರ್ ಜಿಲ್ಲೆಯಲ್ಲಿ ಸೇವೆ ಮಾಡಲು ಧರ್ಮಭಗಿನೀಯರನ್ನು ಸೇವೆ ಸಲ್ಲಿಸಲು ಆಹ್ವಾನಿಸಿದರು. ಮಂಗಳೂರು ಪ್ರಾಂತ್ಯದ ಅರ್ಸುಲಾಯ್ನ್ ಸಭೆಯ ಸುಪೀರಿಯರ್ ಜನರಲ್ ಸಿಸ್ಟರ್ ಎದಿಲ್ಬಾರ್ಗ ಮಾಂತೇರೋ ಧರ್ಮಾಧ್ಯಕ್ಷರ ಕರೆಗೆ ಓಗೊಟ್ಟು, ಬಸವಕಲ್ಯಾಣದ ಕೌಡಿಯಳದಲ್ಲಿ ತಮ್ಮ ಸೇವೆಯನ್ನು ಸಲ್ಲಿಸಲು ಮುಂದಾದರು. ಧರ್ಮಭಗಿನೀಯರ ವಾಸಕ್ಕಾಗಿ ಚೈತನ್ಯ ಕಾನ್ವೆಂಟ್ ಜೂನ್ 2, 1998ರಲ್ಲಿ ಸ್ಥಾಪಿಸಯಾಯಿತು. ಮಂಗಳೂರು ಧರ್ಮಕ್ಷೇತ್ರದ ಅಂದಿನ ಧರ್ಮಾಧ್ಯಕ್ಷರಾದ ಪೂಜ್ಯ ಅಲೋಶಿಯಸ್ ಪೌಲ್ ಡಿಸೋಜಾ ನೂತನ ಕಾನ್ವೆಂಟ್ ಕಟ್ಟಡವನ್ನು ಆಶೀರ್ವದಿಸಿದರು. ಸಿಸ್ಟರ್ ಡೋರಿನ್ ಡಿಸೋಜಾ ಯು.ಎಫ್.ಎಸ್ ಸುಪೀರಿಯರ್ ಜನರಲ್ ಮತ್ತು ಸಿಸ್ಟರ್ ಅಂಜಲಿನ್ ಸಿಕ್ವೇರಾ, ಸಲಹೆದಾರರು, ಸಿಸ್ಟರ್ ಎವ್ಲಿನ್ ಪಿಂಟೊ, ಸಿಸ್ಟರ್ ಗ್ರೇಸ್ ಅಲ್ವಾರಿಸ್, ಸಿಸ್ಟರ್ ಜಾನೆಟ್ ಡಿಸೋಜಾ, ಮೊದಲ ಧರ್ಮ ಭಗಿನಿಯರಾಗಿ ದೇವರ ಆಶೀರ್ವಾದದಿಂದ ಸೇವಾ ಕಾರ್ಯವನ್ನು ಆರಂಭಿಸಿದರು.


**ಚೈತನ್ಯ ಕಾನ್ವೆಂಟ್ ನಲ್ಲಿ ಸೇವೆ ಮಾಡಿದ ಧರ್ಮಭಗಿನೀಯರು**

| | | | | | |
|---|---|---|---|---|---|
| 1 | ಸಿಸ್ಟರ್ ಎವ್ಲಿನ್ ಪಿಂಟೊ | 1998–2004 | 2 | ಸಿಸ್ಟರ್ ಗ್ರೇಸ್ ಅಲ್ವಾರೀಸ್ | 2004–2007 |
| 3 | ಸಿಸ್ಟರ್ ಹೆಲನ್ ಮೊಂತೇರೊ | 2007–2008 | 4 | ಸಿಸ್ಟರ್ ಶಾಲಿನಿ ಲೋಬೊ | 2008–2011 |
| 5 | ಸಿಸ್ಟರ್ ಮಾರ್ತ ಡಿಸೋಜ | 2011–2016 | 6 | ಸಿಸ್ಟರ್ ಅಂಜಲಿನ್ ಸಿಕ್ವೇರಾ | 2016–2019 |
| 7 | ಸಿಸ್ಟರ್ ಎವ್ಲಿನ್ ಪಿಂಟೊ | 2019–2023 | 8 | ಸಿಸ್ಟರ್ ಅನಿಷಾ | 2023–2024 |
| 9 | ಸಿಸ್ಟರ್ ಲಿಡಿಯಾ | 2024– | | | |

**ಸಿಸ್ಟರ್ಸ್ ಆಫ್ ಸೈಂಟ್ ಆನ್ಸ್ ಆಫ್ ಪ್ರೋವಿಡೆನ್ಸ್:** ಧರ್ಮಾಧ್ಯಕ್ಷರ ಅಪ್ಪಣೆಯ ಮೇರೆಗೆ ಸಿಸ್ಟರ್ಸ್ ಆಫ್ ಸೈಂಟ್ ಆನ್ಸ್ ಆಫ್ ಪ್ರೋವಿಡೆನ್ಸ್ ತಮ್ಮ ಸೇವಾ ಕಾರ್ಯವನ್ನು ಬಸವಕಲ್ಯಾಣ ತಾಲೂಕಿನಲ್ಲಿ ಮಾಡಲು ಮುಂದಾದರು. ಪವಿತ್ರಾತ್ಮರ ಅನುಗ್ರಹದಿಂದ ಪ್ರಾಂತ್ಯದ ಹಿರಿಯರು ಯುವ ಧರ್ಮಭಗಿನೀಯರಾದ ಸಿಸ್ಟರ್ ಆವಿಯ, ಕುಮೋದಿನಿ ಮತ್ತು ಫತಿಮಾ ಇವರನ್ನು ಕಳಿಸಿ ಯಾವ ರೀತಿಯಲ್ಲಿ ಸೇವಾ ಕಾರ್ಯವನ್ನು ಆರಂಭಿಸಬಹುದೆಂಬ ವಿಷಯವನ್ನು ಕಂಡುಹಿಡಿಯಲು ಕಳುಹಿಸಿದರು. 2004 ಎಪ್ರಿಲ್ ತಿಂಗಳಲ್ಲಿ, ಬೀದರ್ ಜಿಲ್ಲೆಯ ಬಸವಕಲ್ಯಾಣಕ್ಕೆ ಸಿಸ್ಟರ್ಸ್ ಬಂದರು. ಎರಡು ತಿಂಗಳು ಕ್ರಿಸ್ತಾಶ್ರಮ ಕೌಡಿಯಾಳ್‌ನಲ್ಲಿ ಉಳಿದುಕೊಂಡು, ಯಾವ ರೀತಿ ಸೇವೆಯನ್ನು ಮಾಡಬಹುದೆಂಬ ವಿಷಯಗಳನ್ನು ಕಲಿತು ತದನಂತರ ಬಸವಕಲ್ಯಾಣದಲ್ಲಿ ಸೇವೆಯನ್ನು ಆರಂಭಿಸುವ ಸಿಹಿ ಸುದ್ದಿಯನ್ನು ಕೊಟ್ಟರು.

**ಪುಟ ಸಂಖ್ಯೆ 27ರಲ್ಲಿ ಮುಂದುವರಿಯುವುದು**

**'ಮೋಶೆ ಯೋಗ್ಯರಾಗಿ ಕಂಡವರನ್ನು ಜನರ ಮೇಲೆ ನಾಯಕರಾಗಿ ಮಾಡಿದ್ದನು.' –(ನಿರ್ಗಮನ 18:25)**





# ದೈವಾರಾಧನೆಯ ಪ್ರಮುಖ ತತ್ವಗಳು

ಫಾ. ಆರೋನ್ ವಾಸ್

**"ಎಲ್ಲಿ ಇಬ್ಬರು, ಮೂವರು ನನ್ನ ನಾಮದಲ್ಲಿ ಸೇರಿರುತ್ತಾರೋ, ಅಲ್ಲಿ ನಾನು ಅವರ ಮಧ್ಯೆ ಇರುತ್ತೇನೆ." (ಮತ್ತಾಯ 18:20)**

ಕಾಥೊಲಿಕ ಧರ್ಮಸಭೆಯಲ್ಲಿ, ಪ್ರಾರ್ಥನೆಗೆ ನಾವು ಪ್ರಮುಖ ಆದ್ಯತೆಯನ್ನು ನೀಡುತ್ತೇವೆ. ಸಾಮಾನ್ಯವಾಗಿ ನಮಗೆಲ್ಲರಿಗೆ ಪ್ರಾರ್ಥನೆ ಎಂದರೆ ನಮ್ಮ ಮನಸ್ಸು ಮತ್ತು ಹೃದಯವನ್ನು ದೇವರ ಕಡೆ ಎತ್ತುವುದು ಅಥವಾ ದೇವರಲ್ಲಿ ನಮ್ಮ ಕೋರಿಕೆಗಳನ್ನು ಸಮರ್ಪಿಸುವುದು ಹಾಗು ದೇವರ ಕೃಪಾವರಗಳನ್ನು ಬೇಡುವುದಾಗಿದೆ. ಇದು ದೇವರೊಂದಿಗೆ ನಾವು ಬೆಳೆಸಿರುವ ಸಂಬಂಧದ ಪ್ರತೀಕವಾಗಿದೆ, ಇದು praise (ಸ್ತುತಿ), thanksgiving (ಕೃತಜ್ಞತೆ), ಮತ್ತು petition (ವಿನಂತಿ)ಗಳನ್ನು ಒಳಗೊಂಡಿರುತ್ತದೆ. ಪ್ರಾರ್ಥನೆಯು ವೈಯಕ್ತಿಕ ಹಾಗು ಸಾಮುದಾಯಿಕವಾಗಿದ್ದು ನಾವು ಆಧ್ಯಾತ್ಮಿಕವಾಗಿ ಬೆಳೆದು ನಿತ್ಯ ಜೀವವನ್ನು ಪಡೆಯಲು ಅವಶ್ಯಕವಾಗಿವೆ.

**ಮತ್ತಾಯನ ಸುಭಸಂಧೇಶದಲ್ಲಿ ಯೇಸು ಸಭಾಪ್ರಾರ್ಥನೆಯ ಪ್ರಭಾವವನ್ನು ವಿವರಿಸುತ್ತಾ ಇಂತ್ತೆನ್ನುತಾರೆ, "ಇನ್ನೂ ನಾನು ನಿಮಗೆ ಹೇಳುವುದು ಏನೆಂದರೆ:** ನಿಮ್ಮಲ್ಲಿ ಇಬ್ಬರು ತಾವು ಬೇಡಿಕೊಳ್ಳುವ ಯಾವುದಾದರೊಂದು ವಿಷಯವಾಗಿ ಇಹಲೋಕದಲ್ಲಿ ಒಮ್ಮನಸ್ಸುಳ್ಳವರಾಗಿದ್ದರೆ, ಅದು ಸ್ವರ್ಗದಲ್ಲಿರುವ ನನ್ನ ತಂದೆಯಿಂದ ಅವರಿಗೆ ಕೈಗೂಡುತ್ತದೆ. ಎಲ್ಲಿ ಇಬ್ಬರು, ಮೂವರು ನನ್ನ ನಾಮದಲ್ಲಿ ಸೇರಿರುತ್ತಾರೋ, ಅಲ್ಲಿ ನಾನು ಅವರ ಮಧ್ಯೆ ಇರುತ್ತೇನೆ." (ಮತ್ತಾಯ 18:19–20) ಆದುದರಿಂದ ಧರ್ಮಸಭೆಯು ಸಾಮುದಾಯಿಕ ಪ್ರಾರ್ಥನೆಗೆ ಪ್ರಮುಖ ಆದ್ಯತೆಯನ್ನು ನೀಡುತ್ತದೆ ಅದರಲ್ಲಿಯೂ ದೈವಾರದನೆಯು ಎಲ್ಲಾ ಸಾಮೂದಾಯಿಕ ಪ್ರಾರ್ಥನೆಗಳಿಗಿಂತ ಉನ್ನತವಾಗಿದೆ.

**ಇಂದು ನಾವು ದೈವರಾಧನೆಯ ಬಗ್ಗೆ ತಿಳಿದುಕೊಳ್ಳೋಣ.**

**"ಲಿಟರ್ಜೀ" ಎಂಬ ಪದದ ಉತ್ಪತ್ತಿ (Etymology of Liturgy)**: ದೈವಾರದನೆಯನ್ನು ಇಂಗ್ಲೀಷ್ ಬಾಷೆಯ "ಡಿವೈನ್ ಲಿಟರ್ಜೀ ಅಥವಾ ಲಿಟರ್ಜೀ" (Liturgy) ಎಂಬುವುದಾಗಿ ಕರೆಯಲಾಗುತ್ತದೆ. ಈ ಪದವು ಗ್ರೀಕ್ ಭಾಷೆಯ "ಲೆಐಟೂರ್ಜಿಯಾ" (Leitourgia) ಎಂಬ ಪದದಿಂದ ಬಂದಿದೆ. ಇದು ಗ್ರೀಕ್ ಭಾಷೆಯ "ಲಾಓಸ್" (Laos) ಅಂದರೆ "ಜನತೆ" ಹಾಗು "ಎರ್ಗೋನ್" (Ergon) ಅಂದರೆ "ಕೆಲಸ ಅಥವಾ "ಸೇವೆ" ಎಂಬ ಎರಡು ಪದಗಳ ಜೋಡನೆಯಾಗಿದೆ. ಅದರಿಂದ "ಲೆಐಟೂರ್ಜಿಯಾ" ಎಂದರೆ "ಜನರ ಕೆಲಸ" ಅಥವಾ "ಸಾರ್ವಜನಿಕ ಸೇವೆ" ಎಂಬ ಅರ್ಥವನ್ನು ನೀಡುತ್ತದೆ. ಪ್ರಾಚೀನ ಗ್ರೀಸ್‌ನಲ್ಲಿ, Leitourgia ಎಂಬ ಪದವು ಧಾರ್ಮಿಕ ಅರ್ಥವಿಲ್ಲದೆ, ಸಮುದಾಯದ ಹಿತಕ್ಕಾಗಿ ವ್ಯಕ್ತಿಗಳು ಅಥವಾ ಅಧಿಕಾರಿಗಳು ಮಾಡುತ್ತಿದ್ದ ಸಾರ್ವಜನಿಕ ಸೇವೆ ಅಥವಾ ಕಾರ್ಯ (public work) ಎಂಬ ಅರ್ಥವನ್ನು ಹೊಂದಿತ್ತು. ಇವುಗಳು ಸಾಮಾನ್ಯವಾಗಿ ಶ್ರೀಮಂತ ಅಥವಾ ಪ್ರಭುತ್ವವಿರುವ ಜನರಿಂದ ನಡೆಸಲ್ಪಡುತ್ತಿದ್ದು, ಸಮಾಜದ ಮೌಲ್ಯವರ್ಧನೆಗಾಗಿ ಸೇವೆಯಾಗಿ ಪರಿಗಣಿಸಲಾಗುತ್ತಿತ್ತು. ಈ ಸಾರ್ವಜನಿಕ ಸೇವೆಯಲ್ಲಿ ಮೂರು ಅಂಶಗಳಲ್ಲಿ ಬಹುಮುಖ್ಯವಾಗಿತ್ತು. ಪ್ರತಿ ಸಾರ್ವಜನಿಕ ಸೇವೆ ಜನರ ಬಾಳಿನಲ್ಲಿ ವಿಭಿನ್ನ ರೀತಿಯಲ್ಲಿ ಸಹಕಾರಿಯಾಗಿತ್ತು. ಇವುಗಳು

**1. ಶಿಕ್ಷಣ**

**ಉದಾಹರಣೆ:** ಯುವಕರಿಗೆ ಶಿಕ್ಷಣ ನೀಡುವುದು, ಶಿಕ್ಷಕರ ವೇತನ ಭರಿಸುವುದು, ನಾಟಕೋತ್ಸವಗಳನ್ನು ಪ್ರಾಯೋಜಿಸುವುದು.

**ಉದ್ದೇಶ:** ಜ್ಞಾನವನ್ನು ಹರಡುವ ಮೂಲಕ ಜನರ ಬಾಳಮಟ್ಟವನ್ನು ಹೆಚ್ಚಿಸುವುದು.

**ಪರಿಣಾಮ:** ಜ್ಞಾನ ಹಾಗೂ ಸಾಂಸ್ಕೃತಿಕ ಬೆಳವಣಿಗೆ ಮೂಲಕ ಉತ್ತಮ ನಾಗರಿಕರಾಗಲು.

**2. ವ್ಯಾಪಾರ**

**ಉದಾಹರಣೆ:** ವ್ಯಾಪಾರದ ಬೆಂಬಲಕ್ಕಾಗಿ ರಸ್ತೆಗಳನ್ನು ಅಥವಾ ಮಾರುಕಟ್ಟೆಗಳನ್ನು ನಿರ್ಮಿಸುವುದು.

**ಉದ್ದೇಶ:** ಸಮೃದ್ಧಿಯನ್ನು ತರುವ ಮೂಲಕ ಜನರ ಬದುಕನ್ನು ಸುಧಾರಿಸುವುದು.

**ಪರಿಣಾಮ:** ಆರ್ಥಿಕ ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿಸಿ, ಉತ್ತಮ ಜೀವನ ಶೈಲಿ ಲಭಿಸುವುದು.

**3. ಯುದ್ಧ ಮತ್ತು ಭದ್ರತೆ**

**ಉದಾಹರಣೆ:** ಯುದ್ಧನೌಕೆಗೆ ಹಣ ನೀಡುವುದು, ಸೇನಾಧಿಕಾರಿಯಾಗಿ ಕಾರ್ಯನಿರ್ವಹಿಸುವುದು.

**ಉದ್ದೇಶ:** ರಾಜ್ಯವನ್ನು ಶತ್ರುಗಳಿಂದ ರಕ್ಷಿಸುವುದು.

**ಪರಿಣಾಮ:** ಸುರಕ್ಷತೆ ಮತ್ತು ಶಾಂತಿಪೂರ್ಣ ಸಹಬಾಳ್ವೆ ಸಾಧಿಸಿತು.

**ಕ್ರೈಸ್ತಧರ್ಮದಲ್ಲಿ ದೈವರಾಧನೆಯ(ಲಿಟರ್ಜಿ) ಅರ್ಥ:** ಕ್ರೈಸ್ತ ಧರ್ಮದಲ್ಲಿ, "Leitourgia" ಪದವನ್ನು ಸಾರ್ವಜನಿಕ ಆರಾಧನೆ ಅಥವಾ ದೇವರಿಗಾಗಿ ಸಮೂಹವಾಗಿ ಸಲ್ಲಿಸುವ ಪೂಜೆಗಳು ಎಂಬ ಅರ್ಥದಲ್ಲಿ ಬಳಸಲಾಯಿತು. ಇಲ್ಲಿ "ಜನರ ಕೆಲಸ" ಎಂಬ ಅರ್ಥವು ಜನರು ದೇವರ ಆರಾಧನೆಯಲ್ಲಿ ಭಾಗವಹಿಸುವುದು ಎಂಬ ಆಧ್ಯಾತ್ಮಿಕ ಅರ್ಥ ಪಡೆದುಕೊಂಡಿತು. ವಿಶೇಷವಾಗಿ, ಇದನ್ನು ಬಲಿಪೂಜೆ ಮತ್ತು ಸಭಾ ಪ್ರಾರ್ಥನೆಗಳಿಗೆ ಬಳಸಲಾಯಿತು. ಹಳೆ ಒಡಂಬಡಿಕೆಯಲ್ಲಿ ದೈವರಾಧನೆಯು, ಯಾಜಕರು ಮಂದಿರದಲ್ಲಿ ಪೂಜ್ಯಾವಿದಿಯನ್ನು ಮಾಡುವುದರ ಮೂಲಕ ದೇವರ ಅನುಗ್ರಹವನ್ನು ಜನರ ಮೇಲೆ ಬೇಡಿ ಪಡೆಯುತ್ತಿದ್ದರು ಆದರೆ ಹೊಸ ಒಡಂಬಡಿಕೆಯಲ್ಲಿ ಯೇಸುವೇ ದೈವರಾಧನೆಯ ಚಿರಸ್ಸಾಗಿದ್ದು ದೇವರ ಮಕ್ಕಳಾದ ನಾವೆಲ್ಲರೂ ದೈವರಾಧನೆಯಲ್ಲಿ ಪಾಲುಗೊಳ್ಳಬಹುದಾಗಿದೆ.

**ಧೈವಾರದನೆಯನ್ನು ಎರಡು ಲಕ್ಷಣಗಳು:** ಆರೋಹಣ ಮತ್ತು ಅವರೋಹಣ

ಲಿಟರ್ಜಿ ಎಂದರೆ ದೇವರ ಮತ್ತು ನಮ್ಮ ನಡುವೆ ನಡೆಯುವ ದಿವ್ಯ–ಮಾನವೀಯ ಸಂವಾದ. ಇದನ್ನು ಎರಡು ಆಯಾಮಗಳಲ್ಲಿ ಅರ್ಥಮಾಡಿಕೊಳ್ಳಬಹುದು:

1. **ಆರೋಹಣ:** ದೇವರ ಮಕ್ಕಳಾದ ನಾವು ದೇವರಿಗೆ ಪದಗಳ ಮೂಲಕ ಅಥವಾ ನಿಶ್ಶಬ್ದತೆಯಿಂದ ನಮ್ಮ ಪ್ರಾರ್ಥನೆಯನ್ನು, ಭಿನ್ನಹಗಳನ್ನು, ಸ್ತೋತ್ರಗಳನ್ನು ಸಲ್ಲಿಸುವುದು. ಇದು ನಮ್ಮ ಸಕ್ರಿಯ ಪಾಲ್ಗೊಳ್ಳುವಿಕೆ ಮತ್ತು ದೇವರ ಪ್ರೀತಿಗೆ ನಾವು ನೀಡುವ ಪ್ರತಿಕ್ರಿಯೆವಾಗಿದೆ.

2. **ಅವರೋಹಣ:** ಇದು ದೇವರಿಂದ ಮಾನವರಿಗೆ ದಿವ್ಯ ಕ್ರಿಯೆ. ನಮ್ಮ ಪ್ರಾರ್ಥನೆಯ ಫಲವಾಗಿ ದೇವರು ' ಆಶೀರ್ವಾದಗಳನ್ನು ನೀಡುತ್ತಾರೆ, ಕೃಪೆಗಳನ್ನು ಸುರಿಸುತ್ತಾರೆ, ತಮ್ಮ ಸನ್ನಿಧ್ಯತೆಯನ್ನು ವಿಶೇಷವಾಗಿ ಬಲಿಪೂಜೆಯಲ್ಲಿ ವ್ಯಕ್ತಪಡಿಸುತ್ತಾರೆ.

**ಧೈವಾರದನೆಯ ಉದ್ದೇಶ (Sacrosanctum Concilium: ಅಧ್ಯಾಯ 7)**

**ವ್ಯಾಟಿಕನ್ ದ್ವಿತೀಯ ಮಹಾಸಭೆಯ (Sacrosanctum Concilium – SC) ಪ್ರಕಾರ ಧೈವಾರದನೆಯು ಎರಡು ಪ್ರಮುಖ ಗುರಿಗಳನ್ನು ಹೊಂದಿದೆ:**

**ಪುಟ ಸಂಖ್ಯೆ 27ರಲ್ಲಿ ಮುಂದುವರಿಯುವುದು**

### ದೈವಾನುಗ್ರಹ ಮಾತೆ ಮಹಾದೇವಾಲಯದ ಮಹೋತ್ಸವ



2025ರ ಜೂನ್ 22ರಂದು ಕಲಬುರಗಿಯ ದೈವಾನುಗ್ರಹ ಮಾತೆ ಮಹಾದೇವಾಲಯದ ವಾರ್ಷಿಕ ಹಬ್ಬವನ್ನು ಭಕ್ತಿಯಿಂದ ಆಚರಿಸಲಾಯಿತು. ಗುರುಗಳು ಮತ್ತು ಧರ್ಮಕ್ಷೇತ್ರದ ಧರ್ಮಾಧ್ಯಕ್ಷರಾದ ಪೂಜ್ಯ ರಾಬರ್ಟ್ ಮಿರಾಂದಾ ಹಬ್ಬದ ಸಾಂಭ್ರಮಿಕ ದಿವ್ಯಬಲಿಪೂಜೆನ್ನು ಆಚರಿಸಿ, ಯೇಸುವಿನ ಪೂಜ್ಯ ಶರೀರ ಮತ್ತು ರಕ್ತದ ಮಹತ್ವದ ಬಗ್ಗೆ ಪ್ರಭೋಧನೆ ನೀಡಿದರು. ಬಲಿಪೂಜೆಯ ಕೊನೆಯಲ್ಲಿ ಫಾ. ಜೋಸೆಫ್ ಪ್ರವೀಣ್, ಮಹಾದೇವಾಲಯದ ಗುರುಗಳು ಕಳೆದ ಶೈಕ್ಷಣಿಕ ವರ್ಷದಲ್ಲಿ ಸಾಧನೆಗೈದ ಮಕ್ಕಳನ್ನು ಬಹುಮಾನ ನೀಡಿ ಗೌರವಿಸಲಾಯಿತು. ದೈವಾನುಗ್ರಹ ಮಾತೆಯನ್ನು ಭಕ್ತಿಪೂರ್ವಕವಾಗಿ ಮೊಂಬತ್ತಿಯನ್ನು ಹಿಡಿದು ನಗರದ ರಾಜ ರಸ್ತೆಯಲ್ಲಿ ಮೆರವಣಿಗೆ ನಡೆಸಲಾಯಿತು. ಮರೆವಣಿಗೆಯಲ್ಲಿ ಶುಭಸಂದೇಶವನ್ನು ಸಾರಿ, ಆರಾಧನೆಯಲ್ಲಿ ಕೊನೆಗೊಳಿಸಲಾಯಿತು. ಅಂತಿಮವಾಗಿ ಎಲ್ಲಾ ಬಕ್ತ ಜನರು ಗುರುಗಳು, ಕನ್ಯಾಭಗಿನೀಯರು, ಭಕ್ತಜನರು ಸೇರಿ ಹಬ್ಬದ ಔತಣದಲ್ಲಿ ಭಾಗವಹಿಸಿ, ಸಂತೋಷವನ್ನು ಹಂಚಿಕೊಂಡರು.

### ಗುಲ್ಬರ್ಗಾ ಧರ್ಮಕ್ಷೇತ್ರದಲ್ಲಿ ICYM DEXCO ಚುನಾವಣೆ



ಜುಲೈ 6, 2025 ರಂದು ಹುಮನಾಬಾದ್‌ನಲ್ಲಿರುವ ಆರ್ಬಿಟ್ ಸಮಾಜ ಸೇವಾ ಕೇಂದ್ರದಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರದ ಯುವಜನರ ಚುನಾವಣೆ ಜರುಗಿತು. ಚುನಾವನೆಯಲ್ಲಿ ಸುಮಾರು 45 ಯುವಕ ಯುವತಿಯರು ಮತ್ತು 8 ಸಚೇತಕರು ಪಾಲ್ಗೊಂಡರು. ಈ ಕಾರ್ಯಕ್ರಮದಲ್ಲಿ ಪ್ರಾಂತೀಯ ಯುವ ನಾಯಕಿ ವಲೀನಾ ಗೋನ್ಸಾಲ್ವಿಸ್ ಅವರು ಮುಖ್ಯ ಅಥಿತಿಯಾಗಿ ಯುವಜನರನ್ನು ಉದ್ದೇಶಿಸಿ ಮಾತನಾಡಿದರು. ಚುನಾವಣೆ ಪ್ರಜಾಪ್ರಭುತ್ವ ರೀತಿಯಲ್ಲಿ ನಡೆದಿದ್ದು, ಪ್ರವಿಣ್ (ಉಜಿನಿ) ಅಧ್ಯಕ್ಷ, ತಾನಿಷಾ (ಜಲಸಂಗಿ) ಉಪಾಧ್ಯಕ್ಷೆ, ದೀನಾ (ಬಿದರ್) ಕಾರ್ಯದರ್ಶಿ, ಅಭಿಷೇಕ್ (ಮಚ್ಚಳಾಂಬ) ಸಹ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ಅನುಷಾ (ಹಲಬರ್ಗಾ), ಸ್ವಾತಿ (ತಾಳ್‌ಮಡಗಿ), ಆಶಾ (ಸಂತಪುರ), ಧನಂಜಯ್ (ಹುಲ್ಸೂರ), ಜೆನೇಟ್ (ಹುಮ್ನಾಬಾದ್), ಯಶ್ವಂತ್ (ಭಾಲ್ಕಿ), ವೀಣಾ (ಬಿದರ್), ಮತ್ತು ಸಂದೀಪ್ (ಕಮಲನಗರ) ವಿವಿಧ ವಿಭಾಗಗಳಿಗೆ ಆಯ್ಕೆಯಾದರು. ಪೂಜ್ಯ ರಾಬರ್ಟ್ ಮಿರಾಂದಾ ಅವರು ಸಮಿತಿಗೆ ಪ್ರಮಾಣ ವಚನ ಬೋಧಿಸಿ ಆಶೀರ್ವಾದ ನೀಡಿದರು. ಫಾ. ಸಚಿನ್ ಕ್ರಿಸ್ಟಿ ಸಮಿತಿಯನ್ನು ಸಂಯೋಜಿಸಿದರು

### ಹಲ್ಬರ್ಗಾದಲ್ಲಿ ಗುರುಗಳ “ಅಸ್ಸಿಸಿ ನಿವಾಸ”ಉದ್ಘಾಟನೆ ಮತ್ತು ನೂತನ ನಿರ್ದೇಶಕರ ಘೋಷಣೆ



2025ರ ಜೂನ್ 1ರಂದು ಹಲ್ಬರ್ಗಾದಲ್ಲಿ ಗುರುಗಳ “ಅಸ್ಸಿಸಿ ನಿವಾಸ” ಉದ್ಘಾಟನೆ ಮತ್ತು ನೂತನ ನಿರ್ದೇಶಕರಾಗಿ ಫಾ. ಸತೀಶ್ ಅವರಿಗೆ ಅಧಿಕಾರ ಹಸ್ತಾಂತರಿಸಲಾತು. ಧರ್ಮಾಧ್ಯಕ್ಷರಾದ ಪೂಜ್ಯ ರಾಬರ್ಟ್ ಮಿರಾಂದ ಅವರು ಗುರುಗಳ ನಿವಾಸವನ್ನು ಉದ್ಘಾಟಿಸಿ ಆಶೀರ್ವದಿಸಿದರು. ಈ ಸಂದರ್ಭದಲ್ಲಿ ಶ್ರೇಷ್ಠ ಗುರುಗಳಾದ ಫಾ. ಸಂತೋಷ್ ಬಾಪು, ಗುರುಗಳು, ಕನ್ಯಾಭಗಿನೀಯರು ಭಕ್ತಜನರು ಉಪಸ್ಥಿತರಿದ್ದರು. ಧರ್ಮಾಧ್ಯಕ್ಷರು ತಮ್ಮ ಹಿತನುಡಿಗಳಲ್ಲಿ ಫಾ. ಸಾಲ್ವದೋರ್ ಫರ್ನಾಂಡಿಸ್ ಅವರ ನಿರಂತರ ಸೇವೆಗೆ ಕೃತಜ್ಞತೆ ಸಲ್ಲಿಸಿ, ಫಾ. ಸತೀಶ್ ಅವರಿಗೆ ಶುಭ ಹಾರೈಸಿದರು. 'ಅಸ್ಸಿಸಿ ನಿವಾಸ' ಪಾಲನಾ ಸೇವೆಗೆ ಆತ್ಮೀಯ ನಿವಾಸವಾಗಿ, ಸಮುದಾಯದ ಆಶಾಭವನವಾಗಿರಬೇಕು ಎಂದು ಅವರು ಉಲ್ಲೇಖಿಸಿದರು. ಫಾ. ಸತೀಶ್ ತಮ್ಮ ಮೊದಲ ಭಾಷಣದಲ್ಲಿ ಈ ಹೊಣೆಗಾರಿಕೆಯನ್ನು ಭಕ್ತಿಯಿಂದ ಸ್ವೀಕರಿಸಿ, ಪ್ರಾರ್ಥನೆ ಮತ್ತು ಸಹಕಾರವನ್ನು ಭಕ್ತ ಸಮುದಾಯದಿಂದ ಬೇಡಿದರು.

**‘ದಾಸರೇ, ಭೂಮಿ ನಿಮ್ಮ ಯಜಮಾನರಿಗೆ ವಿಧೇಯರಾಗಿರಿ.’ –(ಕೊಲೋಸ್ಸೆಯ 3:22)**

## ಬೀದರ್ ಹಾಗೂ ಔರಾದ್ ವಲಯದಲ್ಲಿ ವಲಯ ಮಟ್ಟದ ಕಿರು ಕ್ರೈಸ್ತ ಸಮುದಾಯದ ಜ್ಯೂಬಿಲಿ ಸಂಭ್ರಮ



ಬೀದರ್ ಹಾಗೂ ಔರಾದ್ ವಲಯದಲ್ಲಿ ವಲಯ ಮಟ್ಟದ ಕಿರು ಕ್ರೈಸ್ತ ಸಮುದಾಯದ ಜ್ಯೂಬಿಲಿ ಸಂತೋಷಭರಿತ ವಾತಾವರಣದಲ್ಲಿ ಬಿದರ್ ನಗರದ ಸಂತ ಜೋಸೆಫ್ ಶಾಲಾ ಸಭಾಂಗಣದಲ್ಲಿ ಆಚರಿಸಲಾಯಿತು. "ಚಿಕ್ಕ ಬಳ್ಳಿಗಳೂ ಒಗ್ಗೂಡಿದರೆ ಒಮನಸ್ಸಿನಂತೆ ಬಾಳಬಹುದು" ಎಂಬ ಪ್ರೇರಣಾದಾಯಕ ಧ್ಯೇಯ ವಾಕ್ಯದೊಂದಿಗೆ ಆಚರಿಸಿದ ಈ ಕೂಟದಲ್ಲಿ ಸುಮಾರು 176 ಭಕ್ತಜನರು ಭಾಗವಹಿಸಿದರು. ಕ್ರೈಸ್ತ ಸಮುದಾಯದ ಐಕ್ಯತೆಯ ಶಕ್ತಿ ಮತ್ತು ಪ್ರಾರ್ಥನೆಯ ಮಾಧ್ಯಮವಾಗಿ ಬದಲಾವಣೆ ತರಬಹುದೆಂಬ ಸಂದೇಶವನ್ನು ಅನುಭವಿಸಿದರು. ಧರ್ಮಾಧ್ಯಕ್ಷರಾದ ಪೂಜ್ಯ ರಾಬರ್ಟ್ ಮಿರಾಂದಾ ಅವರು ಭಾಷಣದಲ್ಲಿ ಕುಟುಂಬ ಮತ್ತು ನೆರೆಹೊರೆಯವರೊಂದಿಗೆ ವಿಶ್ವಾಸವನ್ನು ಬೆಳೆಸುವಲ್ಲಿ ಅವರ ಪಾತ್ರ ಮತ್ತು ಕರ್ತವ್ಯದ ಬಗ್ಗೆ ವಿವರಿಸಿದರು. ಪ್ರಾಂತೀಯ ಸುವಾರ್ತ ಪ್ರಸಾರ ಆಯೋಗದ ಕಾರ್ಯದರ್ಶಿಗಳಾದ ಫಾ. ಮ್ಯಾಕ್ಸಿಂ ಡಯಾಸ್ ಮುಖ್ಯ ಅತಿಥಿಗಳಾಗಿ ಬಂದು ಕಾರ್ಯಕ್ರಮವನ್ನು ಶ್ಲಾಘಿಸಿದರು. ಧರ್ಮಾಧ್ಯಕ್ಷರು ಮುಕ್ತಾಯದಲ್ಲಿ ಧನ್ಯವಾದದ ಪವಿತ್ರ ಬಲಿಯನ್ನು ಸಲ್ಲಿಸಿದರು ಹಾಗೂ ಎಲ್ಲರನ್ನು ವಿಶ್ವಾಸ ಮತ್ತು ಬದ್ಧತೆಯೊಂದಿಗೆ BECಗಳ ಧರ್ಮಪರತೆಯನ್ನು ಮುಂದುವರೆಸುವಂತೆ ಕರೆ ನೀಡಿದರು.

## ಹೊಸ ಗುರುಗಳಿಗೆ ಮತ್ತು ಕನ್ಯಾಭಗಿನೀಯರಿಗೆ ಮಾರ್ಗದರ್ಶನ ಶಿಬಿರ



ಗುಲ್ಬರ್ಗಾ ಧರ್ಮಕ್ಷೇತ್ರದಲ್ಲಿ ಸೇವೆ ನೀಡಲು ಸೇರ್ಪಡೆಗೊಂಡಿರುವ ಹೊಸ ಗುರುಗಳಿಗೆ ಮತ್ತು ಧರ್ಮ ಭಗಿನಿಯರಿಗೆ ಮಾರ್ಗದರ್ಶನ ಶಿಬಿರವನ್ನು ಜು. 26 ರಂದು ಹುಮನಬಾದ್‌ಲ್ಲಿರುವ ಆರ್ಬಿಟ್‌ನಲ್ಲಿ ಆಯೋಜಿಸಿತು. ಪೂಜ್ಯ ರಾಬರ್ಟ್ ಮಿರಾಂದಾ ಧರ್ಮಕ್ಷೇತ್ರದ ಚರಿತ್ರೆ ಮತ್ತು ನಡೆದು ಬಂದ ದಾರಿಯನ್ನು ವಿವರಿಸಿದರು. ಬೀದರ್ ನಾಡಿನಲ್ಲಿ ಬೆಳೆದು, ಗುರುಗಳಾಗಿ, ಸುವಾರ್ತಾ ಸೇವೆಯಲ್ಲಿ ಅನುಭವ ಹೊಂದಿದ ಫಾ. ಸಾಗರ್ ಅವರು ಬಿದರ್‌ನ ನಾಡಿನ ಸ್ಥಳೀಯ ಸಂಸ್ಕೃತಿ, ಭಾಷೆ ಮತ್ತು ಆಚರಣೆಗಳ ಬಗ್ಗೆ ಉಪಯುಕ್ತ ಮಾಹಿತಿಯನ್ನು ನೀಡಿದರು. ಫಾ. ಸಂತೋಷ್ ಬಾಪು ಅವರು ಗುಲ್ಬರ್ಗಾ ಧರ್ಮಕ್ಷೇತ್ರದ ಪಾಲನಾಸೇವೆಯನ್ನು ವಿವರಿಸುತ್ತಾ, ಶಿಕ್ಷಣ, ಸಾಮಾಜಿಕ ಸೇವೆ, ಆರೋಗ್ಯ ಹಾಗೂ ವಿಶ್ವಾಸ ಬೆಳವಣಿಗೆಯ ಕ್ಷೇತ್ರಗಳಲ್ಲಿ ಧರ್ಮಕ್ಷೇತ್ರದ ಆದ್ಯತೆಗಳನ್ನು ಹಂಚಿಕೊಂಡರು. ಈ ಕೂಟದಲ್ಲಿ ಸುಮಾರು 25 ಮಂದಿ ನೂತನವಾಗಿ ಸೇರ್ಪಡೆಗೊಂಡ ಗುರುಗಳು, ಕನ್ಯಾಭಗಿನೀಯರು ಭಾಗವಹಿಸಿದರು.

## ವಿಶ್ವಾಸ ಆಯೋಗದ ಯಶಸ್ವಿ ತರಬೇತಿಗಳು



ಗುಲ್ಬರ್ಗಾ ಧರ್ಮಕ್ಷೇತ್ರದ ವಿಶ್ವಾಸ ಆಯೋಗವು ಧರ್ಮಕೇಂದ್ರಗಳಲ್ಲಿ ಧರ್ಮೋಪದೇಶ ತರಗತಿಯನ್ನು ಭೋದಿಸುವ ಶಿಕ್ಷಕ ಶಿಕ್ಷಕೀಯರಿಗೆ ಜೂನ್ 21 ರಂದು ಗುಲಬರ್ಗಾದಲ್ಲಿ ಮತ್ತು 22, 2025 ರಂದು ಕ್ರಮವಾಗಿ ಬಿದರ್ ವಲಯದಲ್ಲಿ ಯಶಸ್ವಿಯಾಗಿ ಆಯೋಜಿಸಿತು. ಈ ಶಿಬಿರಗಳನ್ನು ಆಯೋಗದ ರಾಷ್ಟ್ರೀಯ ಕಾರ್ಯದರ್ಶಿಗಳಾದ ಫಾ. ವಿಜಯ್ ಮಾಚಾದೊ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಶಿಕ್ಷರಿಗೆ ತರಬೇತಿಯನ್ನು ನೀಡಿದರು. ಕಲಬುರ್ಗಿಯಲ್ಲಿ 26 ಮತ್ತು ಭಾಲ್ಕಿಯಲ್ಲಿ 40 ಮಂದಿ ಭಾಗವಹಿಸಿ ಮಾಹಿತಿಯನ್ನು ಪೆಡದುಕೊಂಡರು.

**ಧರ್ಮಕ್ಷೇತ್ರದಲ್ಲಿ ವಲಯ ಮಟ್ಟದ ಮಿಷನ್ ಒರಿಯೆಂಟೇಶನ್:**



ಧರ್ಮಕ್ಷೇತ್ರದಲ್ಲಿ ವಲಯ ಮಟ್ಟದ ಮಿಷನ್ ಒರಿಯೆಂಟೇಶನ್ ಬೀದರ್, ಗುಲ್ಬರ್ಗಾ ಮತ್ತು ಬಿಜಾಪುರ ವಲಯಗಳಲ್ಲಿ ನೆರವೇರಿತು. ಬೀದರ್‌ನಲ್ಲಿ ಬಾಲ ಯೇಸು ಪುಣ್ಯಕ್ಷೇತ್ರದಲ್ಲಿ ಜೂನ್ 13ರಂದು ಸುಮಾರು 80 ಮಂದಿ, ಗುಲ್ಬರ್ಗಾ ವಲಯದಲ್ಲಿ ದೈವಾನುಗ್ರಹ ಮಾತೆ ದೇವಾಲಯದಲ್ಲಿ 60 ಮಂದಿ, ಬಿಜಾಪುರದಲ್ಲಿ ಸಂತ ಅನ್ನಮ್ಮ ದೇವಾಲಯದಲ್ಲಿ ಮಿಷನ್ ಒರಿಯೆಂಟೇಶನ್ ಕಾರ್ಯಕ್ರಮ ನಡೆಯಿತು. ಧರ್ಮಾಧ್ಯಕ್ಷರವರ ನೇತೃತ್ವದಲ್ಲಿ ಪವಿತ್ರ ಬಲಿ ನೆರವೇರಿತು. ನಂತರ ಫಾ. ಅನಿಲ್ ಪ್ರಸಾದ್ ಪಾಲನಾ ಸೇವೆ, ಫಾ ಸಂತೋಷ್ ಬಾಪು ಪಾಲನಾ ಸೇವೆಯ ಕಾರ್ಯಗಳ ಬಗ್ಗೆ ಸ್ಫೂರ್ತಿದಾಯಕ ತರಬೇತಿ ನೀಡಿದರು.

**ಪುಟ ಸಂಖ್ಯೆ 24ರ ಮುಂದುವರಿದ ಭಾಗ**

**1. ದೇವರ ಮಹಿಮೆ (Glorification of God):** ನಮ್ಮನ್ನು ಸೃಷ್ಟಿಸಿದ ನಮ್ಮ ದೇವರು ಸ್ತುತಿಪಾತ್ರರು. ಆದುದರಿಂದ ದೈವಾರದನೆ ಮೊದಲನೆಯದಾಗಿ ದೇವರ ಆರಾಧನೆಯಾಗಿದೆ.

**2. ಮಾನವರ ಪವಿತ್ರತೆ (Sanctification of human persons):** ದೈವಾರಧನೆಯು ಮಾನವರನ್ನು ಪರಿಶುದ್ಧರನ್ನಾಗಿ ಮಾಡುತ್ತದೆ. ದೇವರು ದೈವಾರದನೆಯ ಮೂಲಕ ಕೃಪೆಗಳನ್ನು ನೀಡುತ್ತಾರೆ, ಪಾಪ ಕ್ಷಮಿಸುತ್ತಾರೆ, ವಿಶ್ವಾಸ ಬಲಪಡಿಸುತ್ತಾರೆ ಹಾಗು ಪರಿಶುದ್ಧರನ್ನಾಗಿ ಮಾಡುತ್ತಾರೆ.

ಇದರಿಂದ, ದೈವಾರಧನೆಯು ದೇವರನ್ನು ಮಹಿಮೆಪಡಿಸುವುದೂ ಹೌದು, ಮಾನವನನ್ನು ದೇವರಲ್ಲಿ ಪವಿತ್ರಗೊಳಿಸುವ ಮಾರ್ಗವೂ ಹೌದು.

ಸಂಕ್ಷಿಪ್ತವಾಗಿ ಹೇಳುವದಾದರೆ, 'ದೈವಾರಧನೆ' ಎಂಬುದು ಯೇಸು ಕ್ರಿಸ್ತರು ಸ್ಥಾಪಿಸಿ, ಪ್ರೇಷಿತರಿಗೆ ಹಸ್ತಾಂತರಿಸಿದ, ಧರ್ಮಸಭೆಯ ಅಧಿಕೃತ, ಸಾರ್ವಜನಿಕ ಪೂಜಾವಿಧಿ ಆಗಿದೆ. ಇದು ಖಾಸಗಿ ಭಕ್ತವಿದಿಯಲ್ಲ, ಬದಲಾಗಿ ಸಾಮೂಹಿಕ, ಕ್ರಮಬದ್ಧ ಹಾಗೂ ಪವಿತ್ರ ಚಿಹ್ನೆಗಳ ಮೂಲಕ ಸ್ವತಃ ಯೇಸು ಕ್ರಿಸ್ತರು ಧರ್ಮಸಭೆಯಲ್ಲಿ ದೇವರ ಮಹಿಯನ್ನು ಪ್ರಕಟಿಸುತ್ತಾರೆ ಮತ್ತು ನಮ್ಮನ್ನು ಪಾವನಗೊಳಿಸುತ್ತಾರೆ. ಆದುದರಿಂದ ದೈವಾರದನೆಯು ಧರ್ಮಸಭೆ ಅನುಮೋದಿಸಿರುವ ಪವಿತ್ರ ವಿದಿಗಳನ್ನು ಅನುಸರಿಸುತ್ತಾ ಯೇಸು ಕ್ರಿಸ್ತರ ಪಾಸ್ಕಾ ರಹಸ್ಯದಲ್ಲಿ ಪಾಲ್ಗೊಂಡು ದೇವರನ್ನು ಮಹಿಮೆಪಡಿಸುತ್ತಾ ತಮ್ಮ ಜೀವನ್ನು ಪಾವನಗೊಳಿಸುವುದೇ ಇದರ ಮುಖ್ಯ ಉದ್ಧೇಶವಾಗಿದೆ.

ಮುಂದಿನ ಸಂಚಿಕೆಯಲ್ಲಿ ಪವಿತ್ರ ಆಚರಣೆಯ ಬಗ್ಗೆ ಅರಿತುಕೊಳ್ಳೋಣ. **ಮೂಲ: ಗುರುಮಠದ ತರಗತಿಗಳು**

**ಪುಟ ಸಂಖ್ಯೆ 22ರ ಮುಂದುವರಿದ ಭಾಗ**

ಪ್ರಾರ್ಥನೆ ಹಾಗೂ ದೇವರಲ್ಲಿ ಭರವಸೆ ಇಟ್ಟು, ಬಸವಕಲ್ಯಾಣದಲ್ಲಿ ಸಿಸ್ಟರ್ಸ್ ತಮ್ಮ ಕಾನ್ವೆಂಟನ್ನು ಆರಂಭಿಸುವ ಮಹತ್ತರ ನಿರ್ಧಾರವನ್ನು ತೆಗೆದುಕೊಂಡರು. ಜೂನ್ 7, 2004 ಸಿಸ್ಟರ್ಸ್‌ಗಳಾದ ಸಿಸ್ಟರ್ ಆವಿಯ, ಕುಮೋದಿನಿ ಮತ್ತು ಫಾತಿಮಾ ಜೊತೆಗೂಡಿ ಕೌಡಿಯಾಳ್ ಬಂದರು. ಅಂದಿನ ನಿರ್ದೇಶಕರಾದ ಫಾ. ಕ್ಲಾರಿ ಡಿ'ಸೋಜಾರವರು ಆದರದ ಸ್ವಾಗತವನ್ನು ಕೊಟ್ಟರು. ಮರುದಿನ ಅಂದರೆ ಜೂನ್ 8ನೇ ತಾರೀಕು ಸಿಸ್ಟರ್ ಜೊತೆಗೂಡಿ ಗುರುಗಳ ಸಹಾಯದಿಂದ ಬಸವಕಲ್ಯಾಣದಲ್ಲಿ ಬಾಡಿಗೆ ಮನೆಯಲ್ಲಿ ಜೀವಿಸಿ, ಸೇವೆ ಮಾಡಲು ಬಯಸಿದರು. ಯಾವುದೇ ರೀತಿಯ ಸಹಾಯವಿಲ್ಲದೆ ಜೀವನ ಆರಂಭಿಸಿದರು. ಕ್ರೈಸ್ತರ ಪ್ರಸನ್ನತೆ ಇಲ್ಲದೆ ಇರುವುದರಿಂದ ಸ್ವಲ್ಪ ಭಯ – ಆತಂಕ ಇತ್ತು. ಜನರ ಭಾಷೆ, ಸಂಸ್ಕೃತಿ ಕಲಿತು ಅವರ ಜೊತೆ ಬೆರೆತು ಬಹಳ ಜಾಗರೂಕತೆಯಿಂದ ಕೆಲಸ ಮಾಡಬೇಕಾಗಿತ್ತು. ಇಬ್ಬರು ಧರ್ಮಭಗಿನೀಯರು ಹಿಂದೂ

ಧರ್ಮಕ್ಕೆ ಸೇರಿದ ಶಾಲೆಗಳಲ್ಲಿ ಕೆಲಸ ಮಾಡುವ ಭಾಗ್ಯ ಸಿಕ್ಕಿತು. ಸಾಯಂಕಾಲ ಹೊತ್ತು ಟ್ಯೂಷನ್ ಕ್ಲಾಸ್ ಮಕ್ಕಳಿಗೆ ತೆಗೆದುಕೊಳ್ಳುತ್ತಿದ್ದರು. ಟ್ಯೂಷನ್‌ಗೆ ಬಂದ ಕೆಲವೊಂದು ಮಕ್ಕಳ ಕುಟುಂಬಗಳಿಗೆ ಭೇಟಿ ನೀಡಿದರು. ಸುಮಾರು ಒಂದು ವರ್ಷ ಬಾಡಿಗೆ ಮನೆಯಲ್ಲಿ ಇದ್ದು, ಎಲ್ಲ ಕಷ್ಟಗಳನ್ನು ಅನುಭವಿಸಿ ಸೇವಾ ಜೀವನ ನಡೆಸಿದರು.

**ಸಿಸ್ಟರ್ಸ್ ಆಫ್ ಸೈಂಟ್ ಆನ್ಸ್  ಆಫ್ ಪ್ರೋವಿಡೆನ್ಸ್:** ಕಾನ್ವೆಂಟ್ ನಲ್ಲಿ ಸೇವೆ ಮಾಡಿದ ಧರ್ಮಭಗಿನೀಯರು

| | | | | | |
|---|---|---|---|---|---|
| 1 | ಸಿಸ್ಟರ್ ಮ್ಯಾಥ್ಯೂ | 2005–2011 | 2 | ಸಿಸ್ಟರ್ ಪರ್ವೆತ್ವ | 2011–2016 |
| 3 | ಸಿಸ್ಟರ್ ಐರಿನ್ | 2016–2018 | 4 | ಸಿಸ್ಟರ್ ಪರ್ವೆತ್ವ | 2018–2019 |
| 5 | ಸಿಸ್ಟರ್ ತೆರೇಸಾ ಡಿ'ಸೋಜ | 2019–2016 | 6 | ಸಿಸ್ಟರ್ ಬೆಟ್ಟಿ | 2024–2025 |
| 7 | ಸಿಸ್ಟರ್ ಜ್ಯೋತಿ | 2025– | | | |

**ಜ್ಞಾನಪ್ರಿಯಾ ಪ್ರೌಡ ಶಾಲೆ:** ಎಲ್ಲಾ ಕಷ್ಟ ನಷ್ಟಗಳನ್ನು ಅನುಭವಿಸಿ ಎರಡು ವರ್ಷದ ನಂತರ, ಅಂದರೆ 2006ರಲ್ಲಿ ಸಿಸ್ಟರ್ಸ್ ರವರು ಶಾಲೆಯನ್ನು ಆರಂಭಿಸಿದರು. ನಾರಾಯಣಪುರ ಊರಲ್ಲಿ ಬಾಡಿಗೆ ಮನೆ ತೆಗೆದುಕೊಂಡು ಶಾಲೆಯನ್ನು ಆರಂಭಿಸಿದರು. ಫೆಬ್ರವರಿ 7, 2009 ರಂದು ಹೊಸ ಶಾಲಾ ಕಟ್ಟಡವನ್ನು ಧಮಾಧ್ಯಕ್ಷರಾದ ಪೂಜ್ಯ ರಾಬರ್ಟ್ ಮೈಕಲ್ ಮಿರಾಂದ ಆಶೀರ್ವದಿಸಿದರು. ಸಿಸ್ಟರ್ಸ್ ಆಫ್ ಸೈಂಟ್ ಆನ್ಸ್  ಆಫ್ ಪ್ರೋವಿಡೆನ್ಸ್ ಸುಪೀರಿರ್ ಜನರಲ್ ಉದ್ಘಾಟಿಸಿದರು. ಪ್ರಸ್ತುತ ಸರಿ ಸುಮಾರು 1,500 ಮಕ್ಕಳು ಈ ಶಾಲೆಯಲ್ಲಿ ವಿಧ್ಯಾಭ್ಯಾಸವನ್ನು ಮಾಡುತ್ತಿದ್ದಾರೆ.

**ಬಸವಕಲ್ಯಾಣದಲ್ಲಿ ಧರ್ಮ ಪ್ರಚಾರ:** ಜೂನ್ 19,  2018 ಪೂಜ್ಯ ರಾಬರ್ಟ್ ಮೈಕಲ್ ಮಿರಾಂದರವರು, ಫಾದರ್ ಕ್ಲೇರಿ ರವರನ್ನು ಮೊದಲ ಧರ್ಮ ಪ್ರಚಾರಕನ್ನಾಗಿ ಬಸವಕಲ್ಯಾಣದಲ್ಲಿ, ಗುರುಗಳನ್ನಾಗಿ ಸೇವೆ ಮಾಡಲು, ಸೇವೆಯನ್ನು ಆರಂಭಿಸಲು ನೇಮಿಸಿದರು. ಫಾದರ್ ಕ್ಲೇರಿ ಬಾಡಿಗೆ ಮನೆಯಲ್ಲಿದ್ದು ಸೇವೆಯನ್ನು ಆರಂಭಿಸಿದರು. ಬಸವಕಲ್ಯಾಣದಲ್ಲಿ ಮೊದಲ ಧರ್ಮಗುರುಗಳಾಗಿದ್ದರಿಂದ, ಫಾದರ್ ಕ್ಲ್ಯಾರಿ ಅನೇಕ ಧಾರ್ಮಿಕ, ಸಾಮಾಜಿಕ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಜನರ ಮದ್ಯೆ ಸೇವೆಯನ್ನು ಆರಂಭಿಸಿದರು. ಮುಚ್ಚಳಾಂಬಕ್ಕೆ ಸೇರಿದ ಗೋಕುಲ್ ಹಾಗೂ ಕಿಟ್ಟ ಹಳ್ಳಿಗಳ ಪಾಲನಾ ಸೇವೆ ಮಾಡಿದರು. ಹೀಗೆ ಬಸವಕಲ್ಯಾಣದ ಪಟ್ಟಣ ಹಾಗೂ ಹಳ್ಳಿಗಳ ಸೇವೆಯು, ಈ ಮೂಲಕ ಆರಂಭವಾಯಿತು. ತದನಂತರ ಮುಂದಿನ ದಿನಗಳಲ್ಲಿ ಸಂತ ಅಂತೋಣಿ ಬಾಲಕಲ್ಯಾಣ ಆಶ್ರಮವು, ಬಡ ಮಕ್ಕಳ ಶಿಕ್ಷಣಕ್ಕಾಗಿ ಹಾಸ್ಟೆಲನ್ನು ತೆರೆಯಲಾಯಿತು. ಅದೇ, ರೀತಿ ಸತ್ಯಾನುಭವ ಅಂತರ್ಧರ್ಮೀಯ ಸಂವಾದ ಕೇಂದ್ರವು ಸ್ಥಾಪಿಸಲಾಯಿತು.

**ಸತ್ಯಾನುಭಾವ ಅಂತರ್ಧರ್ಮೀಯ ಸಂವಾದ ಕೇಂದ್ರ:** ಸತ್ಯಾನುಭವ ಅಂತರ್ಮಿಯ ಸಂವಾದ ಕೇಂದ್ರವನ್ನು ಫಾದರ್ ಬೆಂಜಮಿನ್ ಡಿಸೋಜಾ ರವರ ನಾಯಕತ್ವದಲ್ಲಿ ಧರ್ಮಾಧ್ಯಕ್ಷರಾದ ಪೂಜ್ಯ ರಾಬರ್ಟ್ ಮೈಕಲ್ ಮಿರಾಂದಾರವರು ಜುಲೈ 10, 2009ರಲ್ಲಿ ಉದ್ಘಾಟಿಸಿದರು. 2009 ರಿಂದ ಫಾದರ್ ಬೆಂಜಮಿನ್ ರವರು ಸತ್ಯಾನುಭವದ ಸ್ಥಾಪಕ ನಿರ್ದೇಶಕರಾಗಿದ್ದರು. ಫಾದರ್ ಬೆಂಜಮೀನ್ ನಂತರ ಫಾದರ್ ಜೋಸೆಫ್ ರೊಡ್ರಿಗಸ್ ಕೇಂದ್ರದ ನಿರ್ದೇಶಕರಾಗಿ ಮೇ 4, 2014 ರಿಂದ ಸೇವೆಯನ್ನು ಮುಂದುವರಿಸಿದ್ದರು. ಸತ್ಯಾನುಭವ ಅಂತರ್ಮಿಯ ಸಂವಾದ ಕೇಂದ್ರದ ಉದ್ದೇಶಗಳು: ನಾವೆಲ್ಲರೂ ಒಂದೇ, ಒಬ್ಬರೇ ಭಗವಂತನ ಮಕ್ಕಳು. ಒಂದೇ ಸೃಷ್ಟಿ ನಮ್ಮದು. ಎಲ್ಲರದು ಮಾನವ ಜನ್ಮ. ಅದೇ ರೀತಿ, ಬೇರೆ ಧರ್ಮಗಳಾದ ಹಿಂದೂ, ಜೈನ, ಬುದ್ಧ, ಪಾರ್ಸಿ, ಬಸವ ತತ್ವ ಗಳಲ್ಲಿರುವ  ಒಳ್ಳೆಯ ಸಂಗತಿಗಳನ್ನು ಸತ್ಯ ಹಾಗೂ ಶ್ರೀಮಂತ ಧಾರ್ಮಿಕ ಮೌಲ್ಯಗಳನ್ನು  ಆರಿಸಿಕೊಂಡು, ಫಾದರ್ ಬೆಂಜಮೀನ್ ರವರು ಅನೇಕ ಧರ್ಮಗಳ ಜನರ ಭೇಟಿ ಮಾಡಿ, ಪ್ರತಿ ತಿಂಗಳು ಕಾರ್ಯಕ್ರಮಗಳನ್ನು ಮಾಡಿ, ಪ್ರೀತಿಯ ಸತ್ಯ ದೇವರ ಅನುಭವ ಪಡೆಯಲು ಅವಕಾಶ ಮಾಡುತ್ತಿದ್ದರು.

**ಸಂತ ಅಂತೋಣಿ ಬಾಲಕಲ್ಯಾಣ ಆಶ್ರಮ:** ಬಸವಕಲ್ಯಾಣದಲ್ಲಿ ಕಂಡು ಬರುವ ಹಾಸ್ಟೆಲ್–ಸಂತ ಅಂತೋಣಿ ಬಾಲಕಲ್ಯಾಣ ಆಶ್ರಮ ಈ  ಆಶ್ರಮದಲ್ಲಿ, ಬಡ ಮಕ್ಕಳಿಗೆ, ತಂದೆ ತಾಯಿಗಳಿಲ್ಲದ ಮಕ್ಕಳಿಗೆ, ವಿದ್ಯೆಯನ್ನು ಕೊಡುವ ತಾಣವಾಗಿದೆ . ಜಾತಿ ಮತ ಧರ್ಮ ಎನ್ನದೆ, ಎಲ್ಲ ಬಡ ಮಕ್ಕಳು ಆಶ್ರಮದಲ್ಲಿ ನಿಂತು ವಿದ್ಯಾಭ್ಯಾಸ ಮಾಡುವ ಅವಕಾಶ ಕೊಡಲಾಗಿದೆ. ಈ ತನಕ ಸುಮಾರು 200 ಮಕ್ಕಳು ಹಾಸ್ಟೆಲ್ ನಲ್ಲಿ ನಿಂತು  ಸರಕಾರಿ ಶಾಲೆ ಹಾಗೂ ಖಾಸಾಗಿ  ಶಾಲೆಗಳಿಗೆ ಹೋಗಿ ವಿದ್ಯಾಭ್ಯಾಸವನ್ನು ಪಡೆದಿದ್ದಾರೆ. ಪ್ರಸ್ತುತ ಕೇವಲ ಗಂಡು ಮಕ್ಕಳಿಗೆ ಹಾಸ್ಟೆಲ್ ಸೌಲಭ್ಯವನ್ನು ಕೊಡಲಾಗುತ್ತದೆ.


IHS
First Holy Communion
Congratulations..
Avin Kiran
Best Wishes From
Dr. Hany Kiran & Dr. Kiran George
Mother of Divine Grace Cathedral, Kalaburagi


Holy Sacrament of Baptism
Reeshel Viva D'Souza
Best Wishes From
Mr Royal Ronson & Mrs Wilma D'Souza
D'Souza Family, Phajeeru, Mangaluru